ಪುಸ್ತಕ ಪ್ರಪಂಚ

ಸಂಪುಟ ೪೭ ೧೯೬೨ ಡಿಸೆಂಬರ್ ಸಂಚಿಕೆ ೫



ವಿಷಯ ಸೂಚಿ

ಮುಖಚಿತ್ರ : ಯೇಸು ಜನನ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೭ ಡಿಸೆಂಬರ್ ೧೯೮೨ ಸಂಚಿಕೆ ೫

ಕರ್ನಾಟಕದ ಕಬೀರ ಶಿಶುನಾಳ ಶರೀಫ ಸಾಹೇಬರು

ಅನಾದಿಕಾಲದಿಂದಲೂ ಕರ್ನಾಟಕವು ವಿಭೂತಿಪುರುಷರ ನಾಡು. ನೂರಾರು ಜನ ಸಂತರು, ಋಷಿಪುಂಗವರು ಬಾಳಿ ಬದುಕಿದ್ದಾರೆ. ಅಜ್ಞಾನದ ಹಾದಿಯಲ್ಲಿ ನಡೆಯುವ ಮತ್ತು ಅಶಾಂತಿಯ ವಾತಾವರಣದಲ್ಲಿ ಬಳಲುವ ಮಂದಿಗೆ ಜ್ಞಾನದ ಹಾದಿಯಲ್ಲಿ ನಡೆಸಿ ಸುಖಮಯ ಬಾಳುವೆಯನ್ನು ನಡೆಸುವ ಬಗೆಯನ್ನು ತೋರಿದ್ದಾರೆ. ಇಂತಹವರಲ್ಲಿ ನಮ್ಮ ಕರ್ನಾಟಕ ಕಬೀರ ಎಂದೇ ಪ್ರಸಿದ್ಧಿಹೊಂದಿರುವ ಶಿಶುನಾಳ ಶರೀಫ ಸಾಹೇಬರೂ ಒಬ್ಬರು.

ಶರೀಫರು, ತಮ್ಮ ನಡತೆಗಳಿಂದ ಇಡೀ ಮಾನವಕುಲಕ್ಕೇ ತಿಲಕಪ್ರಾಯರಾದವರು. ಜಾತಿ, ಮತ, ಪಂಥಗಳನ್ನು ಮೀರಿ ಇವರ ವ್ಯಕ್ತಿತ್ವ ಬೆಳೆಯಿತು. ಇವರು ನಮಗೆ ಪ್ರಾತಃಸ್ಮರಣೀಯರು. "ಇವರು ಆಧ್ಯಾತ್ಮವನ್ನೇ ಬಾಳಬುತ್ತಿಯನ್ನಾಗಿ ಮಾಡಿಕೊಂಡು ಉಂಡವರು. ಬಡತನ — ಸಿರಿತನ, ದುಃಖ ಸಂತೋಷ ಲಾಭ ಅಲಾಭಗಳನ್ನೆಲ್ಲಾ ಒಂದಾಗಿ ಭಾವಿಸಿದವರು. ಇವರು ಪರಮಾತ್ಮ ರಾಜತೇಜದಲ್ಲಿ ಬಾಳಿದವರು" ಎಂದು ಸುಪ್ರಸಿದ್ಧ ಸಾಹಿತಿ ರಾ.ಯ. ಧಾರವಾಡಕರ ಅವರು ನುಡಿದಿದ್ದಾರೆ.

ಶಿಶುನಾಳ ಶರೀಫ ಸಾಹೇಬರ ಪೂರ್ಣ ಹೆಸರು—ಮಹಮ್ಮದ ಶರೀಫ ಎಂದು. ಶಿಶುನಾಳ ಉತ್ತರ ಕರ್ನಾಟಕದ ಧಾರವಾಡ ಜಿಲ್ಲೆಯ ಸಿಗ್ಗಾಂವಿ ತಾಲ್ಲೂಕಿನ ಒಂದು ಸಣ್ಣ ಗ್ರಾಮ. ಗುಡಗೇರಿ ರೈಲು ನಿಲ್ದಾಣದಿಂದ ೩-೪ ಮೈಲಿ ಅಂತರದಲ್ಲಿದೆ. ಶರೀಫರ ತಂದೆ ಹಜರತ ಇಮಾಮ ಮತ್ತು ತಾಯಿ ಹಜ್ಜುಮಾ. ಶರೀಫ ಎಂಬುದು ಮನೆತನದ ಹೆಸರು. ತಂದೆ ಇಮಾಮರು ಅಲ್ಲಾನಲ್ಲಿ ಅನನ್ಯ ಭಕ್ತಿಯುಳ್ಳವರು. ಕೃಷಿಕರ್ಮದಿಂದಲೂ, ಸಮಾಜ ಸೇವೆಯಿಂದಲೂ ಕರ್ಮಯೋಗೀ ಜೀವನವನ್ನು ನಡೆಸುತ್ತಿದ್ದರು. ತಾವು ತಿಳಿದ

ಜೋತಿಷ್ಯ ಹಾಗೂ ಗಿಡಮೂಲಿಕೆ ಔಷಧದ ಪ್ರಯೋಗದಿಂದ ಜನಹಿತವನ್ನು ಬಯಸುತ್ತಿದ್ದರು. ಇವರಿಗೆ ಅನುರೂಪಳಾದ ಹೆಂಡತಿ ಹಜ್ಜುಮಾ.

ಹಲಗೂರು ಹಜರತ ಖಾದರಶಾ ಸಾಧುಗಳ ಬಳಿಗೆ ಆಗಾಗ ತಮ್ಮ ಮನಶ್ಯಾಂತಿಗಾಗಿ ದಂಪತಿಗಳು ಹೋಗಿಬರುತ್ತಿದ್ದರು. ಹಲವಾರು ವರ್ಷಗಳಾದರೂ ಮಕ್ಕಳಾಗಲಿಲ್ಲ. ಖಾದರಶಾರಲ್ಲಿ ಮನದಳಲನ್ನು ತೋಡಿಕೊಂಡರು. ಖಾದರಶಾ ಇವರನ್ನು ಹರಸಿದರು. ಇವರ ಹರಕೆಯು ಫಲವೇ ಎಂಬಂತೆ ಹಜ್ಜುಮಾ ಗರ್ಭವತಿಯಾದರು. ಕಾಲಕ್ರಮದಲ್ಲಿ ಒಂದು ಗಂಡು ಮಗುವಿಗೆ ಜನ್ಮವಿತ್ತರು. ಈ ಮಗುವೇ ಶರೀಫ. ಇವರ ಜನನ ಕ್ರಿ.ಶ. ೧೮೧೯ ಮಾರ್ಚ ೭ ರಂದು.

ಎಲ್ಲ ಮಕ್ಕಳಂತೆ ಬಾಲಕ ಶರೀಫ ಆಟ-ಪಾಠಗಳಲ್ಲಿ ತೊಡಗದೆ ಯಾವಾಗಲೂ ಏನನ್ನೋ ಚಿಂತಿಸುವರಂತೆ ಕಾಣುತ್ತಿದ್ದರು. ಶಾಲೆಗೆ ಎಂದೂ ತಪ್ಪಿಸುತ್ತಿರಲಿಲ್ಲ. ಆದರೆ ಹರಿಕಥೆ, ಭಜನೆ, ಸಾಧು ಸಂತರು ಇರುವೆಡೆಯಲ್ಲಿ ಇವರು ಹಾಜರಿರುತ್ತಿದ್ದರು. ಹೊಸದನ್ನು ಅರಿಯುವ ಹಂಬಲ ತುಂಬಿಕೊಂಡ ಬಾಲಕ ಎಲ್ಲವನ್ನೂ ಕೇಳಿ ತಿಳಿಯುತ್ತಿದ್ದನು. ತಾಯಿ ತಂದೆಯರು ಜಾತಿಯಲ್ಲಿ ಮುಸಲ್ಮಾನರಾದರೂ ಭಾರತ-ರಾಮಾಯಣ-ಕಥೆಗಳನ್ನೂ ಚರಿತ್ರೆಯ ವೀರರ ಕಥೆಗಳನ್ನೂ ತಿಳಿಸುತ್ತಿದ್ದರು. ಓದು ನಿರಂತರ ಸಾಗುತ್ತಿತ್ತು. ಅಂತೂ ಇಂತೂ ಕನ್ನಡ ಮುಲ್ಕಿ ಪರೀಕ್ಷೆ ಮುಗಿಸಿದರು—ಮುಂದೆ ತಾವು ಕಲಿತ ಶಾಲೆಯಲ್ಲಿಯೇ ಪಾಠ ಹೇಳುವ ಮಾಸ್ತರರಾದರು. ಈ ವೇಳೆಗಾಗಲೇ ಅನೇಕ ಶಾಸ್ತ್ರ ಗ್ರಂಥಗಳನ್ನು ಓದಿ ಮುಗಿಸಿದ್ದರು. ತಾಯಿಯ ಅಪಾರ ವಾತ್ಸಲ್ಯ, ತಂದೆಯ ತುಂಬುಮನದ ಪ್ರೋತ್ಸಾಹ, ಬಾಲಕ ಶರೀಫನನ್ನು ಮುನ್ನಡೆಸಿತು. ವಯಸ್ಸಿಗೆ ಮೀರಿದ ಬುದ್ಧಿ ಪಡೆದ ಶರೀಫರನ್ನು ಕಂಡವರೆಲ್ಲರೂ ಸಂತಸ ಪಡುವರೇ ಆಗಿದ್ದರು. ತಾನು ಕಂಡುಕೊಂಡ ನಿತ್ಯಸತ್ಯವನ್ನು ಪುಟ್ಟಪುಟ್ಟ ವಾಕ್ಯಗಳಲ್ಲಿ ಬರೆದು ಹಾಡುತ್ತಿದ್ದರು. ಸಾಧುಸಂತರ ಸಹವಾಸ, ರಾಮಾಯಣಾದಿ ಕಥೆಗಳ ವಾಚನ, ಬಹುರೂಪಿ ಆಟಗಳಲ್ಲಿ ಭಾಗವಹಿಸುವುದು, ಕಥೆ, ಕೀರ್ತನೆ, ಮೇಳಗಳೊಂದಿಗೆ ಆಗಾಗ ಇವರು ಹೇಳದೆ ಕೇಳದೆ ಹೋಗಿಬಿಡುತ್ತಿದ್ದರು. ಇದನ್ನು ನೋಡಿ ಇಮಾಮರು, ಶರೀಫರನ್ನು ಗೋವಿಂದಭಟ್ಟರಲ್ಲಿಗೆ ಕರದೊಯ್ದರು.

ಗೋವಿಂದಭಟ್ಟರು ಗುಡಗೇರಿ ಹತ್ತಿರದ ಕಳಸದವರು. ಇವರ ಪತ್ನಿ ಉಮಾಬಾಯಿ. ಇವರು ಶಕ್ತಿಯ ಉಪಾಸಕರೂ ಆಗಿದ್ದುದಲ್ಲದೆ, ಅನೇಕ ಪವಾಡಗಳನ್ನೂ ಮೆರೆಯಿಸುತ್ತಿದ್ದರೆಂದು ಹೇಳುತ್ತಾರೆ. ಸಂಸ್ಕೃತ ಪಾಠಶಾಲೆಯನ್ನೂ ಯೋಗಾಭ್ಯಾಸವನ್ನೂ ಇವರು ಉಚಿತವಾಗಿ ಇಂದಿನ ಯುವಕರಿಗೆ

ಹೇಳಿಕೊಡುತ್ತಿದ್ದರು. ಇವೆಲ್ಲದರ ಜೊತೆಗೆ ಶಾಲಾಮಾಸ್ತರಿಕೆಯೂ ಇವರ ವೃತ್ತಿಯಾಗಿತ್ತು. ಇವರು ಶರೀಫರನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದ ಸಂಗತಿ ಮನೋಜ್ಞವಾಗಿದೆ.

ಇಮಾಮರು ಶರೀಫರನ್ನು ಗೋವಿಂದಭಟ್ಟರಲ್ಲಿಗೆ ಕರೆದೊಯ್ದಾಗ ಭಟ್ಟರು, "ಶರೀಫಾ ನಿಮ್ಮ ಅಪ್ಪ ಯಾರೋ ?" ಎಂದರಂತೆ. ಆಗ, ಶರೀಫರು, "ನಿಮ್ಮ ಅಪ್ಪನೇ ನಮ್ಮ ಅಪ್ಪ" ಎಂದುತ್ತರವಿತ್ತರು. ಭಟ್ಟರಿಗೆ ಅತೀವ ಆನಂದವಾಯ್ತು. ಜೀವನದಲ್ಲಿ ಒಳ್ಳೆಯ ಶಿಷ್ಯನನ್ನು ಪಡೆಯುವುದೂ ಗುರುಗಳಾದಂತಹವರಿಗೆ ಅದೃಷ್ಟವೇ. ಮನೆಬಾಗಿಲಿಗೇ ಬಂದ ಶರೀಫರಂತಹ ಶಿಷ್ಯನನ್ನು ತ[illegible] ಹೃದಯದಲ್ಲಿಟ್ಟುಕೊಂಡರು, ಭಟ್ಟರು ಅಂದಿನಿಂದ ಶರೀಫರು ಗೋವಿಂದಭಟ್ಟರ ಶಿಷ್ಯರಾದರು. ಇವರ ಅಂತಿಮ ದಿನದವರೆಗೂ ಜಾತಿಯ ನೆರಳಿನ ಒಂದು ಗೆರೆಯೂ ಇವರ ಬಳಿ ಸುಳಿಯಲಿಲ್ಲ.

ಶರೀಫರು ಗುರುವಿನ ಗುಲಾಮರಾದರು, ಅವರನ್ನು ನೆರಳಿನಂತೆ ಹಿಂಬಾಲಿಸಿದರು. ಶಿಶುನಾಳರಲ್ಲಿ ಭಟ್ಟರಿಗೆ ಅಪಾರ ಪ್ರೀತಿ. ಅವನ ಕುತೂಹಲ ಬುದ್ಧಿಗೆ ಸರಿಯಾಗಿ ಪಾಠ ಮಾಡಿದರು, ಆಧ್ಯಾತ್ಮಕ ನೀರೆರೆದರು. ಗುರುಗಳನ್ನು ಕುರಿತು ಶರೀಫರು ಹೀಗೆ ನುಡಿದಿದ್ದಾರೆ—

> ನನ್ನೊಳಗೆ ನಾನೇ ತಿಳಕೊಂಡೆ। ನನಗೆ ಬೇಕಾದ ಗಂಡನ್ನ ಮಾಡಿಕೊಂಡೆ ॥
> ಗುರುಗೋವಿಂದನ ಪಾದ ಹಿಡಕೊಂಡೆ। ಗುರು ಉಪದೇಶ ಪಡಕೊಂಡೆ ॥

ಗುರುಗೋವಿಂದಭಟ್ಟರು ಶರೀಫರು ಯಾವಾಗಲೂ ಜೊತೆಯಾಗಿಯೇ ಇರುತ್ತಿದ್ದರು. ಸಾಮಾನ್ಯವಾಗಿ ಇವರ ಪಾಠವೆಲ್ಲ ಊರ ಹೊರಗಿನ ಹಾಳು ಮಂಟಪದಲ್ಲಿಯೋ ಮಠದಲ್ಲಿಯೋ ನಡೆಯುತ್ತಿತ್ತು. ಹಂತಹಂತವಾಗಿ ಶರೀಫರು ಸಾಧನೆಯ ಹಾದಿಯಲ್ಲಿ ಮುಂದೆ ಸಾಗುತ್ತಿದ್ದರು; ಕಾಂತಿ ಮೂಡುತ್ತಿತ್ತು. ಆಗಾಗ ಗುರು–ಶಿಷ್ಯರ ಸವಾರಿ ಗುಡಗೇರಿಯ ಕುಂಬಾರ ಮುದುಕಪ್ಪನ ಮನೆಯವರೆಗೂ ನಡೆಯುತ್ತಿತ್ತು. ಈ ಕುಂಬಾರನಿಗೊಬ್ಬ ಮಗಳು–ಬಸಮ್ಮ. ಶರೀಫರಿಗೆ, ನೀರು-ನಿಡಿ, ತಂಬಾಕು, ಗಾಂಜಾ ಸಿದ್ಧಪಡಿಸುವುದು, ಇವಳ ನಿತ್ಯ ಕಾಯಕ ಶರೀಫರಲ್ಲಿ. ಈಕೆಯ ದನಿ ಕೋಗಿಲೆಯ ಹಾಗೆ ಬಹು ಇಂಪು; ಆದರೆ ಅನಕ್ಷರಸ್ಥಳು. ಶರೀಫರು ತಾವು ರಚಿಸಿದ ಹಾಡುಗಳನ್ನು ಈಕೆಯ ಬಾಯಿಂದ ಹಾಡಿಸಿ ಕೇಳುತ್ತಿದ್ದರು. ಎಷ್ಟೋ ವೇಳೆ ಮೈಮರೆತು ಕೂತುಬಿಡುತ್ತಿದ್ದರು. ಒಮ್ಮೊಮ್ಮೆ ಶರೀಫರು ಸ್ಫೂರ್ತಿಗೊಂಡು, 'ಏ ಗುಂಡೀ, ಬಾ ಇಲ್ಲಿ ಕೇಳು, ಇದನ್ನು ಹಾಡಿ ತೋರಿಸು' ಎಂದು ಬಸಮ್ಮ

ನನ್ನು ಕರೆಯುತ್ತಿದ್ದರು. ಬಸಮ್ಮ ಆಗ ಶರೀಫರ ಹಾಡುಗಳಿಗೆ ತನ್ನ ಕಂಠಶ್ರೀಯಿಂದ ಜೀವ ತುಂಬಿ ಹಾಡುತ್ತಿದ್ದಳು.

ಗೋವಿಂದಭಟ್ಟರು ಶರೀಫರನ್ನು ನಿಧಾನವಾಗಿ ಬೇರೆಯಾಗಿಸಿದರು. ತಾವು ತಮ್ಮ ಕೆಲಸಕಾರ್ಯಗಳಲ್ಲಿ ತೊಡಗಹತ್ತಿದರು ಎಂದಿನಂತೆಯೆ. ಶರೀಫರು ಸ್ವಭಾವತಹ ನಿಷ್ಠುರರು. ಯಾವ ಮನೆಯಲ್ಲೂ ತಂಗುತ್ತಿರಲಿಲ್ಲ. ತಪ್ಪನ್ನು ಕಂಡರೆ ಮುಲಾಜಿಲ್ಲದೆ ಖಂಡಿಸುತ್ತಿದ್ದರು. ಹಾಳುಮಂಟಪ, ಗುಡಿ, ಇತ್ಯಾದಿ ಏಕಾಂತ ಸ್ಥಳಗಳಲ್ಲಿ ಇವರು ಇರುತ್ತಿದ್ದರು. ಮನಸ್ಸಿನ ಭಾವನೆಗಳಿಗೆ ತಟ್ಟನೆ ರೂಪ ಕೊಟ್ಟು ಹಾಡಿಬಿಡುತ್ತಿದ್ದರು. ಬಡತನ, ದುಃಖ, ನೋವು ನಲಿವುಗಳನ್ನು ಕಂಡು ಮರುಗುತ್ತಿದ್ದರು. ಸಮಾಜದ ಎಲ್ಲ ಸ್ತರಗಳ ಜನರಲ್ಲಿಯೂ ಬೆರೆತು ಅವರು ಆರೋಗ್ಯಕರವಾದ ಹಾಗೂ ಶಾಂತಮಯ ಬದುಕನ್ನು ನಡೆಸಲು ದಾರಿ ತೋರಿಸುತ್ತಿದ್ದರು, ಜಾತಿ, ಮತಗಳ ಗುಂಪುಗಾರಿಕೆ ಇವರಿಗೆ ಸರಿಕಾಣುತ್ತಿರಲಿಲ್ಲ. ಆದರೆ ಎಲ್ಲ ಧಾರ್ಮಿಕ ಸಮಾರಂಭಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

ಶರೀಫರ ಈ ಬಾಳಿಗೆ ತಂದೆ ತಾಯಂದಿರು ನೊಂದರು. ಅವರಿಗೆ ಮದುವೆಯನ್ನು ಮಾಡಿದರೆ ಮಗ ತಮ್ಮಂತೆ ಆಗಬಹುದು ಎಂದು ಬಗೆದು, ಕುಂದಗೋಳದ ಫಾತಿಮಾ ಎಂಬ ಕನ್ಯೆಯೊಡನೆ ಲಗ್ನ ಮಾಡಿದರು. ಆದರೆ, ಶರೀಫರು ಈ ಸಂಸಾರದ ಬಂಧನವನ್ನೂ ಕಿತ್ತೊಗೆದರು. ತಮ್ಮ ಪತ್ನಿಯಾದ ಫಾತಿಮಾಳಲ್ಲೂ, ಇವರು ಮಾತೆಯನ್ನು ಕಂಡರು. ಆಕೆಯನ್ನು ಪೂಜಿಸಿದರು. ತಾವರೆ ಎಲೆಯ ಮೇಲಿನ ನೀರಿನಂತೆ ಇವರು ಇದ್ದುಬಿಟ್ಟರು. ಫಾತಿಮಾರೂ ಸಹಾ ಪತಿಯನ್ನನುಸರಿಸಿದರು. ಪತಿಪ್ರೇಮ ತೊರೆದರು ಭಕ್ತಿ ತುಂಬಿಕೊಂಡರು. ಇದ್ದ ಅಲ್ಪ ಸ್ವಲ್ಪ ಸಂಸಾರದ ಮಮಕಾರವನ್ನೂ ಶರೀಫರು ತೊರೆದು ಬಿಟ್ಟರು.

ಇಸ್ಲಾಂ ಪದ್ಧತಿಯಂತೆ ಶರೀಫರು ಗಡ್ಡ ತೆಗೆಯುತ್ತಿರಲಿಲ್ಲ. ಮಧ್ಯ ವಯಸ್ಸಿಗೆ ಬಂದ ಮೇಲೆ ಮಾದಕ ಪಾನೀಯ, ತಂಬಾಕು, ಗಾಂಜಾ, ಸೇವಿಸುತ್ತಿದ್ದರು. ಇದರಿಂದಾಗಿ ಗೋವಿಂದ ಭಟ್ಟರಿಗೂ ಶರೀಫರಿಗೂ ಅನೇಕ ಸಲ ಹುಸಿ ಮುನಿಸಿನ ಜಗಳ ನಡೆಯುತ್ತಿದ್ದುದೂ ಉಂಟು. ಆದರೆ, ಮಾಂಸ ಪಾತ್ರ ಮುಟ್ಟುತ್ತಿರಲಿಲ್ಲ. ಶರೀಫರು ನೀಳ ದೇಹ, ಗೋಧಿ ಕೆಂಪು ಬಣ್ಣ, ದುಂಡು ಮುಖ, ನೀಳವಾದ ಮೂಗು, ದೊಡ್ಡ ಕಣ್ಣುಗಳು, ಅಗಲವಾದ ಕಿವಿ, ವಿಶಾಲ ವಕ್ಷ, ನೋಡಿದವರ ನಯನದ್ವಯಗಳನ್ನು ತುಂಬಿಕೊಳ್ಳುವ ರೂಪ ಅವ್ಯಕ್ತ ಕಾಂತಿ ಹೊಂದಿದ್ದಿತು.

ಇವರು ನುಡಿದಂತೆ ನಡೆದ ಮಹನೀಯರು. ಸಂತರೂ ಆಗಿದ್ದು, ಕವಿಮನ

ವನ್ನೂ ಹೊಂದಿದ್ದುದು ಇವರ ವ್ಯಕ್ತಿತ್ವದ ವಿಶೇಷ. ಇವರು ನುಡಿದುದೇ ಪದ್ಯಗಳಾದುವು, ನಡೆದುದೇ ದಾರಿಯಾಯಿತು. ಎಲ್ಲ ಊರುಗಳನ್ನೂ ಸುತ್ತಿದರು, ಜನಮನವನ್ನು ತುಂಬಿಕೊಂಡರು. ತಾವು ರಚಿಸಿದ ಪದ್ಯಗಳಿಗೆ ಅಂತ್ಯದಲ್ಲಿ ಶಿಶುನಾಳಧೀಶ ಎಂಬ ಅಂಕಿತ ಹಾಕಿದರು.

ಶಿಶುನಾಳರು ರಚಿಸಿದ ಹಾಡುಗಳಲ್ಲಿ ವೈವಿಧ್ಯತೆಯಿದೆ. ನೀತಿ ಪ್ರಧಾನವಾಗಿಯೂ ಇವೆ. ಇವರೊಬ್ಬ ಜನಪದ ಕವಿ. ಜನರಾಡುವ ದಿನಬಳಕೆಯ ಮಾತುಗಳನ್ನು ತಮ್ಮ ಪದ್ಯಗಳಲ್ಲಿ ತುಂಬಿದ್ದಾರೆ. ಶಿಶುನಾಳರ ಎಲ್ಲ ಪದ್ಯಗಳನ್ನೂ ಅನುಭವಗೀತ, ರಿವಾಯತ ಗೀತ, ಲಾವಣಿ ಪದ, ಹೋಳೀ ಪದ ಕಾಲಜ್ಞಾನ ಮತ್ತು ದಂಡಕ ಎಂದು ವಿಂಗಡಿಸಿದ್ದಾರೆ. ಶಿಶುನಾಳರ ಬಾಳಿನ ಬಗ್ಗೆ ಶ್ರೀಮತಿ ಲಲಿತಾ ಕೆರಿಮನೆಯವರು ಈ ರೀತಿ ನುಡಿದಿದ್ದಾರೆ.

ಶರೀಫರು ಒಂದೆಡೆ ಇರದೆ, ನಾಡಿನಲ್ಲೆಲ್ಲಾ ಸಂಚಾರ ಮಾಡುತ್ತಿದ್ದರು. ಅವರು ಹೆಚ್ಚಾಗಿ ಉತ್ತರ ಕರ್ನಾಟಕ ಮತ್ತು ಹೈದರಾಬಾದು ಕರ್ನಾಟಕದಲ್ಲಿ ಸಂಚರಿಸುತ್ತಿದ್ದರು. ಧಾರವಾಡ ಜಿಲ್ಲೆಯಲ್ಲಿ ಅವರ ಹೆಸರು ಕೇಳದ ಜನರೇ ವಿರಳ. ಅವರು ಯಾವುದೇ ಊರಿಗೆ ಹೋಗಲಿ ಅಲ್ಲಿ ಏನಾದರೊಂದು ಅಘಟಿತ ಘಟನೆ ನಡೆದು ಹೋಗುತ್ತಿತ್ತು. ಮನೆತನದಿಂದ ಕಡುಬಡವರು, ಬಾಳಿನ ಸಿಹಿ ಕಹಿಯನ್ನುಂಡವರು, ಇನ್ನೊಬ್ಬರ ದುಃಖವನ್ನು ಕಂಡು ಮರುಗುತ್ತಿದ್ದರು, ದುಷ್ಟರನ್ನು ಕಂಡು ಶಪಿಸುತ್ತಿದ್ದರು. ಅರಿಯದ ಜನ ಇವರನ್ನು ಕಂಡು ಹಾಸ್ಯ ಮಾಡಿದುದೂ ಉಂಟು. ಆದರೆ, ಅವರನ್ನು ಕುರಿತು ಏನೂ ನುಡಿಯುತ್ತಿರಲಿಲ್ಲ. ಇವರನ್ನರಿತವರು, ಶರೀಫರಿಗೆ ಯೋಗ್ಯ ಸತ್ಕಾರ ಮಾಡಿದುದೂ ಉಂಟು. ಧರ್ಮದ ಹೆಸರಿನಲ್ಲಿ ನಡೆಯುವ ಅನ್ಯಾಯವನ್ನು ಇವರು ತೀವ್ರವಾಗಿ ಪ್ರತಿಭಟಿಸುತ್ತಿದ್ದರು. ಸಮಾಜ ಸುಧಾರಣೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟರು. ಅವರ ಹಾಡುಗಳು ಹಿಂದೂ ಮುಸಲ್ಮಾನ್ ಐಕ್ಯತೆಗಾಗಿಯೇ ರಚಿತವಾದವುಗಳಂತೆ ಕಾಣುತ್ತವೆ. ಇಂದಿಗೂ ಧಾರವಾಡ ಜಿಲ್ಲೆಯಲ್ಲಿ ಹಾದುಹೋಗುವ ರೈಲು ಡಬ್ಬಿಗಳಲ್ಲಿ, ಭಿಕ್ಷುಕರ ಬಾಯಲ್ಲಿ ಶರೀಫರ ಹಾಡುಗಳನ್ನು ಕೇಳಬಹುದು.

ಶರೀಫರು ತಮ್ಮ ಕಾಲದಲ್ಲಿ ಸಾಧು ಸಂತರನ್ನೂ ಪುಣ್ಯಕ್ಷೇತ್ರಗಳನ್ನೂ ಜನರ ಆಚಾರ ವಿಚಾರಗಳನ್ನೂ ಬಲ್ಲವರಾಗಿದ್ದರು. ಊರ ಉತ್ಸವ ಜಾತ್ರೆಗಳಲ್ಲಿ ಭೇದ ವೆಣಿಸದೆ ಭಾಗವಹಿಸುತ್ತಿದ್ದರು. ಜನಜಾಗೃತಿಗೆ ಶ್ರಮಿಸಿದರು. ಮೂಢನಂಬಿಕೆ, ಅಜ್ಞಾನ ದಾರಿದ್ರ್ಯವನ್ನು ಕುರಿತು ಜನಮನವನ್ನು ತಿದ್ದುತ್ತಿದ್ದರು. ಹಲವು ಸಲ ಪವಾಡಗಳನ್ನೂ ಮಾಡುತ್ತಿದ್ದರು. ಎಲ್ಲ ಪ್ರಾಣಿಗಳನ್ನೂ ಒಂದೇ ಎಂದು

ಭಾವಿಸುತ್ತಿದ್ದರು. ತಮ್ಮ ಪದ್ಯಗಳಲ್ಲಿ ನಾಯಿ, ಕುರಿ, ಮಂಗ, ಪಾರಿವಾಳ, ಕಪ್ಪೆ, ಚೇಳು ಇತ್ಯಾದಿ ಪ್ರಾಣಿಗಳನ್ನು ಬಳಸಿದ್ದಾರೆ. ಶೀರ ಸಾಮಾನ್ಯವಾದ ವಸ್ತುಗಳನ್ನು ನೋಡಿ ಅವುಗಳ ಗುಣಗಳಿಗೆ ಆಧ್ಯಾತ್ಮದ ಆಲೋಚನೆಗಳನ್ನು ತುಂಬಿ ತಮ್ಮ ಪದ್ಯಗಳನ್ನು ರಚಿಸುತ್ತಿದ್ದರು. ಇವರು ಸಮಾಜದ ಜನಜೀವನದ ಗುಣದೋಷಗಳಿಗೆ ತಮ್ಮ ಪದ್ಯಗಳಿಂದ ಕನ್ನಡಿ ಹಿಡಿದಿದ್ದಾರೆ. ಜೀವನದ ಬಗೆಗೆ ಕಳಕಳಿಯನ್ನೂ, ಕಾರುಣ್ಯವನ್ನೂ, ಇಟ್ಟುಕೊಂಡಿದ್ದ ಇವರು ನೇರವಾದ ಭಾಷೆಯನ್ನೂ ಸರಳವಾದ ಪದಗಳನ್ನೂ ಬಳಸಿದ್ದಾರೆ. ಕಂಡ ಪಾರಿವಾಳದ ಚಲನೆಯಾಗಲಿ, ಮದುವೆಯಾಗಿ ಮೊತ್ತಮೊದಲಬಾರಿಗೆ ತೌರುಮನೆಯಿಂದ ಅತ್ತೆಯ ಮನೆಗೆ ಹೋಗುತ್ತಿರುವ ಹುಡುಗಿಯ ಭಾವನೆಯನ್ನಾಗಲಿ, ಇವರು ತಾವೇ ಆ ನೋವನ್ನು, ಆನಂದವನ್ನು ಪಡೆಯುತ್ತಿರುವರೇನೋ ಎಂಬ ತಾದಾತ್ಮ್ಯವನ್ನು ಹೊಂದಿ ಪದ್ಯಗಳನ್ನು ರಚಿಸಿದ್ದಾರೆ.

ಒಟ್ಟಾರೆ, ಶಿಶುನಾಳ ಶರೀಫರು ಒಬ್ಬ ಭಾವ ಜೀವಿ—ರಸ ಋಷಿ. ಕಿರಿದಾದ ಪದಗಳಲ್ಲಿ ಹಿರಿದಾದ ಅರ್ಥವನ್ನು ತುಂಬಿಕೊಂಡಿವೆ ಇವರ ಎಲ್ಲ ಪದ್ಯಗಳೂ ಸಹ. ಇವರು ಸಾಹಿತ್ಯದಲ್ಲಿ ಪರಿಣತಿಯನ್ನು ಪಡೆಯಲು ಪದ್ಯ ರಚಿಸಲಿಲ್ಲ. ಕಂಡ ನೋಟಕ್ಕೆ, ಕೇಳಿದ ವಿಷಯಕ್ಕೆ, ಪಡೆದ ನೋವು, ನಲಿವುಗಳಿಗೆ ಇವರಾತ್ಮ ಚೇತನ ನುಡಿಯಿತು. ಸ್ಫೂರ್ತಿಮೂಡಿತೆಂದರೆ ಸಾಕು ನಿರರ್ಗಳವಾಗಿ ನುಡಿಯುತ್ತಿದ್ದರು. ಇವರ ಪದ್ಯಗಳಲ್ಲಿ ಆದಿ, ಮಧ್ಯ ಮತ್ತು ಅಂತ್ಯ ಪ್ರಾಸಗಳನ್ನೂ ನಾವು ಗಮನಿಸಬಹುದು.

೭೦ ವರ್ಷಗಳ ತಮ್ಮ ಸಾತ್ವಿಕ ಜೀವನವನ್ನು ನಡೆಸಿದರು ಶರೀಫರು. ತಾವು ಹುಟ್ಟಿದ ದಿನದಂದೇ ಈ ದೇಹವನ್ನು ತ್ಯಜಿಸುವುದಾಗಿ ಜನರಿಗೆ ಮೊದಲೇ ತಿಳಿಸಿದ್ದರು. ಈ ಸಮಯದಲ್ಲಿ ಅವರದೇ ಎನ್ನುವ ಒಂದು ಬಿಡಿಗಾಸೂ ಅವರ ಹತ್ತಿರ ಇರಲಿಲ್ಲ. ಇವರ ಅಂತ್ಯವನ್ನು ತಲ್ಲೂರರಾಯನಗೌಡರು ಹೀಗೆ ಚಿತ್ರಿಸಿದ್ದಾರೆ.

ಶಿವಶರಣರ ಮಾರ್ಗವಿಂಬೆಗಳಾಗಿರುವುದರಿಂದ, ಆ ಸಂಪ್ರದಾಯದಲ್ಲಿ ಅಂದರೆ ವಿಭೂತಿ, ಪತ್ರಿ, ವೀಳೆ ಪೂಜೆ ಮಾಡಿಸಿಕೊಂಡು ಮುಗಿಸಿಕೊಳ್ಳುವ ಇಚ್ಛೆ ಇತ್ತು. ಈ ವಿಧಾನಗಳಿಗೆ ಜಂಗಮನ ಪಾದಪೂಜೆ ಮತ್ತು ಮಸ್ತಕದ ಮೇಲೆ ಪಾದವಿಟ್ಟುಕೊಳ್ಳುವುದೂ ಶಿವನ ಸಾಮೀಪ್ಯ—ಸಾಯುಜ್ಯ ಮಂತ್ರ ಪಠಣಗಳೂ ಅಗತ್ಯವಾಗಿದ್ದುವು. ಈ ಕೆಲಸಕ್ಕೆ ಯಾವ ಜಂಗಮನೂ ದೊರೆಯಲಿಲ್ಲ. ಸ್ಥಳೀಯರಾದ ಹಿರೇಮಠದ ಗುರುಬಸಯ್ಯನವರು ಇಂಥದ ಮಹಾನ್ ವ್ಯಕ್ತಿಯ

ತಲೆಯ ಮೇಲೆ ತಮ್ಮ ಪಾದವಿಡಲು ಒಪ್ಪದಾದರು. ಇತ್ತ, ಮುಸಲ್ಮಾನ ಸಹೋದರರು. ತಮ್ಮ ಸಂಪ್ರದಾಯದಂತೆ ಶರೀಫರ ಗಹನಕ್ರಿಯೆಗಳನ್ನು ನಡಿಸಲು ತವಕ ಪಟ್ಟರು. ಕೊನೆಗೆ, ಹಲವಾರು ಹಿರಿಯ ಹಿಂದೂ-ಮುಸಲ್ಮಾನ ಹಿರಿಯಾಳುಗಳ ಕೋರಿಕೆಯ ಮೇರೆಗೆ ಹಿರೇಮಠದ ಕರಬಸಯ್ಯನವರ ಪಾದ-ಮಸ್ತಕ ಪೂಜೆ ಮಾಡಿಸಿದರು. ಪೂಜೆ ಮುಗಿಯುತ್ತಿದ್ದಂತೆಯೇ, ಎಲ್ಲ ಭಕ್ತರು ನೋಡುತ್ತಿದ್ದಂತೆಯೇ, ಶರೀಫರು ಬಿಡತೀನಿ ದೇಹ ಬಿಡತೀನಿ! ಬಿಡತೀನಿ ದೇಹವ! ಕೊಡತೀನಿ ಭೂಮಿಗೆ!! ಎಂದು ಹಾಡುತ್ತಾ ತಾವು ದಿನಾಲು ಕೂಡುತ್ತಿದ್ದ ಕಟ್ಟೆಯ ಮೇಲೆ ಪದ್ಮಾಸನ ಹಾಕಿ, ತಮ್ಮ ಶಿಷ್ಯರನ್ನು ಕರೆಸಿ, ಹರಸಿ ೧೮೮೯ ಮಾರ್ಚಿ ೭ ರಂದು ಈ ಶರೀಫರು ಭೌತಿಕ ದೇಹವನ್ನು ತೊರೆದರು. ಹರಹರ ಮಹಾದೇವ—ಅಲ್ಲಾ ಹೋ ಅಕ್ಬರ್ ಎಂಬ ಘೋಷಣೆಗಳು ಮುಗಿಲು ಮುಟ್ಟಿದುವು.

ಇಂದಿಗೆ, ನಮ್ಮ ಕರ್ನಾಟಕದ ಕಬೀರ ಶಿಶುನಾಳ ಶರೀಫ ಸಾಹೇಬರು ದೈವಾಧೀನರಾಗಿ ೮೨ ವರ್ಷಗಳು ಸಂದಿವೆ. ಆದರೆ, ಅವರ ಹಾಡುಗಳು ನಮ್ಮ ನಾಡಿನ ಮೂಲೆ ಮೂಲೆಯಲ್ಲಿ ನಮಗೊಂದು ದಿವ್ಯ ಸಂದೇಶವನ್ನು ಸಾರುತ್ತಿವೆ. ನೆನೆದಾಗ ಅವರ ಹಾಡುಗಳು ನಮಗೆ ಕೇಳುತ್ತವೆ. ಹಾಡುಗಳನ್ನು ಕೇಳುತ್ತಿದ್ದಂತೆ, ನಮ್ಮ ಮನದ ಮುಂದೆ, ಶರೀಫರ ಭವ್ಯ—ದಿವ್ಯರಾಜ ತೇಜಮೂರ್ತಿ ಬಂದು ನಿಲ್ಲುತ್ತದೆ; ಹೃದಯ ಗದ್ಗದಿತವಾಗುತ್ತದೆ. ಇಂತಹವರ ಪದ್ಯಗಳನ್ನು ಅವರ ವ್ಯಕ್ತಿತ್ವವನ್ನು ಕಾದಂಬರಿ ಸಾಮ್ರಾಟ ದಿವಂಗತ ಅನಕೃ, ಸಂಗೀತಜ್ಞ ಕೃಷ್ಣಮೂರ್ತಿ, ಹೆಸರಾಂತ ಸಾಹಿತಿ—ಪತ್ರಕರ್ತ ಲಂಕೇಶರು, ಹರಿಕಥಾ ಪ್ರವೀಣ ಮಾಲೂರು ಸೊಣ್ಣಪ್ಪ ಮುಂತಾದವರು ಮೆಚ್ಚಿಕೊಂಡಿರುವುದರಲ್ಲಿ ನಮಗೆ ಹೆಮ್ಮೆಯಿದೆ. ಜೊತೆಗೆ ಅಭಿಮಾನವೂ ಉಂಟು. ಇವೆಲ್ಲವರ ಜೊತೆಗೆ ಶರೀಫರಂತಹ ಪುಣ್ಯಪುರುಷರನ್ನು ಪಡೆದ ನಮ್ಮ ಕರ್ನಾಟಕವು ಪವಿತ್ರ ಎಂಬ ಹೆಗ್ಗಳಿಕೆಯೂ ಇದೆ.

ಇತ್ತೀಚೆಗೆ, ಶಿಶುನಾಳ ಗ್ರಾಮದಿಂದ ಒಂದು ಕಿಲೋಮೀಟರ್ ದೂರದಲ್ಲಿ ಶರೀಫಗಿರಿಯ ನಿರ್ಮಾಣ ನಡೆದಿದೆ. ಶರೀಫರ ಗದ್ದುಗೆಯು ಅವರ ತಂದೆ-ತಾಯಿಯ ಗೋರಿಯ ಪಕ್ಕದಲ್ಲೇ ಆಗಿದೆ. ಗುರು ಗೋವಿಂದಭಟ್ಟರ ಗದ್ದುಗೆಯ ಪಕ್ಕದಲ್ಲಿ ಶರೀಫರ ಗದ್ದುಗೆಯೂ ಇದೆ. ಶರೀಫರ ಹೆಸರಿನಲ್ಲಿ ೧೯೬೯ ರಲ್ಲಿ ಒಂದು ಶಾಲೆಯು ಆರಂಭವಾಗಿದೆ. ಇದೇ ಆವರಣದಲ್ಲಿ ಧ್ಯಾನಮಂದಿರ, ವಸತಿಗೃಹ, ಆಟದ ಬಯಲು, ಗ್ರಂಥಾಲಯಗಳು ನಿರ್ಮಾಣಗೊಂಡಿವೆ. ಇದೊಂದು ಪವಿತ್ರ

ಯಾತ್ರಾ ಸ್ಥಳವಾಗಿಬಿಟ್ಟಿದೆ. ಪ್ರತಿವರ್ಷ ಮಾರ್ಚಿ ತಿಂಗಳ ಶಿವರಾತ್ರಿ ಕಳೆದ ೧೦ ನೇ ದಿನಕ್ಕೆ ದೊಡ್ಡ ಜಾತ್ರೆಯೇ ನಡೆಯುತ್ತದೆ. ೫೦ ಸಾವಿರಕ್ಕೂ ಹೆಚ್ಚು ಜನ ಭಕ್ತರು ನೆರೆಯುತ್ತಾರೆ. ಶರೀಫರನ್ನು ಪೂಜಿಸುತ್ತಾರೆ—ಶರೀಫ ಅಲಕೀ ರೋಷ ಕಾರ ಹದೀನ್—ಹರ ಹರ ಮಹಾದೇವ ಎಂಬ ಘೋಷಣೆಗಳೊಂದಿಗೆ ಪೂಜೆ ವಿಜೃಂಭಣೆಯಿಂದ ನಡೆಯುತ್ತದೆ. ಹಿಂದೂ-ಮುಸಲ್ಮಾನ ಬಂಧುಗಳ ಭಾವೈಕ್ಯತೆಯು ಭಕ್ತಿಯ ಹೊಳೆ ಹರಿಯುತ್ತದೆ.

ಎಸ್. ದಕ್ಷಿಣಾಮೂರ್ತಿ



ರಚನಾತ್ಮಕ ಕಾರ್ಯಕ್ರಮದಲ್ಲಿ ಅಸ್ಪೃಶ್ಯತಾ ನಿವಾರಣೆಯ ಸ್ಥಾನವು ಇದು ಸಂಪೂರ್ಣ ಪ್ರೇಮದ ಕಾರ್ಯಕ್ರಮ. ಈ ದೃಷ್ಟಿಯಿಂದಲೇ ನಾವು ರಚನಾತ್ಮಕ ಕಾರ್ಯಕ್ರಮವನ್ನು ಅಧಿಕಾಧಿಕವಾಗಿ ಸಾಧಿಸುವ ಪ್ರಯತ್ನವನ್ನು ಅವಶ್ಯವಾಗಿ ಮಾಡಬೇಕಾಗಿದೆ.

—ಗಾಂಧೀಜಿ

ಗರ್ವದಿಂದ ಮಾಡುವ ಭಕ್ತಿ, ದ್ರವ್ಯದ ಕೇಡು, ನಡೆಇಲ್ಲದ ನುಡಿ, ಅರಿವಿಗೆ ಹಾನಿ ಕೊಡದೇ ತ್ಯಾಗಿ ಎನಿಸಿಕೊಂಬುವದು, ಮುಡಿಇಲ್ಲದ ಶೃಂಗಾರ.

—ಆಯ್ದಕ್ಕಿ ಮಾರಯ್ಯ

ಒಳಿತು ಕೆಡಕುಗಳೆರಡೂ ಈ ಪೃಥ್ವಿ ಎಂಬ ಹೊಲದಲ್ಲಿ ಒಟ್ಟಾಗಿ ಬೆಳೆಯುತ್ತವೆ. ಆಯಾ ಬೆಳೆ ಬಿತ್ತಿದವರಿಗೆ ಆಯಾ ಫಲ ದೊರೆಯುತ್ತದೆ.

—ಮಿಲ್ಟನ್

ವಯಸ್ಕರ ಶಿಕ್ಷಣದಲ್ಲಿ ಮಧ್ಯದಲ್ಲಿಯೇ ಕೇಂದ್ರ ಬಿಡುವವರ ಸಮಸ್ಯೆ

ಶಾಲೆಗಳು ಎಂದಿನಿಂದ ಆರಂಭವಾದವೋ ಅಂದಿನಿಂದಲೂ ಮಧ್ಯದಲ್ಲಿಯೇ (ಅವಧಿ ಪೂರೈಸದೆ) ಶಾಲೆ ಬಿಡುವವರ ಸಮಸ್ಯೆ ಬೆಳೆದು ಬಂದಿದೆ. ನೂರು ವಿದ್ಯಾರ್ಥಿಗಳು ಪ್ರಾಥಮಿಕ ಶಾಲೆಗೆ ದಾಖಲಾದರೆ ೭ನೇ ತರಗತಿ ಶಿಕ್ಷಣವನ್ನು ಪೂರೈಸುವುದರಲ್ಲಿ, ಅವರ ಪೈಕಿ ಸುಮಾರು ೬೦ ಮಂದಿ ಮಧ್ಯದಲ್ಲಿಯೇ ಶಾಲೆಗೆ ಶರಣು ಹೊಡೆಯುತ್ತಾರೆ ಎಂಬುದು ಇತ್ತೀಚಿನ ಅಂದಾಜು. ಸುವ್ಯವಸ್ಥಿತ ಆಡಳಿತ ವ್ಯವಸ್ಥೆ, ಹಾಜರಾತಿ, ಪರೀಕ್ಷೆ, ಮನೆಯವರ ನಿರ್ಬಂಧ ಇತ್ಯಾದಿ ರೀತಿಯ ಅಂಕೆ ಅಂಕುಶಗಳು, ಕೋಟ್ಯಂತರ ರೂಪಾಯಿಗಳ ವೆಚ್ಚ, ಬೋಧನಾ ವಿಧಾನದಲ್ಲಿ ನವ ನವೀನ ಆಕರ್ಷಕ ವಿಧಾನಗಳ ಆವಿಷ್ಕಾರಗಳು, ಪರಿಷ್ಕಾರಗಳು ಮತ್ತು ಅವುಗಳ ಅಳವಡಿಕೆ, ಇವೆಲ್ಲ ಅಲ್ಲದೆ ಈ ಶಿಕ್ಷಣ ಭವಿಷ್ಯದಲ್ಲಿ ಕೆಲಸ ದೊರಕಿಸಿಕೊಳ್ಳಲು ಒಂದು ರಹದಾರಿ ಪತ್ರವೆಂಬ ಭಾವನೆ, ಇಷ್ಟೆಲ್ಲಾ ಇದ್ದು, ಈ ಔಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿಯೇ ಶೇ॥ ೬೦ ರಷ್ಟು ಶಾಲೆ ಬಿಡುವವರ ಸಮಸ್ಯೆ ಕಂಡು ಬಂದರೆ, ಮೇಲಿನ ಅನುಕೂಲಗಳಾವುವೂ ಸೂಕ್ತ ಮಟ್ಟದಲ್ಲಿಲ್ಲದ್ದು, ಉಪಾಧ್ಯಾಯ ಕೌಶಲ್ಯವನ್ನೇ ಮೂಲ ಬಂಡವಾಳವಾಗುಳ್ಳ ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಮಧ್ಯದಲ್ಲಿಯೇ ಶಾಲೆ ತೊರೆಯುವವರ ಸಮಸ್ಯೆ ಇನ್ನೂ ಭೀಕರವಾಗಿದ್ದಲ್ಲಿ ಆಶ್ಚರ್ಯಕರವೇನಲ್ಲ.

ಈಗ ನಡೆಯುತ್ತಿರುವ ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ಕೇಂದ್ರ ಒಂದಕ್ಕೆ ವಯಸ್ಕ ವಿದ್ಯಾರ್ಥಿಗಳ ಗರಿಷ್ಠ ಮಿತಿ ೩೦ ಎಂದು ಇದೆ. ಎಲ್ಲಾ ಕೇಂದ್ರಗಳಲ್ಲಿಯೂ ಆರಂಭದಲ್ಲಿ ದಾಖಲಾಗುವ ವಯಸ್ಕ ವಿದ್ಯಾರ್ಥಿಗಳ ಸಂಖ್ಯೆ ೩೦ ಇದ್ದೇ ಇರುತ್ತದೆ, ಸಾಮಾನ್ಯವಾಗಿ. ಕೆಲವೆಡೆ ಈ ಸಂಖ್ಯೆ ೩೦ ಅನ್ನೂ ಮೀರಿ ಹೆಚ್ಚು ಜನ ಕೇಂದ್ರಕ್ಕೆ ಹಾಜರಾಗಲು ಇಚ್ಛೆಯುಳ್ಳವರಾಗಿರುವುದು ವ್ಯಕ್ತಪಟ್ಟಿದೆ. ಆದರೆ ಒಂದೆರಡು ತಿಂಗಳು ಗತಿಸಿದ ನಂತರ ಈ ಸಂಖ್ಯೆಯಲ್ಲಿ ಇಳಿತ ಕಂಡು ಬಂದು ಐದು ಆರನೇ ತಿಂಗಳಲ್ಲಿ ಈ ಸಂಖ್ಯೆ ಸುಮಾರು ೧೫ ರಿಂದ ೧೦ಕ್ಕೆ ಸರ್ವೇಸಾಮಾನ್ಯವಾಗಿ ಇಳಿಯುತ್ತದೆ. ಇದು ಬಹುತೇಕ ಕೇಂದ್ರಗಳಲ್ಲಿ ಕಂಡು ಬಂದಿರುವ ಅಂಶ. ಇದಕ್ಕೆ ಅಪವಾದವಾಗಿ ಕೆಲವೆಡೆ ಇನ್ನೂ ಹೆಚ್ಚಿನ

ಸಂಖ್ಯೆಯ ಹಾಜರಾತಿ ಅಥವಾ ಇನ್ನೂ ಕಡಿಮೆಯ ಹಾಜರಾತಿಯೂ (ಕೆಲವು ಕಡೆ ಸ್ತ್ರೀಯರಿಗಾಗಿ ಇರುವ ಕೇಂದ್ರಗಳಲ್ಲಿ ಈ ಸಂಖ್ಯೆ ೫) ಇರುವ ಸಂಭವವೂ ಉಂಟು. ಆದರೂ ಹೆಚ್ಚಿನ ಕೇಂದ್ರಗಳಲ್ಲಿ ಈ ಸಂಖ್ಯೆ ೧೫ ರಿಂದ ೧೮ ಅಥವಾ ಹದಿನೈದರಿಂದ ಇಪ್ಪತ್ತರೊಳಗೆ ನಿಲ್ಲುವುದು ಕಂಡು ಬರುತ್ತದೆ. ಹಾಗಾದರೆ ಉಳಿದ ೧೦-೧೫ ಮಂದಿ ಕೇಂದ್ರವನ್ನು ತೊರೆಯಲು ಕಾರಣವೇನು ಎಂಬುವದರ ಬಗ್ಗೆ ಅಧ್ಯಯನ ನಡೆಸಿ ಸೂಕ್ತ ನಿವಾರಣೋಪಾಯಗಳನ್ನು ಕೈಗೊಳ್ಳಬೇಕು. ಇಲ್ಲವಾದಲ್ಲಿ ಹಣ, ಕಾಲ ಮತ್ತು ಮಾನವ ಶಕ್ತಿಯ ದುರ್ವ್ಯಯ ಆಗುತ್ತದೆ. ಹಾಗೂ ನಿಶ್ಚಿತ ಅವಧಿಯಲ್ಲಿ ನಿರ್ದಿಷ್ಟ ಗುರಿ ತಲುಪ ಲಾಗುವುದಿಲ್ಲ.

ಔಪಚಾರಿಕ ಶಿಕ್ಷಣದಲ್ಲಿ ಮಧ್ಯಂತರದಲ್ಲಿ ಶಾಲೆ ತೊರೆಯುವವರ ಸಮಸ್ಯೆ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆ. ೧೯೭೩ರ ಸುಮಾರಿನಲ್ಲಿಯೇ ಶ್ರೀಯುತರಾದ ಜೆ. ವಿ. ನಾಯಕ್, ಗಾಡ್ಗಿಲ್, ದಂಡೇಕರ್ ಮುಂತಾದವರು ಈ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಇತ್ತೀಚಿನ ಅಧ್ಯಯನವಾಗಿ ಶ್ರೀಯುತ ಚೌಧರಿಯವರ ಮತ್ತು ಎನ್.ಸಿ.ಇ.ಆರ್.ಟಿ. ಸಂಸ್ಥೆಯ ಸಂಶೋಧನೆಗಳನ್ನು ಉಲ್ಲೇಖಿಸಬಹುದು. ಇವರುಗಳು ಈ ಸಮಸ್ಯೆಗೆ ಗೊತ್ತು ಹಚ್ಚಿರುವ ಕಾರ ಕಾಂಶಗಳಲ್ಲಿ ಹೆಚ್ಚಿನವು ಒಂದಲ್ಲಾ ಒಂದು ವಿಧದಲ್ಲಿ ಈ ವಯಸ್ಕ ಶಿಕ್ಷಣ ಕ್ಷೇತ್ರಕ್ಕೂ ಅನ್ವಯಿಸುವುದರಿಂದ ಇವರುಗಳ ಅಧ್ಯಯನದಲ್ಲಿ ವ್ಯಕ್ತಪಟ್ಟ ಕಾರಕಾಂಶಗಳನ್ನೇ ಹಿನ್ನೆಲೆಯಾಗಿಟ್ಟುಕೊಂಡು ಈ ಲೇಖನದಲ್ಲಿ ಕೇಂದ್ರ ಬಿಡುವವರ ಸಮಸ್ಯೆ ಬಗ್ಗೆ ವಿವೇಚಿಸಲು ಪ್ರಯತ್ನಿಸಲಾಗಿದೆ.

ಶ್ರೀಯುತ ಚೌಧರಿಯವರು ತಮ್ಮ ಅಧ್ಯಯನದಲ್ಲಿ ಈ ಸಮಸ್ಯೆಗೆ ಕಾರಣ ಗಳನ್ನು ಕೆಳಕಂಡಂತೆ ಪಟ್ಟಿ ಮಾಡುತ್ತಾರೆ.

೧) ಆರ್ಥಿಕ ಕಾರಣಗಳು.
೨) ಶಿಕ್ಷಣದ ಬಗ್ಗೆ ಔದಾಸೀನ್ಯ.
೩) ಸಾಮಾಜಿಕ ಸಂಪ್ರದಾಯ ಮತ್ತು ನಡವಳಿಕೆಗಳು.
೪) ಹಾಜರಾತಿಯ ಅಕ್ರಮಗಳು (ಡಿಸ್‌ಕಂಟಿನ್ಯೂಯಸ್ ಅಟೆಂಡೆನ್ಸ್).
೫) ವಯಸ್ಸಿನ ನಾಚಿಕೆ.
೬) ತರಗತಿಯ ಸನ್ನಿವೇಶಗಳು.
೭) ಶಿಕ್ಷಣ ವಿಧಾನ ಮತ್ತು ಪಠ್ಯಕ್ರಮ.
೮) ಇತರೆ ಕಾರಣಗಳು.

೧. ಆರ್ಥಿಕ ಕಾರಣಗಳು:

ಇದೊಂದು ಪ್ರಮುಖ ಕಾರಣವಾಗಬಲ್ಲದು. ಸಾಮಾನ್ಯವಾಗಿ ಹೆಚ್ಚಿನ ಅನಕ್ಷರಸ್ಥರಿರುವುದು ಬಡತನದ ಕುಟುಂಬಗಳಲ್ಲಿಯೇ. ಬಡತನದ ಕಾರಣ ಶಾಲೆಗೆ ಹೋಗಲಾರದೆ ಅನಕ್ಷರರಾಗಿ ಉಳಿಯುತ್ತಾರೆ. ಈ ಕಾರಣವೇ ಮುಂದೆ ವಯಸ್ಕ ಶಿಕ್ಷಣ ಕೇಂದ್ರಕ್ಕೂ ಹಾಜರಾಗಲು ಅಡ್ಡಿಯಾಗಿ ಪರಿಣಮಿಸುತ್ತದೆ. ಬೆಳಗಿನಿಂದ ಸಂಜೆಯವರೆಗೆ ಮೈಮುರಿದು ದುಡಿದರೂ ದಿನನಿತ್ಯದ ವೆಚ್ಚವನ್ನು ಸಂಪಾದಿಸುವುದು ಕಷ್ಟವಾಗಿದ್ದು, ಆತ ಹಲವಾರು ಪೂರಕ ಕಸುಬುಗಳನ್ನು ಕೈಗೊಳ್ಳಬೇಕಾಗುತ್ತದೆ. ಅಂದಿನ ಸ್ಥಿತಿಯಲ್ಲಿ ಆತನಿಗೆ ಹೆಚ್ಚಿನ ಸಂಪಾದನೆಯ ಕಡೆಗೆ ಅಧಿಕ ಗಮನವೇ ಹೊರತು ಅಕ್ಷರಸ್ಥನಾಗುವ ಪ್ರಯತ್ನದ ಕಡೆಗಲ್ಲ. ಹಾಗಾದರೆ ಆತನನ್ನು ಈ ವಯಸ್ಕರ ಶಿಕ್ಷಣ ಕೇಂದ್ರಗಳಿಗೆ ಆಕರ್ಷಿಸಲು ಕೇಂದ್ರದ ಕಾರ್ಯಕ್ರಮಗಳು ಆರ್ಥಿಕ ಸುಧಾರಣೆಗಳನ್ನು ಉಂಟುಮಾಡುವ ಅಂಶಗಳನ್ನು ಒಳಗೊಳ್ಳಬೇಕು. ಆ ಕಾರ್ಯಕ್ರಮದಿಂದ ತತ್‌ಕ್ಷಣದಲ್ಲಿಯೇ ಲಾಭ ದೊರೆಯುವಂತಿದ್ದರೆ ಮಾತ್ರ ಆತ ವಯಸ್ಕರ ಶಿಕ್ಷಣ ಕೇಂದ್ರದೆಡೆಗೆ ಹೆಚ್ಚು ಆಕರ್ಷಿತನಾಗುತ್ತಾನೆ. ಇದಕ್ಕೆ ಇಂದಿನ ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯಲ್ಲಿ ಹೆಚ್ಚು ಒತ್ತು ಕೊಟ್ಟಿರುವುದು ಶ್ಲಾಘನೀಯ. ಆದರೂ ಈ ಅಂಶ ಈಗಿನ ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಸರಿಯಾಗಿ ಸಮರ್ಪಕವಾಗಿ ಪ್ರತಿಪಾದಿತವಾಗುತ್ತಿಲ್ಲ, ಏಕೆಂದರೆ ವಯಸ್ಕರ ಶಿಕ್ಷಣ ಕಾರ್ಯಕ್ಕೂ ವಿವಿಧ ಅಭಿವೃದ್ಧಿ ಇಲಾಖೆಗಳು, ಸಂಘ ಸಂಸ್ಥೆಗಳಿಗೂ ನಡುವೆ ಸರಿಯಾದ ಸಮನ್ವಯತೆ ಮತ್ತು ಸೂಕ್ತ ಸಹಕಾರದ ಅಭಾವದ ಕಾರಣದಿಂದ. ಹೀಗಾಗಿ ಇಂದಿಗೂ ಸಾಕ್ಷರತೆಯ ಅಂಶಕ್ಕೇ ಹೆಚ್ಚಿನ ಗಮನ ನೀಡಲಾಗುತ್ತಿದೆ, ಹೊರತು ಕಲಿಯುವವರ ಆರ್ಥಿಕ ಸ್ಥಿತಿಯ ಸುಧಾರಣೆಗಾಗಿ ಹೇಳಿಕೊಳ್ಳುವಂತಹ ಶೀಘ್ರ ಪ್ರಯತ್ನ ನಡೆಯುತ್ತಿಲ್ಲ. ಆದ್ದರಿಂದ ವಯಸ್ಕ, ಕೇಂದ್ರದ ಕಾರ್ಯಕ್ರಮಗಳಲ್ಲಿ ಹೆಚ್ಚು ಉತ್ಸಾಹ ತಾಳಲಾರದೆ ಮಧ್ಯದಲ್ಲಿಯೇ ಕೇಂದ್ರವನ್ನು ತೊರೆಯುವ ಸಂಭವವುಂಟು. ಆದ್ದರಿಂದ ಸಂಬಂಧಪಟ್ಟ ಇಲಾಖೆಗಳು ಈ ದಿಸೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.

೨. ಶಿಕ್ಷಣದ ಬಗ್ಗೆ ಉದಾಸೀನತೆ:

"ಶಿಕ್ಷಣ ಒಂದು ಮೂಲ ಬಂಡವಾಳ" ಎಂಬ ಪರಿಕಲ್ಪನೆ ಒಂದಿದೆ. ಅಂದರೆ ವಿದ್ಯೆ ಅಭಿವೃದ್ಧಿಯ ಸಾಧನ ಎಂಬುದು. ಆದರೆ ಈ ಅಂಶ ನಮ್ಮ ಸಮಾಜದಲ್ಲಿ

ನಮ್ಮ ಶಿಕ್ಷಣ ಪದ್ಧತಿಯಲ್ಲಿ ಒಡಮೂಡಿ ಬಂದಿಲ್ಲ. ಇಂದು ಶಿಕ್ಷಣಕ್ಕೂ ಮತ್ತು ಜೀವನಕ್ಕೂ ನಡುವೆ ಕಡಿದಾದ ಕಂದರವೇರ್ಪಟ್ಟಿದೆ. ಶಾಲೆಯಲ್ಲಿ ಕಲಿತದ್ದನ್ನು ಜೀವನದಲ್ಲಿ ಅಳವಡಿಸಿಕೊಳ್ಳಲಾಗದೆ ತನ್ನ ಸಮಾಜದಲ್ಲಿಯೇ ಪರಕೀಯನಾಗುತ್ತಿದ್ದಾನೆ ಮತ್ತು ವಯಸ್ಕನಲ್ಲಿ ಈ ವಯಸ್ಸಿನಲ್ಲಿ ಕಲಿತೇನಾಗಬೇಕಾಗಿದೆ ಹಾಗೂ ಅಕ್ಷರಸ್ಥನಾಗದೆ ಜೀವನವನ್ನು ನಡೆಸಬಹುದೆಂಬ ಭಾವನೆ ಮೂಡಿದೆ. ಹೀಗಾಗಿ ಆತ ಈ ವಯಸ್ಕರ ಶಿಕ್ಷಣ ಕಾರ್ಯದಲ್ಲಿ ಪ್ರೇರಿತನಾಗಲಾರ, ಸುಲಭವಾಗಿ. ಆದ್ದರಿಂದ ಮೊದಲು ಶಿಕ್ಷಣದ, ಸಾಕ್ಷರತೆಯ ಪ್ರಾಮುಖ್ಯತೆಯನ್ನು ಮನದಟ್ಟು ಮಾಡಿಕೊಡಬೇಕು. ಅನಕ್ಷರತೆಯಿಂದ ಆಗುವ ಪ್ರತಿಕೂಲಗಳು ಮತ್ತು ಸಾಕ್ಷರತೆಯಿಂದ ಆಗುವ ಅನುಕೂಲತೆಗಳನ್ನು ಸ್ಪಷ್ಟಪಡಿಸಬೇಕು. ಮತ್ತು ತರಗತಿಯಲ್ಲಿ ಆತ ಕಲಿತ ವಿಷಯ ಆತನ ಜೀವನದಲ್ಲಿ ಅನ್ವಯವಾಗುವಂತಿರಬೇಕು, ಅನುಸರಣ ಸಾಧ್ಯವಾಗುವಂತಿರಬೇಕು. ಇಲ್ಲವಾದಲ್ಲಿ ಶಿಕ್ಷಣದ ಬಗ್ಗೆ ಆತನಿಗೆ ಔದಾಸೀನ್ಯ ಹುಟ್ಟಿ ತರಗತಿಯನ್ನು ತೊರೆಯುವ ಸಂಭವ ಉಂಟು. ಆದ್ದರಿಂದ ಆತನಲ್ಲಿ ಶಿಕ್ಷಣದ ಬಗ್ಗೆ ಅಂತಃಪ್ರೇರಣೆ ಹುಟ್ಟುವಂತೆ ಪ್ರಯತ್ನಿಸಬೇಕು.

೩. ಸಾಮಾಜಿಕ ಸಂಪ್ರದಾಯಗಳು ಮತ್ತು ನಡವಳಿಕೆಗಳು:

ಸಮಾಜ ವ್ಯವಸ್ಥೆಯಲ್ಲಿ ರೂಢಿಗತವಾಗಿ ಬಂದಿರುವ ಕೆಲವು ಪೂರ್ವಗ್ರಹಪೀಡಿತ ಭಾವನೆಗಳು, ಆಚರಣೆಗಳು, ನಡವಳಿಕೆಗಳು ಕೂಡ ತರಗತಿಯನ್ನು ಮಧ್ಯದಲ್ಲಿಯೇ ಬಿಡಲು ಕಾರಣವಾಗುತ್ತವೆ. ಶಿಕ್ಷಣ ಕೆಲವೊಂದು ಉಚ್ಚ ವರ್ಗದವರ ಸ್ವತ್ತು ಎಂಬ ಭಾವನೆ ಬಹಳ ಹಿಂದಿನಿಂದಲೂ ಬಂದಿದೆ. ಇತರೆ ವರ್ಗಕ್ಕೆ ಸೇರಿದ ವಯಸ್ಕ, ವಯಸ್ಕರ ಶಿಕ್ಷಣ ಪಡೆದುಕೊಳ್ಳಲು ಅಷ್ಟು ಆಸಕ್ತಿ ತೋರಿಸಲಾರದೆ ಹೋಗುವುದು, ನಮಗೇಕೆ ಈ ಓದು ಬರಹ ಎಂಬ ಭಾವನೆಯಿಂದ. ಕೇಂದ್ರದ ವಿದ್ಯಾರ್ಥಿಗಳಲ್ಲಿ ಇರಬಹುದಾದ ಸ್ಪೃಶ್ಯ ಅಸ್ಪೃಶ್ಯ ಭಾವನೆಗಳಿಂದಾಗಿ ಕೆಲವೊಂದು ವರ್ಗದ ವಿದ್ಯಾರ್ಥಿಗಳು ಕೇಂದ್ರಕ್ಕೆ ವಿದಾಯ ಹೇಳಬಹುದಾಗಿರುತ್ತದೆ. ಹಾಗೆಯೇ ದೇವಾಲಯಗಳಲ್ಲಿ, ರಾಮಮಂದಿರಗಳಲ್ಲಿ ಕೆಲವು ಜಾತಿ ವ್ಯಕ್ತಿಗಳ ಮನೆಯಲ್ಲಿ ನಡೆಯುವ ಕೇಂದ್ರಗಳಿಗೆ ಕೆಲವೊಂದು ವರ್ಗದ ವಿದ್ಯಾರ್ಥಿಗಳು ಹಿಂದುಳಿದ ವರ್ಗದವರು ಹಾಜರಾಗುವಲ್ಲಿ ಹಿಂದೆ ಮುಂದೆ ನೋಡುವ ಸಂಭವವಿರುತ್ತದೆ. ಹಾಗೆಯೇ ಮಹಿಳೆಯರನ್ನು ಸಮಾಜ ನಡೆಸಿಕೊಳ್ಳುವ ರೀತಿನೀತಿಯೂ ಅವರು ಕೇಂದ್ರಗಳಿಗೆ ಹಾಜರಾಗುವಲ್ಲಿ

ಅಡ್ಡಿಯಾಗಿ ಪರಿಣಮಿಸುತ್ತದೆ.

೬. ಹಾಜರಾತಿಯಲ್ಲಿ ಕ್ರಮಬದ್ಧತೆ ಇಲ್ಲದಿರುವುದು:

ಕ್ರಮಬದ್ಧವಾದ ಹಾಜರಾತಿಯು ಬಹುಮುಖ್ಯ. ಒಂದು ವೇಳೆ ಒಬ್ಬ ವಯಸ್ಕ ಒಂದು ದಿನ ಕೇಂದ್ರಕ್ಕೆ ಹಾಜರಾಗದೇ ಹೋದರೆ, ಆ ಬಗ್ಗೆ ಮಾರನೆ ದಿನವೇ ಭೆಟ್ಟಿ ಮಾಡಿ ಏಕೆ ಎಂಬುದನ್ನು ತಿಳಿದು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇಲ್ಲವಾದಲ್ಲಿ, ತಪ್ಪಿಸಿಕೊಂಡರೆ ಯಾರಿಗೂ ಕಾಳಜಿ ಇಲ್ಲ ಎಂಬ ಭಾವನೆಯೊಂದಿಗೆ ಆತ ಕ್ರಮೇಣ ಗೈರು ಹಾಜರಾಗುವುದನ್ನೆ ಅಭ್ಯಾಸ ಮಾಡಿಕೊಂಡು ಉದಾಸೀನತೆ ತಲೆದೋರಿ ಒಂದು ದಿನ ತರಗತಿಯನ್ನೇ ತೊರೆಯಬಹುದು. ಹಾಗೆಯೇ ಕಾರ್ಯಕರ್ತನ ಹಾಜರಾತಿಯು ಬಹು ಮುಖ್ಯ. ದಿನನಿತ್ಯ ನಿಗದಿಪಡಿಸಿಕೊಂಡ ವೇಳೆಗೆ ಸರಿಯಾಗಿ ವಿದ್ಯಾರ್ಥಿಗಳು ಕೇಂದ್ರಕ್ಕೆ ಬಂದಿರಲಿ, ಇಲ್ಲದಿರಲಿ ಈತ ಹಾಜರಿರಬೇಕು. ಇಲ್ಲವಾದರೆ ಕಲಿಯುವವರು ತಾಳ್ಮೆಗೆಟ್ಟು ಕೇಂದ್ರಕ್ಕೆ ಬರುವುದನ್ನೇ ನಿಲ್ಲಿಸಬಹುದು. ಆದ್ದರಿಂದ ವಿದ್ಯಾರ್ಥಿಗಳ ಮತ್ತು ಕಾರ್ಯಕರ್ತರ ಇಬ್ಬರ ಹಾಜರಿಯಲ್ಲೂ ಕ್ರಮಬದ್ಧತೆ ಇರಬೇಕು.

೭. ವಯಸ್ಸಿನ ನಾಚಿಕೆ:

ಕಲಿಯುವವರ ತಂಡವನ್ನು ಆಯ್ಕೆ ಮಾಡುವಾಗ ಆದಷ್ಟು ಸಮಾನ ವಯೋಮಾನದವರನ್ನು ಆಯ್ಕೆ ಮಾಡಬೇಕು. ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ೧೫-೩೫ರ ವಯೋಮಾನದ ವ್ಯಕ್ತಿಗಳಿಗೆ ಪ್ರಾಶಸ್ತ್ಯ ನೀಡಲಾಗಿದೆ. ಒಂದು ವೇಳೆ ಕಿರಿಯರ ಗುಂಪಿನಲ್ಲಿ ಹಾಜರಾಗಬೇಕಾದ ಅತೀ ಹಿರಿಯನಿಗೆ ತನ್ನ ಸಹಪಾಠಿಗಳ ಮನೋಭಾವ, ಕಲಿಯುವ ಸಾಮರ್ಥ್ಯ ಇತ್ಯಾದಿ ಅಂಶಗಳೊಂದಿಗೆ ಹೊಂದಾಣಿಕೆ ಏರ್ಪಡದೆ ಬೇಸರ ತಲೆದೋರಿ ಕೇಂದ್ರವನ್ನು ತೊರೆಯುವ ಸಂಭವವುಂಟು. ಅಂತೆಯೇ ಹಿರಿಯರೊಂದಿಗೆ ಕಿರಿ ವಯಸ್ಸಿನವರು ಭಾಗವಹಿಸಲು ಕಿರಿಕಿರಿ ಎನಿಸಿ ಅವರು ತರಗತಿಯಿಂದ ಕಳಚಿಕೊಳ್ಳಬಹುದು. ಅಲ್ಲದೆ ಈ ವಯಸ್ಸಿನಲ್ಲಿ ಮಕ್ಕಳಂತೆ ಓದು ಬರಹ ಕಲಿಯಬೇಕಲ್ಲಾ ಎಂಬ ಕೀಳರಿಮೆಯು ತಲೆದೋರಬಹುದು. ಆದ್ದರಿಂದ ಸಮಾನ ವಯೋಮಾನದ ವಿದ್ಯಾರ್ಥಿಗಳನ್ನು ಆರಿಸಬೇಕಲ್ಲದೆ, ತರಗತಿಯಲ್ಲಿ ಓದು ಬರಹ ಕಲಿಸುವ ವಿಧಾನವು ಪ್ರಾಥಮಿಕ ಶಾಲಾ ತರಗತಿಯ ವಿಧಾನಕ್ಕಿಂತ ಭಿನ್ನವಾಗಿದ್ದು

ವಯಸ್ಕ ಮನಶ್ಶಾಸ್ತ್ರ ಆಧಾರದ ಮೇಲೆ ರೂಪಿತವಾಗಿರಬೇಕು.

೬. ತರಗತಿಯ ಸನ್ನಿವೇಶಗಳು :

ಕೇಂದ್ರದ ಭೌತ ವಾತಾವರಣ ಅಂದರೆ ಸ್ಥಳ, ಸ್ವಚ್ಛತೆ, ಬೆಳಕಿನ ವ್ಯವಸ್ಥೆ ಇತ್ಯಾದಿ ಅಂಶಗಳು ಕಲಿಯುವವರು ಆಸಕ್ತಿಯಿಂದ ಮುಂದುವರೆಯಲು ಕಾರಣವಾಗಬಲ್ಲವು. ಬೆಳಗಿನಿಂದ ದುಡಿದು, ದಣಿದು ಬಂದ ವಯಸ್ಕರಿಗೆ ಶುಭ್ರ ಪ್ರಶಾಂತ ವಾತಾವರಣದಲ್ಲಿ ಕಲಿಕೆಯ ಚಟುವಟಿಕೆಗಳನ್ನು ಕೈಗೊಳ್ಳುವುದು ಆನಂದದಾಯಕವಾಗಿರುತ್ತದೆ. ಹಾಗೆಯೇ ಕಲಿಯುವವರ ವಾಸ ಸ್ಥಳಕ್ಕೂ ತರಗತಿಗೂ ಇರುವ ದೂರ ವಿಶೇಷವಾಗಿ ಮಹಿಳೆಯರ ವಿಷಯದಲ್ಲಿ ಪ್ರಭಾವ ಬೀರುತ್ತದೆ. ಆದ್ದರಿಂದ ತರಗತಿ ಒಳ್ಳೆ ಸುವ್ಯವಸ್ಥಿತವಾಗಿದ್ದು ಎಲ್ಲರಿಗೂ ಸಮೀಪವಾದ ಕೇಂದ್ರ ಸ್ಥಳದಲ್ಲಿರಬೇಕಲ್ಲದೆ ಯಾವುದೇ ಕೋಮುಗಳು, ಸ್ತರಗಳು, ಮೇಲು-ಕೀಳು ಎಂಬ ತಾರತಮ್ಯತೆ ಇಲ್ಲದೆ ಎಲ್ಲರೂ ಸೇರುವಂತಹ ಸಾರ್ವಜನಿಕ ಸ್ಥಳವಾಗಿರಬೇಕು.

೭. ಶಿಕ್ಷಣ ವಿಧಾನ ಮತ್ತು ಪಠ್ಯವಸ್ತು:

ಕೇಂದ್ರದಲ್ಲಿನ ಬೋಧನಾ ವಿಧಾನ ಮತ್ತು ಪಠ್ಯವಸ್ತು ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ವಯಸ್ಕರು ಭಾಗವಹಿಸುವಲ್ಲಿ ಹೆಚ್ಚಿನ ಪ್ರಭಾವ ಬೀರುತ್ತದೆ. ಅನಕ್ಷರಸ್ಥರಾದ ಮಾತ್ರಕ್ಕೆ ಏನೂ ತಿಳಿಯದು ಎಂಬ ಭಾವನೆಯಿಂದ ಮಕ್ಕಳಿಗೆ ಬೋಧಿಸುವಂತೆ ಬೋಧಿಸುವುದು ಯುಕ್ತವಲ್ಲ. ಅವರು ಅವರವರ ಕ್ಷೇತ್ರದಲ್ಲಿ ಅನುಭವಿಗಳಾಗಿದ್ದು ಕೆಲವೊಮ್ಮೆ ಶಿಕ್ಷಕರಿಗಿಂತಲೂ ಹೆಚ್ಚಿನ ಪರಿಶ್ರಮ ಉಳ್ಳವರಾಗಿರುತ್ತಾರೆ. ಆದ್ದರಿಂದ ತರಗತಿಯ ಬೋಧನೆ-ಕಲಿಕೆಯ ಚಟುವಟಿಕೆಗಳಲ್ಲಿ ವಯಸ್ಕನು ಸಕ್ರಿಯವಾಗಿ ಭಾಗವಹಿಸುವಂತಿರಬೇಕು. ಚಟುವಟಿಕೆಗಳು ದ್ವಿಮುಖ ಸಂಚಾರವಾಗಿರಬೇಕೇ ಹೊರತು ಶಿಕ್ಷಕನಿಂದ ಕಲಿಯುವವನಿಗೆ ಮಾತ್ರ ಏಕಮುಖವಾಗಿರಬಾರದು. ಇದರಿಂದಾಗಿ ವಯಸ್ಕನಲ್ಲಿ ಆಸಕ್ತಿ, ಆತ್ಮ ವಿಶ್ವಾಸ ಹೆಚ್ಚಿ ಕೇಂದ್ರದ ಕಾರ್ಯಕ್ರಮಗಳಲ್ಲಿ ಹೆಚ್ಚೆಚ್ಚು ಆಸ್ಥೆಯಿಂದ ಭಾಗವಹಿಸುತ್ತಾನೆ. ಶಿಕ್ಷಣ ವಿಧಾನ ಕಲಿಕೆಯ ಕ್ರಿಯೆ ಕಷ್ಟಕರವಾದುದಲ್ಲ ಎಂಬ ಅಭಿಪ್ರಾಯವನ್ನು ಮೂಡಿಸಬೇಕು. ದಣಿದು ಆಯಾಸದಿಂದ ಬಂದ ವ್ಯಕ್ತಿಗೆ ವಯಸ್ಕರ ಶಿಕ್ಷಣ ಕೇಂದ್ರ ಆತನ ಆಯಾಸ ಪರಿಹಾರ ಮಾಡಿ ಆತನಿಗೆ ಉಪಯುಕ್ತ ವಿಷಯಗಳನ್ನು ನೀಡುವ ಕೇಂದ್ರವಾಗಿರಬೇಕು. ಜಾನಪದ

ಮಾಧ್ಯಮಗಳನ್ನು ಬಳಸಿಕೊಳ್ಳಬೇಕು. ವೈಯಕ್ತಿಕ ಸಮಸ್ಯೆಗಳನ್ನು ಚರ್ಚಿಸ ಬೇಕು. ಕಲಿಸುವ ವಸ್ತು ಆತನ ಜೀವನಕ್ಕೆ ಸಂಬಂಧಪಟ್ಟಿದ್ದಿರಬೇಕು. ಕಲಿತದ್ದು ಸಮುದಾಯದಲ್ಲಿ ಕಾರ್ಯಾನ್ವಯ ಆಗುವಂತಿರಬೇಕು. ಪಠ್ಯವಸ್ತುವಿನಲ್ಲಿ ಆಧುನಿಕತೆ, ಸುಸಂಬದ್ಧತೆ ಮತ್ತು ಕ್ರಮಬದ್ಧತೆ ಇರಬೇಕು. ಶಿಕ್ಷಕ ದಕ್ಷ ನಾಗಿದ್ದು ಕಾರ್ಯದಲ್ಲಿ ನಿಷ್ಠೆಯಿರಬೇಕು.

ಚೌಧರಿಯವರು ಚರ್ಚಿಸಿರುವ ಅಂಶಗಳನ್ನೇ ಇನ್ನೂ ವ್ಯಾಪಕವಾಗಿ ಎನ್.ಸಿ.ಇ.ಆರ್.ಟಿ.ಯು ಶಾಲೆಗೆ ಸಂಬಂಧಪಟ್ಟ ಕಾರಣಗಳು, ವಿದ್ಯಾರ್ಥಿಗೆ ಸಂಬಂಧಪಟ್ಟ ಕಾರಣಗಳು ಮತ್ತು ಕುಟುಂಬಕ್ಕೆ ಸಂಬಂಧಪಟ್ಟ ಕಾರಣ ಗಳೆಂದು ಮೂರು ವಿಭಾಗಗಳಾಗಿ ವಿಂಗಡಿಸಿಕೊಂಡು ಅಧ್ಯಯನ ನಡೆಸಿದೆ.

ಅಲ್ಲದೆ ಈ ಕೆಳಕಂಡ ಇತರೆ ಕಾರಣಗಳೂ ಕೂಡ ಈ ವಿಷಯದಲ್ಲಿ ಸಾಕಷ್ಟು ಪರಿಣಾಮ ಬೀರಬಲ್ಲವು.

೧) ಸಕಾಲದಲ್ಲಿ ಬೋಧನಾ ಮತ್ತು ಕಲಿಕೆಯ ಸಾಮಗ್ರಿಗಳ ಸರಬರಾಜು ಆಗದಿದ್ದರೆ ಚಟುವಟಿಕೆಗಳಲ್ಲಿ ಶುಷ್ಕತೆ ಕಂಡು ಬರಬಹುದು. ಅದು ಕಾಡು ಹರಟೆಗೆ ಅವಕಾಶವಾಗಿ ಚಟುವಟಿಕೆಗಳಲ್ಲಿ ಕಲಿಯುವವರಿಗೆ ಅನಾಸಕ್ತಿ ಮೂಡಿ ಕೇಂದ್ರವನ್ನು ಅವಧಿಗೆ ಮುಂಚೆ ತೊರೆಯಬಹುದು.

೨) ಕಾರ್ಯ ನಿರತ ಸಿಬ್ಬಂದಿ ಕಾರ್ಯಕ್ರಮದ ಬಗ್ಗೆ ಸೂಕ್ತವಾದ ತರಬೇತಿಯನ್ನು ಹೊಂದಿಲ್ಲದಿದ್ದರೆ ಆತನ ಕಾರ್ಯ ನಿರ್ವಹಣೆಯಲ್ಲಿ ಸಮರ್ಪಕತೆ ದಕ್ಷತೆ ಕಂಡುಬರದೆ, ಇದೂ ಸಹ ಮುಂದೆ ವಿದ್ಯಾರ್ಥಿಗಳು ತರಗತಿಯ ಚಟುವಟಿಕೆಗಳಲ್ಲಿ ಆಸಕ್ತಿ ಕಳೆದುಕೊಳ್ಳುವಂತೆ ಮಾಡಬಹುದು.

೩) ಋತುಮಾನದಲ್ಲಿ ಉಂಟಾಗುವ ಬದಲಾವಣೆಗಳು ಕೂಡ ಉದಾ ಹರಣೆಗೆ, ಮಳೆಗಾಲ, ಬಿತ್ತನೆ ಕಾಲ, ಸುಗ್ಗಿಯ ಕಾಲಗಳಲ್ಲಿ ಹಾಜರಾತಿ ಗಮನಾರ್ಹ ಸಂಖ್ಯೆಯಲ್ಲಿ ಕಡಿಮೆಯಾಗುವ ಸಂಭವ ಉಂಟು. ಹಾಗೆಯೇ, ಕಲಿಯುವವರು ಕೆಲಸಕ್ಕಾಗಿ ವಲಸೆಹೋದಾಗ ಹಾಜರಾತಿ ಕಡಿಮೆಯಾಗು ತ್ತದೆ.

ಒಟ್ಟಿನಲ್ಲಿ ಹಾಜರಾತಿಯ ಅಂಶವು ಕೇಂದ್ರದಲ್ಲಿ ಏನನ್ನು, ಏಕೆ ಮತ್ತು ಹೇಗೆ ಕಲಿಸಲಾಗುತ್ತಿದೆ ಎಂಬ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ.

ಚನ್ನಬಸಪ್ಪ

ಏಶಿಯಾ ಉದ್ಯಮ ಕ್ಷೇತ್ರದ ನಾಲ್ಕು ಪುಟ್ಟ ದೈತ್ಯರು!

ಒಂದಾನೊಂದು ಕಾಲದಲ್ಲಿ ಸಿಂಗಪುರ, ದಕ್ಷಿಣಕೊರಿಯಾ, ತೈವಾನ್ ಮತ್ತು ಹಾಂಗ್‌ಕಾಂಗ್, ಈ ನಾಲ್ಕು ರಾಷ್ಟ್ರಗಳು ಬಡತನದಿಂದ ಹಾಗೂ ಆರ್ಥಿಕ ಮುಗ್ಗಟ್ಟಿನಿಂದ ಒದ್ದಾಡುತ್ತಿದ್ದವು; ಇಂದು ಜಾಗತಿಕ ರಫ್ತು ಮಾರುಕಟ್ಟೆಯಲ್ಲಿ ಉತ್ಪಾದನಾ ಕ್ಷೇತ್ರದ ಅಗಾಧ ಶಕ್ತಿಗಳಾಗಿ ಪರಿಣಮಿಸುತ್ತಿವೆ.

ಜಪಾನಿನ ರಫ್ತುಗಾರಿಕೆಯ ಸವಾಲಿನ ಬಗ್ಗೆ ವ್ಯಾಕುಲರಾಗುವ ಉದ್ಯಮಿಗಳು ಈಗ ಏಶಿಯಾದ ಹೊಸ ಅಲೆಯ ಆಘಾತಕ್ಕೂ ಸಿದ್ಧರಾಗಬೇಕಾಗಿದೆ. ದಿನೇ ದಿನೇ ಪ್ರಗತಿಗೊಳ್ಳುತ್ತಿರುವ ಸ್ಪರ್ಧಾಶಕ್ತಿಪೂರಿತ ನಾಲ್ಕು ಪುಟ್ಟ ಜಪಾನುಗಳು ಈಗ ತಲೆಯೆತ್ತಿವೆ.

ತೈಲಾನ್ವೇಷಣ ಕೊರೆವ ಯಂತ್ರಗಳಿಗಾಗಿ ಇರುವ ಜಾಗತಿಕ ಬೇಡಿಕೆಯ ಶೇಕಡ ೨೫ರಷ್ಟನ್ನು ಸಿಂಗಪುರ ಗಳಿಸಿಕೊಂಡಿದೆ. ಇಷ್ಟು ಪ್ರಮಾಣದಲ್ಲಿ ಇವನ್ನು ಸರಬರಾಜು ಮಾಡುವ ಶಕ್ತಿ ಇರುವ ರಾಷ್ಟ್ರ ಅಮೆರಿಕಾ ಒಂದೇ.

ಕಪ್ಪು ಬಿಳುಪು ಟೆಲಿವಿಷನ್ ಸೆಟ್‌ಗಳ ತಯಾರಿಕೆಯಲ್ಲಿ ಜಗತ್ತಿನ ಅತ್ಯಂತ ದೊಡ್ಡ ಉತ್ಪಾದಕ ರಾಷ್ಟ್ರವಾಗಿರುವ ದಕ್ಷಿಣಕೊರಿಯಾ ಈಗ ಬಣ್ಣದ ಟಿ. ವಿ. ಸೆಟ್‌ಗಳನ್ನು ವೀಡಿಯೋ ಟೇಪ್ ರೆಕಾರ್ಡರ್‌ಗಳನ್ನೂ ಅತ್ಯಧಿಕ ಸಂಖ್ಯೆಯಲ್ಲಿ ಉತ್ಪಾದಿಸುತ್ತಿದೆ.

ತೈವಾನ್ ಮತ್ತು ಹಾಂಗ್‌ಕಾಂಗ್‌ಗಳು ಬಹಳ ಕಾಲದಿಂದ ಉಡುಪು ತಯಾರಕರಾಗಿ ಹಾಗೂ ಸರಳ ಎಲೆಕ್ಟ್ರಾನಿಕ್ ಯಂತ್ರಗಳ ಸಜ್ಜುಗೊಳಿಸುವಿಕೆಯಲ್ಲಿ ಪ್ರಸಿದ್ಧವಾಗಿದ್ದವು. ಈಗ ಹೆಚ್ಚು ಅತ್ಯಾಧುನಿಕ ದೂರಸಂಪರ್ಕ ಯಂತ್ರಗಳು, ಗಣಕ ಯಂತ್ರಗಳ ತಯಾರಿಕೆಯಲ್ಲಿ ಪ್ರಸಿದ್ಧಿ ಪಡೆಯುತ್ತಿದ್ದಾರೆ. ಈ ನಾಲ್ಕು ರಾಷ್ಟ್ರಗಳು ಜಾಗತಿಕ ವ್ಯವಹಾರ ಕ್ಷೇತ್ರದಲ್ಲಿ ಮಾಡಿರುವ ಪ್ರಭಾವವನ್ನು ನೋಡಿದರೆ, ಜಪಾನಿಗೆ ಪೈಪೋಟಿ ನೀಡಬಲ್ಲ ಶಕ್ತಿಯು ಉಗಮವಾದಂತೆ ಆಗಿದೆ.

'ಪುಟ್ಟದೈತ್ಯರು' ಎಂದು ಬಿರುದು ಪಡೆಯುವ ಈ ಪಟ್ಟು ಬಿಡದ ರಫ್ತು

೮೭ರ ಆಗಸ್ಟ್ ತಿಂಗಳ ರೀಡರ್ಸ್ ಡೈಜೆಸ್ಟ್ ಮಾಸಿಕದಲ್ಲಿ ಪ್ರಕಟಗೊಂಡಿರುವ ಏಶಿಯನ್ ಇಂಡಸ್ಟ್ರೀಸ್ ಫೋರ್ ಲಿಟಲ್ ಡ್ರಾಗನ್ಸ್ (ಲೇ: ಲೂಯಿಸ್ ಕ್ರಾರ್) ಲೇಖನದ ಅನುವಾದ.

ಗಾರರು ಅತ್ಯಂತ ನಾಟಕೀಯ ಯಶವನ್ನು ಪಡೆದಿರುವ ಕೆಲವೇ ಕೆಲವು ರಾಷ್ಟ್ರಗಳ ಸಾಲಿಗೆ ಸೇರಿದ್ದಾರೆ. ಬ್ರೆಜಿಲ್ ಮತ್ತು ಮೆಕ್ಸಿಕೋನಂತಹ ರಾಷ್ಟ್ರಗಳು ಇತರ ಇಂಥ ರಾಷ್ಟ್ರಗಳು. ಇವುಗಳನ್ನು ನವ ಉದ್ಯಮೀಕೃತ ರಾಷ್ಟ್ರಗಳೆಂದು ಅರ್ಥಶಾಸ್ತ್ರಜ್ಞರು ಕರೆಯುತ್ತಾರೆ. ಈ ರಾಷ್ಟ್ರಗಳ ಆರ್ಥಿಕ ಬೆಳವಣಿಗೆ ನಿಜವಾಗಿ ಗಮನಾರ್ಹ. ೭೦ರ ದಶಕದಲ್ಲಿ ವಾರ್ಷಿಕ ಆರ್ಥಿಕ ಪ್ರಗತಿ ಶೇ! ೯.೪. ಅದೇ ಸಮಯದಲ್ಲಿ ಜಪಾನಿನ ಪ್ರಗತಿ ಶೇ| ೪, ಅಮೆರಿಕಾದ್ದು ಶೇ|| ೩. ಏಶಿಯಾದ ಈ “ನಾಲ್ಕು ರಾಷ್ಟ್ರಕೂಟ”ದ ರಫ್ತುಗಾರಿಕೆಯ ಬಿರುಸನ್ನು ನೋಡಿದರೆ ೧೯೮೦ರ ದಶಕದಲ್ಲಿ ಈ ರಾಷ್ಟ್ರಗಳ ಆರ್ಥಿಕತೆ ಪ್ರತಿ ವರ್ಷ ಶೇ| ೭ ಅಥವಾ ಶೇ|| ೯ ರಷ್ಟರಂತೆ ಅಧಿಕಗೊಳ್ಳುವುದರಲ್ಲಿ ಸಂದೇಹವೇ ಇಲ್ಲ. ಇವುಗಳು ಪೂರ್ಣ ಅಭಿವೃದ್ಧಿ ಹೊಂದಿದ ಔದ್ಯಮಿಕ ರಾಷ್ಟ್ರಗಳಾಗಿಬಿಡುತ್ತವೆ.

ಸೃಜನಾತ್ಮಕ ನಕಲುಗಾರಿಕೆ: ಏಶಿಯಾದ ಈ ಪುಟ್ಟ ದೈತ್ಯರು ತಮ್ಮ ಭೂಗಾತ್ರಕ್ಕೆ ಮೀರಿದ ಮಟ್ಟದಲ್ಲಿ ಅಂತರಾಷ್ಟ್ರೀಯ ಭೂಮಿಕೆಯಲ್ಲಿ ವಿಜೃಂಭಿಸುತ್ತಿವೆ. ೧೯೭೬ ರಿಂದ ೮೦ ರವರೆಗೆ ಐದು ವರ್ಷಗಳಲ್ಲಿ ಇವುಗಳ ರಫ್ತು ಪ್ರಮಾಣ ದ್ವಿಗುಣಗೊಂಡಿದೆ. ಸುಮಾರು ೫೭,೬೦೦ ಕೋಟಿ ರೂಪಾಯಿಗಳಷ್ಟಾಗಿದೆ. ಈ ನಾಲ್ಕು ಪುಟ್ಟ ರಾಷ್ಟ್ರಗಳ ಒಟ್ಟು ಜನಸಂಖ್ಯೆ ೬ ಕೋಟಿ ೩೦ ಲಕ್ಷ. ಅಂದರೆ ಜಾಗತಿಕ ಜನಸಂಖ್ಯೆ ಶೇ|| ೧.೪ ರಷ್ಟು ಮಾತ್ರ. ಆದರೆ ಈ ಪುಟ್ಟ ದೈತ್ಯ ರಾಷ್ಟ್ರಗಳ ಜಾಗತಿಕ ರಫ್ತಿನ ಪ್ರಮಾಣ ಸುಮಾರು ಶೇ|| ೪.

ಹೊಸ ಹೊಸ ಕ್ಷೇತ್ರಗಳನ್ನು ಅರಸುತ್ತಿರುವ ಈ ರಾಷ್ಟ್ರಗಳು ಜಪಾನಿ ವ್ಯಾಪಾರವಲಯದೊಳಕ್ಕೆ ನುಗ್ಗುತ್ತಿವೆ. ದಕ್ಷಿಣ ಕೊರಿಯಾದ ಹಡಗು ನಿರ್ಮಾಣ ಸಂಸ್ಥೆಗಳು ಜಾಗತಿಕ ಮಟ್ಟದಲ್ಲಿ ಪ್ರಮುಖ ಬೇಡಿಕೆಗಳನ್ನು ಪೂರೈಸುವಲ್ಲಿ ಜಪಾನಿನೊಡನೆ ಸ್ಪರ್ಧಿಸಿ ಯಶಗಳಿಸುತ್ತಿವೆ. ಹಾಂಗ್‌ಕಾಂಗ್‌ನ ಬುದ್ಧಿವಂತ ತಾಂತ್ರಿಕರು ಜಪಾನಿನ ಹಳೆಯ ತಂತ್ರವಾದ ಸೃಜನಾತ್ಮಕ ನಕಲುಗಾರಿಕೆಯಲ್ಲಿ ಪ್ರಾವೀಣ್ಯಗಳಿಸುತ್ತಿದ್ದಾರೆ. ಜಪಾನಿನ ಅತ್ಯಂತ ಹೊಸದಾದ ಎಲೆಕ್ಟ್ರಾನಿಕ್ ಗಡಿಯಾರಗಳ ವಿನ್ಯಾಸಗಳನ್ನು ಮತ್ತಷ್ಟು ಪರಿಷ್ಕರಿಸಿ, ಸರಕುಗಳನ್ನು ಉತ್ಪಾದಿಸಿ ಕಡಿಮೆ ಬೆಲೆಯಲ್ಲಿ ರಫ್ತು ಮಾಡಿಬಿಡುತ್ತಾರೆ.

ಏಶಿಯಾದ ಹೊಸ ಉದ್ಯಮಿಗಳು ತಮ್ಮಲ್ಲಿನ ಬುದ್ಧಿಬಲ ಹಾಗೂ ತಾಂತ್ರಿಕ ಜ್ಞಾನವನ್ನು ನೆರೆಯ ರಾಷ್ಟ್ರಗಳಿಗೆ ಲಾಭದಾಯಕವಾಗಿ ಮಾರು

ತ್ತಾರೆ. ಈ ನೆರೆಯ ರಾಷ್ಟ್ರಗಳಲ್ಲಿನ ಸಂಪದಕ್ಕೆ ಸಾಟಿಯಾಗಿ ಅಲ್ಲಿ ಆಧುನಿಕ ಕುಶಲತೆ ಇಲ್ಲದಿರುವುದರಿಂದ ಈ ಪುಟ್ಟದೈತ್ಯರನ್ನು ಅವು ಅವಲಂಬಿಸಲೇ ಬೇಕಾಗಿದೆ. ಅರಬ್ ತೈಲ ಸಾಮ್ರಾಜ್ಯಗಳಷ್ಟು ದೂರಕ್ಕೂ ಇವರ ಪ್ರಭಾವ ವ್ಯಾಪಿಸಿದೆ. ಅರಬ್ ರಾಷ್ಟ್ರಗಳಲ್ಲಿನ ಕಟ್ಟಡ ನಿರ್ಮಾತೃಗಳು ಮುಖ್ಯವಾಗಿ ಕೊರಿಯಾ ಸಂಸ್ಥೆಗಳೇ. ಇವು ಕಟ್ಟಡ ನಿರ್ಮಾಣಕ್ಕೆ ಅಗತ್ಯವಾದ ಉಕ್ಕನ್ನು ಇಂಜನಿಯರ್‌ಗಳನ್ನು, ದುಡಿಯ ಕೂಲಿಗಾರರನ್ನು ತಮ್ಮ ರಾಷ್ಟ್ರದಿಂದಲೇ ಒಯ್ಯುತ್ತಾರೆ.

ಹಾಂಗ್‌ಕಾಂಗ್ ನೆರೆಯ ಚೀನಾಕ್ಕೆ ಆರ್ಥಿಕ ಬೆಂಬಲವಾಗಿ ನಿಂತಿದೆ. ಚೀನಾದ ಮೂರನೇ ಒಂದು ಭಾಗದಷ್ಟು ವಿದೇಶಿ ವಿನಿಮಯವನ್ನು ಹಾಂಗ್‌ಕಾಂಗ್ ಪೂರೈಸುತ್ತದೆ. ಜೊತೆಗೆ ಚೀನಾದ ತುಸು ದುರ್ಬಲ ಆರ್ಥಿಕತೆಯನ್ನು ಆಧುನೀಕರಿಸಲು ಅಗತ್ಯ ತಂತ್ರಪ್ರಾವೀಣ್ಯವನ್ನು ಒದಗಿಸುತ್ತಿದೆ.

ಸಿಂಗಪುರ, ಅದಿರುವ ಪ್ರದೇಶದಲ್ಲಿನ ಏಕೈಕ ಆರ್ಥಿಕ ಗಟ್ಟಿಸ್ತಂಭ. ಅಮೆರಿಕಾದ ಸುಮಾರು ೬೫,೮೪೦ ಕೋಟಿ ರೂಪಾಯಿಗಳು ಇಲ್ಲಿ ಹೂಡಿಕೆಯಾಗಿದೆ ಎಂದರೆ ಇಲ್ಲಿಯ ಆರ್ಥಿಕ ಸ್ಥಿರತೆಯ ಬಗ್ಗೆ ಬೇರೆ ಮಾತೇಬೇಕಿಲ್ಲ.

ಒಮ್ಮೆ ಬಡರಾಷ್ಟ್ರಗಳಾಗಿದ್ದು ಕೇವಲ ಎರಡು ದಶಕಗಳಲ್ಲಿ ಅಪ್ರತಿಮ ಉತ್ಪಾದಕ ರಾಷ್ಟ್ರಗಳಾಗಿ ಮಾರ್ಪಾಡಾಗಿರುವ ಕ್ರಿಯೆ ಒಂದು ಔದ್ಯಮಿಕ ಪವಾಡ: ಇದಕ್ಕೆ ಸರ್ಕಾರದ ನೀತಿಗಳು ಬಹುಮಟ್ಟಿಗೆ ಕಾರಣ.

ಹಾಂಗ್‌ಕಾಂಗ್‌ನ ಬ್ರಿಟಿಷ್ ಆಡಳಿತ ತೆರಿಗೆಗಳನ್ನು ಕನಿಷ್ಠ ಪ್ರಮಾಣದಲ್ಲಿಯೇ ಇರಿಸಿದೆ. ಅಲ್ಲದೆ ವ್ಯಾಪಾರ ನಿಯಮಗಳನ್ನು ಸಡಿಲವಾಗಿಟ್ಟು ರಫ್ತುಗಾರರ ವ್ಯವಹಾರಗಳ ಮಧ್ಯೆ ತಲೆಹಾಕುವುದಿಲ್ಲ. ಹಾಗಾಗಿ ಜಗತ್ತಿನಲ್ಲಿ, ಎಲ್ಲೂ ಇರದಂತ ಸುಲಲಿತ ಸ್ವಚ್ಛಂದ ಆರ್ಥಿಕ ವ್ಯಾಪಾರ ಪರಿಸ್ಥಿತಿ ಇಲ್ಲಿದೆ. ಇತರ ಮೂರು ರಾಷ್ಟ್ರಗಳಲ್ಲಿ ಸಮರ್ಥ ದಕ್ಷ ನಾಯಕರು ಮುಂಚೂಣಿಯಲ್ಲಿದ್ದು ತಮ್ಮ ತಮ್ಮ ರಾಷ್ಟ್ರಗಳ ಔದ್ಯಮಿಕ ಪ್ರಗತಿಗೆ ಏನುಬೇಕೋ ಅದನ್ನು ಪೂರೈಸಲು ಕಂಕಣಬದ್ಧರಾಗಿದ್ದಾರೆ.

ಈ ನಾಲ್ಕು ರಾಷ್ಟ್ರಗಳೂ ಪ್ರಯೋಜನಕಾರಿ ವ್ಯವಹಾರಶೀಲವಾದವು ಹಾಗೂ ಬಂಡವಾಳಶಾಹಿಗಳು. ಪ್ರತಿಭಾವಂತ ಆರ್ಥಿಕ ತಾಂತ್ರಿಕ ಶಿಲ್ಪಿಗಳಿಗೆ ವಿಪುಲ ಪ್ರೋತ್ಸಾಹವನ್ನು ನೀಡುತ್ತವೆ. ಮೂಲಭೂತ ಉದ್ಯಮಗಳಿಗೆ ಕಡಿಮೆ ತೆರಿಗೆಗಳನ್ನು ಪ್ರೋತ್ಸಾಹಕ ನೆರವನ್ನು ನೀಡಿ ಅವುಗಳು ಬೆಳೆಯಲು ಬೆಂಬಲ ನೀಡುತ್ತವೆ.

ಉಕ್ಕಿನ ಸ್ಥಾವರಗಳಂಥ ಭಾರಿ ಉದ್ಯಮಗಳನ್ನು ನಡೆಸಲು ಖಾಸಗಿ ಬಂಡವಾಳ ಸಾಕಾಗದೆ ಇದ್ದಾಗ ಸರ್ಕಾರಗಳೇ ಅವನ್ನು ಆರಂಭಿಸುತ್ತವೆ. ಜಪಾನಿನಂತೆಯೇ ಈ ಪುಟ್ಟ ದೈತ್ಯ ರಾಷ್ಟ್ರಗಳು ಕೆಲವು ಉತ್ಪಾದನಾ ವಸ್ತುಗಳ ಮೇಲೆ ಮೊದಲು ಕೇಂದ್ರೀಕರಿಸಿ, ನಂತರ ಕ್ರಮಕ್ರಮೇಣ ಮೂಲಭೂತ ಗ್ರಾಹಕ ವಸ್ತುಗಳಿಂದ ಯಂತ್ರೋಪಕರಣಗಳ ಉತ್ಪಾದನೆಯತ್ತ ಸಾಗುತ್ತಿವೆ.

ಈ ನಾಲ್ಕು ಪುಟ್ಟ ದೈತ್ಯ ರಾಷ್ಟ್ರಗಳನ್ನು ಬಂಧಿಸಿರುವ ಏಕ ಸಾಮಾನ್ಯ ಸೂತ್ರವೆಂದರೆ ಸಾಧನೆಯನ್ನು ಉದ್ದೀಪಿಸುವ ಕನ್‌ಫ್ಯೂಸಿಯಸ್ ಮೌಲ್ಯಗಳು ಕೊರಿಯ ಅಧ್ಯಕ್ಷನ ಮುಖ್ಯ ಕಾರ್ಯದರ್ಶಿಗಳು ಹೇಳುವುದೇನೆಂದರೆ "ಶಿಸ್ತಿನ ಸಂಸ್ಕೃತಿ ಹಾಗೂ ತಾತ್ಕಾಲಿಕ ತೃಪ್ತಿಯನ್ನು ಬದಿಗೊತ್ತಿ ಭವಿಷ್ಯದ ನಾಳಿನ ಏಳಿಗೆಗಾಗಿ ದುಡಿಯ ಪ್ರವೃತ್ತಿಯೇ ನಮ್ಮ ವಿಜಯದ ಗುಟ್ಟು" ಈ ಧೋರಣೆ ಯಿರುವುದರಿಂದಲೇ ಕಾರ್ಖಾನೆಗಳು ಯಂತ್ರೋಪಕರಣಗಳು ಇತ್ಯಾದಿಗಳ ಮೇಲೆ ಹೆಚ್ಚು ಹೆಚ್ಚು ಹೂಡಿಕೆ ಸಾಧ್ಯವಾಗುತ್ತಿದೆ. ಶಿಕ್ಷಣಕ್ಕೆ ಕನ್‌ಪೂಷಿಯಸ್ ಕೊಟ್ಟಿರುವ ಉನ್ನತ ಸ್ಥಾನವೂ ಆ ಜನರನ್ನು ವಿದ್ಯಾವಂತರನ್ನಾಗಿಸಿದೆ, ಉನ್ನತ ಆಕಾಂಕ್ಷೆಯ ಜನರನ್ನಾಗಿಸಿದೆ.

ಔದ್ಯಮಿಕ ಬೆಳವಣಿಗೆಯಿಂದ ಸಾಧಿಸಲಾಗುವ ಲಾಭಗಳು ಸೂಕ್ತ ವಿತರಣೆ ಕಾಣುವುದರಿಂದ ಆರ್ಥಿಕತೆಯೂ ಪ್ರಗತಿ ಸಾಧಿಸುತ್ತದೆ, ಈ ಪುಟ್ಟ ದೈತ್ಯ ರಾಷ್ಟ್ರಗಳು ಆದಾಯವನ್ನು ಸಮಾನವಾಗಿ ವಿತರಿಸಲು ಸರ್ವ ಪ್ರಯತ್ನಗಳನ್ನು ನಡೆಸುತ್ತವೆ. ಹಾಗಾಗಿ ಕಾರ್ಖಾನೆ ಕಾರ್ಮಿಕರ ಜೀವನ ಮಟ್ಟದಲ್ಲಿ ದಿನೇ ದಿನೇ ಸುಧಾರಣೆ ಕಾಣುತ್ತಿದೆ. ಉದ್ಯಮ ಸಾಹಸಿ ಬಂಡವಾಳಗಾರರ ಐಶ್ವರ್ಯವೂ ಅಧಿಕಗೊಳ್ಳುತ್ತಿದೆ. ಸಿಂಗಪೂರಿನ ಪ್ರಜೆಯ ಸರಾಸರಿ ಆದಾಯ ವರ್ಷಕ್ಕೆ ಸುಮಾರು ೩೨,೦೦೦ ರೂಪಾಯಿಗಳು. ಹತ್ತು ವರ್ಷಗಳ ಕೆಳಗಿನ ಸರಾಸರಿ ಆದಾಯ ಇದರ ಅರ್ಧದಷ್ಟು ಇರಲಿಲ್ಲ.

ಉದ್ಯಮ ಕ್ಷೇತ್ರವನ್ನು ಬೆಳಸುವ ಪ್ರಯತ್ನದಲ್ಲಿ ಈ ರಾಷ್ಟ್ರಗಳು ಜಪಾನಿನ ನೀತಿಗಿಂತ ಭಿನ್ನವಾದ ನೀತಿಯನ್ನು ಅಳವಡಿಸಿಕೊಂಡಿವೆ. ಹಾಗಾಗಿ ವಿದೇಶಿ ಹೂಡಿಕೆದಾರರು ತಮ್ಮೊಡನೆ ತಾಂತ್ರಿಕ ಜ್ಞಾನವನ್ನು ತರುವುದರ ಜತೆಗೆ ಅಂತರಾಷ್ಟ್ರೀಯ ಮಾರುಕಟ್ಟೆಗಳಿಗೆ ಸುಲಭ ಒಳದಾರಿಯನ್ನು ಒದಗಿಸುತ್ತಾರೆ.

ತಮ್ಮ ರಾಷ್ಟ್ರದ ಸಮರ್ಥ ಉದ್ಯಮ ಸಾಹಸಿಗಳಿಗೆ ಒಳ್ಳೆಯ ಸ್ಪರ್ಧಾಕ್ಷೇತ್ರ ವನ್ನು ಈ ರಾಷ್ಟ್ರಗಳು ಒದಗಿಸುತ್ತವೆ. ಈ ಉದ್ಯಮ ಸಾಹಸಿಗಳು ರೂಪಿಸಿ ಕೊಳ್ಳುವ ಕಂಪೆನಿಗಳು ಸಾಮಾನ್ಯವಾಗಿ ಸರ್ವಾನುಮತದ ಆಧಾರದ ಮೇಲೆ

ನಡೆಯುವ ಜಪಾನಿನ ದೈತ್ಯ ಕಾರ್ಪೊರೇಷನ್‌ಗಳಿಗಿಂತ ಹೆಚ್ಚು ಚಲನಶೀಲವಾಗಿರುತ್ತವೆ ಹಾಗೂ ಶೀಘ್ರ ಪ್ರತಿಗಾಮಿಯಾಗಿರುತ್ತವೆ.

ಬ್ರಿಯಾನ್ ಚಾಂಗ್ ಎಂಬ ೩೮ ವರ್ಷದ ಸಿಂಗಪುರದ ಇಂಜಿನಿಯರ್ ಇಂದು ತೈಲಾನ್ವೇಷಣ ಬೈರಿಗೆ ಉತ್ಪಾದಕರಲ್ಲಿ ಅಗ್ರಗಣ್ಯ. ಹತ್ತು ವರ್ಷಗಳ ಹಿಂದೆ ಅವನು ತನ್ನ ದಂಧೆಯನ್ನು ಆರಂಭಿಸುವಾಗ ಅವನ ಬಂಡವಾಳ ಕೇವಲ ೮೦,೦೦೦ ರೂಪಾಯಿಗಳು ಕಳೆದ ವರ್ಷ ಅವನ ಸಂಸ್ಥೆಯಲ್ಲಿನ ವ್ಯಾಪಾರ ಹಣ ೮೮ ಕೋಟಿ ರೂಪಾಯಿಗಳು. ಆಗ್ನೇಯ ಏಶಿಯಾದ ತೈಲಾನ್ವೇಷಣ ಕ್ರಿಯೆಯನ್ನು ೧೯೭೫ ರಲ್ಲಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದಾಗ ಇವನ ಕಂಪನಿಯ ಸರಕುಗಳಿಗೆ ಬೇಡಿಕೆ ಕಡಿಮೆಯಾಯಿತು. ತಕ್ಷಣವೇ ತನ್ನ ಕಂಪನಿಯ ಉತ್ಪಾದನಾ ನೀತಿಯನ್ನು ಮಾರ್ಪಡಿಸಿಕೊಂಡು ವೆನಿಜುಲ ಹಾಗೂ ಅರಬ್ ಕೊಲ್ಲಿಯ ರಾಷ್ಟ್ರಗಳಲ್ಲಿ ಬಂದರುಕಟ್ಟೆ ನಿರ್ಮಾಣ ಹಾಗೂ ಬಂದರು ತೋಡುವಿಕೆ ಕಾರ್ಯಗಳನ್ನು ವಹಿಸಿಕೊಂಡು ಹಣಮಾಡಿದ.

ಈ ಏಶಿಯಾದ ಉದ್ಯಮ ದೈತ್ಯರು ತಮ್ಮ ರಫ್ತುಗಾರಿಕೆಯನ್ನು ಇನ್ನೂ ಉತ್ತಮಗೊಳಿಸಲು ಯೋಜನೆಗಳನ್ನು ಹಾಕಿಕೊಂಡು ತಮ್ಮ ಯಂತ್ರಸ್ಥಾವರ ಹಾಗೂ ಉತ್ಪಾದನ ಕೌಶಲ್ಯಗಳನ್ನು ಮತ್ತಷ್ಟು ಪರಿಷ್ಕರಿಸಲು ಯತ್ನಿಸುತ್ತಿದ್ದಾರೆ.

ತೈವಾನ್‌ನಲ್ಲಿರುವ ಅರ್ಥಶಾಸ್ತ್ರ ಸಂಸ್ಥೆಯ ನಿರ್ದೇಶಕ ಯುಟ್ವಾಂಗ್ ಶಿಯಾನ್ ಅವರು ತಮ್ಮ ರಾಷ್ಟ್ರದ ಗುರಿಯನ್ನು ಕೆಳಕಂಡಂತೆ ಸ್ಪಷ್ಟವಾಗಿ ವಿವರಿಸಿದ್ದಾರೆ. "ನಮ್ಮಲ್ಲಿನ ಸ್ಪರ್ಧಾತ್ಮಕ ಅನುಕೂಲಗಳನ್ನು ಗಮನಿಸಿದರೆ ಜಪಾನ್ ಮತ್ತು ಅಮೇರಿಕೆಗಳು ಕೆಲವು ಉದ್ಯಮಗಳನ್ನು ನಮಗೇ ಬಿಡಬೇಕು. ನಾವು ಅವುಗಳನ್ನು ಆಳವಡಿಸಿಕೊಳ್ಳಬೇಕು. ಇದು ಯಾವ ರೀತಿ ಎಂದರೆ ಹಿಂದೆ ಕ್ಯಾಮರಾ ಉತ್ಪಾದನಾ ಉದ್ಯಮದಿಂದ ಕೆಲವು ಘಟಕಗಳನ್ನು ಜಪಾನ್ ರಾಷ್ಟ್ರ ಅಮೇರಿಕ ಮತ್ತು ಯೂರೋಪ್‌ಗಳಿಂದ ಕಸಿದುಕೊಂಡಿರಲಿಲ್ಲವೆ?

ಕೆಲವು ಉದ್ಯಮ ಕ್ಷೇತ್ರಗಳಲ್ಲಿ ಉದ್ಯಮಗಳು ಕಾರ್ಮಿಕರಮೇಲೆ ಅವಲಂಬಿತವಾಗಿರುತ್ತವೆ. ಜೊತೆಗೆ ಹೆಚ್ಚು ವೇತನವನ್ನು ಕೊಡಲು ಅಲ್ಲಿ ಸಾಧ್ಯವಾಗಿರುವುದಿಲ್ಲ. ಅಂಥ ಉದ್ಯಮಗಳನ್ನು ಈ ಪುಟ್ಟ ದೈತ್ಯರು ಬಹಳ ಕಾಲ ನಡೆಸಲಾಗುವುದಿಲ್ಲ. ಚೀನಾದಂಥ ದೇಶಗಳಲ್ಲಿ ಅಗ್ಗವಾಗಿ ಕಾರ್ಮಿಕ ಬಲ ದೊರೆಯುತ್ತದೆ. ಈ ದೇಶಗಳು ಇತ್ತೀಚಿಗೆ ಉಡುಪುಗಳು, ಆಟದ ಸಾಮಾನುಗಳು ಮತ್ತಿತರ ಸರಳ ಗ್ರಾಹಕ ವಸ್ತುಗಳ ರಫ್ತನ್ನು ಅಧಿಕಗೊಳಿಸುತ್ತಿದ್ದಾರೆ. ಹಾಗಾಗಿ

ಯು ಟ್ಸಾಂಗ್ ಶಿಯಾನ್ ಹೇಳುವ ಮಾತುಗಳಲ್ಲಿ ಸತ್ಯಾಂಶವಿದೆ. ನಮ್ಮ ತಾಂತ್ರಿಕ ಜ್ಞಾನದ ಮಟ್ಟವನ್ನೂ ಇನ್ನು ಉತ್ತಮಗೊಳಿಸದಿದ್ದರೆ ಈ ಸ್ಪರ್ಧೆಯಲ್ಲಿ ನಾವು ಸೋತು ಅಗ್ಗದ ವೇತನಕ್ಕೆ ಕಾರ್ಮಿಕರು ದೊರೆಯುವ ಅಭಿವೃದ್ಧಿಶೀಲ ರಾಷ್ಟ್ರಗಳು ಯಶಗಳಿಸುತ್ತವೆ.

ತಾಂತ್ರಿಕೋಜ್ವಲ ಉದ್ಯಮಗಳತ್ತಲೇ ಗಮನವಿಟ್ಟು ತೈವಾನ್‌ನಲ್ಲಿ ಉದ್ಯಮಗಳನ್ನು ಬೆಳೆಸಲಾಗುತ್ತಿದೆ. ಪಾಶ್ಚಾತ್ಯ ಮಾರುಕಟ್ಟೆಯಲ್ಲಿ ಜಪಾನ್ ಬ್ರಾಂಡ್ ಸರಕುಗಳು ಹೆಸರು ಮಾಡಿರುವಂತೆ ಈ ಪುಟ್ಟ ದೈತ್ಯರ ಯಾವ ಬ್ರಾಂಡೂ ಹೆಸರು ಮಾಡಿಲ್ಲ. ಕಳೆದ ವರ್ಷ ಹಾಂಗ್‌ಕಾಂಗ್‌ನ "ಮೈಕ್ರೊ ಎಲೆಕ್ಟ್ರಾನಿಕ್ಸ್" ಕಂಪೆನಿ ಅಮೆರಿಕಾ ಕಂಪೆನಿಗಳಿಗೆ ಎಲೆಕ್ಟ್ರಾನಿಕ್ ಆಟದ ಯಂತ್ರಗಳನ್ನು ತಯಾರಿಸಿಕೊಟ್ಟು ೨೪ ಕೋಟಿ ರೂಪಾಯಿಗಳನ್ನು ಗಳಿಸಿತು. ಹಣವೇನೋ ಹಾಂಗ್‌ಕಾಂಗಿಗೆ ಬಂತು. ಹೆಸರು ಅಮೆರಿಕಾ ಕಂಪೆನಿಗಳಿಗೆ ಹೋಯಿತು. ಜಪಾನಿನ ಕೆಲವು ಸಂಸ್ಥೆಗಳಿಗೂ (ಉದಾ: ಸೋನಿ). ಇವು ಯಂತ್ರದ ಬಿಡಿ ಉಪಕರಣಗಳನ್ನು ತಯಾರಿಸಿಕೊಡುತ್ತಾರೆ. "ತಮಾಷೆಯೆಂದರೆ ಇತರರ ಹೆಸರುಗಳ ಮರೆಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ."


ತಾಂತ್ರಿಕತೆಯ ಏಣಿಯನ್ನು ಹತ್ತುವ ಪ್ರಬಲ ಯತ್ನವನ್ನು ಸಿಂಗಪುರ ಮಾಡುತ್ತಿದೆ. ಕಾರ್ಮಿಕರ ಮೇಲೆ ಅವಲಂಬಿತ ಕಾರ್ಖಾನೆಗಳನ್ನು ನಿರಾಶೆಗೊಳಿಸಲೋಸುಗವೇ ಕಾರ್ಮಿಕ ವೇತನವನ್ನು ಅಧಿಕಗೊಳಿಸಲಾಗುತ್ತಿದೆ. ವೇತನ ಶ್ರೇಣಿಯ ನಿರ್ಧಾರದ ಮೇಲೆ ಸರ್ಕಾರದ ಹಿಡಿತವಿರುವುದರಿಂದ ಕಳೆದ ಮೂರು ವರ್ಷಗಳಿಂದ ಸರಾಸರಿ ಶೇ|| ೨೦ ರಂತೆ ವೇತನಗಳು ಅಧಿಕಗೊಂಡಿವೆ.

ಸಿಂಗಪುರದ ವಿದೇಶ ಸಚಿವ ಸುಪ್ಪಯ್ಯ ಧನಬಾಲನ್ ಅವರ ಅಭಿಪ್ರಾಯ ಹೀಗೆ: "ಅಮೆರಿಕಾ ಮತ್ತು ಯುರೋಪ್‌ಗಳಲ್ಲಿ ದುರಂತಕ್ಕೊಳಗಾದ ಉದ್ಯಮಗಳ ಕಥೆ ನಮಗೆ ಮಹತ್ವದ ಪಾಠವಾಗಬೇಕಾಗಿದೆ. ನಾವು ಮೇಲೇರಬೇಕು ಇಲ್ಲವೆ ಕೆಳಕ್ಕೆ ಕುಸಿಯಬೇಕು."

ಅಧಿಕ ವೇತನ ನೀಡಿಕೆ ತಂತ್ರವನ್ನು ಸಿಂಗಪುರ ಸರ್ಕಾರ ಬಳಸುತ್ತಿರುವುದು ಆಗಲೇ ಪರಿಣಾಮಕಾರಿಯಾಗಿದೆ. ಸಿಂಗಪುರದಲ್ಲಿ ಒಟ್ಟು ಹೂಡಿಕೆ ಹಾಗೂ ಒಟ್ಟು ಸ್ಥಾವರ ಯಂತ್ರೋಪಕರಣಗಳ ಅಳವಡಿಕೆಯಲ್ಲಿ ಶೇ|| ೮೬ ರಷ್ಟು ಪಾಲನ್ನು ಹೊಂದಿರುವ ವಿದೇಶಿ ಕಂಪೆನಿಗಳು ಈಗಾಗಲೇ ಕಾರ್ಯೋನ್ಮುಖವಾಗಿವೆ. ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ತಾಂತ್ರಿಕವಾಗಿ ಹೆಚ್ಚಿಸುವ ಪ್ರಯತ್ನಗಳು ನಡೆದಿವೆ.

ಈ ನಾಲ್ಕು ಪುಟ್ಟ ದೈತ್ಯರ ಔದ್ಯಮಿಕ ಶಕ್ತಿಯನ್ನು ಬಳಸಿಕೊಂಡು ಅನೇಕ ಅಮೇರಿಕ ಕಂಪೆನಿಗಳು ಲಾಭಮಾಡಿಕೊಳ್ಳುತ್ತಿವೆ. ಜೊತೆಗೆ ಈ ನಾಲ್ಕು ಪುಟ್ಟ ರಾಷ್ಟ್ರಗಳು, ಜಪಾನ್ ಅಮೇರಿಕಾ ಮತ್ತು ಯೂರೋಪಿನಂಥ ದೈತ್ಯ ಉದ್ಯಮ ರಾಷ್ಟ್ರಗಳೊಡನೆ ಸ್ಪರ್ಧೆಗೆ ನಾಗಾಲೋಟದಿಂದ ಮುನ್ನುಗ್ಗುತ್ತಿವೆ. ಇಂಧನ ಶಕ್ತಿ ದುಬಾರಿಯಾಗುತ್ತಿರುವ ಜಾಗತಿಕ ವಾಣಿಜ್ಯ ಅನಿರ್ದಿಷ್ಟ ಸ್ಥಿತಿಯಲ್ಲಿರುವ, ಏರುಪೇರುಗಳು ಎಚ್ಚರವಲ್ಲಿರುವ ಇಂಥ ಸಂದರ್ಭದಲ್ಲಿ ಈ ಪೈಪೋಟಿಯಲ್ಲಿ ಪುಟ್ಟ ದೈತ್ಯರು ಗೆದ್ದಾರೆಯೇ ಎಂಬುದನ್ನು ಕಾದುನೋಡಬೇಕು.

ಸಿ. ಗೋವಿಂದೇಗೌ



ಭಿಕ್ಷೆಬೇಡುತ್ತ ಇತರರ ಸಂಪಾದನೆಯ ಮೇಲೆ ಜೀವನ ಮಾಡುತ್ತ ಸಾಧು ಸಂತರೆಂದು ಹೇಳಿಕೊಳ್ಳುತ್ತಿರುವವರನ್ನು, ನಾನೆಂದೂ ಮೆಚ್ಚುವುದಿಲ್ಲ, ತನ್ನ ಸ್ವಂತ ಸಂಪಾದನೆಯನ್ನು ಇತರರೊಂದಿಗೆ ಹಂಚಿಕೊಂಡು, ಸಜ್ಜೀವನೆಯನ್ನು ಮಾಡುವವರನ್ನೇ ನಾನು ಮಹಾತ್ಮರೆನ್ನುತ್ತೇನೆ.

—ಗುರುನಾನಕ್

ರಾಜಕೀಯ ಕ್ಷೇತ್ರದಲ್ಲಿಯ ನನ್ನ ಪ್ರಯೋಗಗಳನ್ನು ಭಾರತವೇ ಅಲ್ಲದೆ ಬಹುಮಟ್ಟಿಗೆ ನಾಗರಿಕ ಜಗತ್ತೂ ಅರಿತಿದೆ. ನನಗಾದರೋ ಅವುಗಳು ಹೆಚ್ಚು ಮೌಲ್ಯವಾದವುಗಳಲ್ಲ. ನಾನು ಸಾಧಿಸಬೇಕೆಂದಿರುವದು ಆತ್ಮಸಾಕ್ಷಾತ್ಕಾರ; ದೇವರನ್ನು ಮುಖತಃ ದರ್ಶಿಸಿ ಮೋಕ್ಷಸಾಧನೆ ಮಾಡುವದು.

—ಗಾಂಧೀಜಿ

ಕೈಯಾಸೆ

ಇಂದೂರಿಗೆ ಹೋಗುವ ಬಸ್ಸನ್ನು ಹಿಡಿಯಬೇಕಿತ್ತು. ಆಗಲೇ ಬಸ್ಸಿನ ವೇಳೆಯೂ ಆಗಿತ್ತು. ನಾನು ಬೀಡಾದವನಿಗೆ ಒಳ್ಳೆಯ ಎಲೆ, ಗೋಟಡಿಕೆ, ನೂರಿಪ್ಪತ್ತನೇ ನಂಬರಿನ ತಂಬಾಕು, ಲವಂಗ, ಏಲಕ್ಕಿ, ಸಕ್ಕರೆ ಎನ್ನುವ ಪಟ್ಟಿ ಒಪ್ಪಿಸಿ, ಆದಷ್ಟು ಬೇಗ ಬೀಡಾ ತಯಾರಿಸಿಕೊಡಲು ಹೇಳುತ್ತಿರುವಾಗ ನನ್ನ ಬೆನ್ನಿನ ಮೇಲೆ ಯಾರೋ ತಮ್ಮ ಒರಟು ಕೈಯಿಂದ ಬಡಿದು 'ವಿಮು' ಅಂದಂತಾಯಿತು.

ಈ ಊರು ನನಗೆ ಹೊಸತು. ನಾಲ್ಕು ತಿಂಗಳ ಹಿಂದಷ್ಟೆ ವರ್ಗವಾಗಿ ಬಂದಿದ್ದೆ. ಹಾಗಾಗಿ ವಿ. ವಿಮಲಕುಮಾರ್, ವಿಮಲಕುಮಾರ ಅವರೆ ಹೊರತು 'ವಿಮು' ಅನ್ನೋ ಕರೆ ಹೇಗೆ ಬರೋಕೆ ಸಾಧ್ಯ ಎಂಬ ಯೋಚನೆಯಿಂದ ಎಚ್ಚೆತ್ತು ಹಿಂತಿರುಗಿ ನೋಡಿದಾಗ ಆ ಒರಟು ಕೈಯವನನ್ನು, ವಿಮು ಎಂದು ಆತ್ಮೀಯವಾಗಿ ಕರೆದವನನ್ನು ಅಪರಿಚಿತನಂತೆ ನಿರ್ವಿಕಾರದಿಂದ ನಿಟ್ಟಿಸಿದೆ–ಗುಳಿಬಿದ್ದ ಕೆನ್ನೆ, ನೆರೆತ ಗಡ್ಡ, ಹಣೆಯಮೇಲೊಂದು ಬೊಟ್ಟು, ಇಂಥ ಸೆಖೆಯಲ್ಲೂ ಕ್ಲೋಸ್‌ಕಾಲರಿನ ಕೋಟು, ಸುಕ್ಕು ಸುಕ್ಕಾದ ಚಲ್ಲಣ, ಕಾಲಲ್ಲಿ ಹರಿದ ಚಪ್ಪಲಿ ಮತ್ತು ಕಣ್ಣಿಗೆ ದಪ್ಪಗಾಜಿನ ಕನ್ನಡಕ.

“ನಿಂಗೆ ಗುರುತು ಸಿಗಲಿಲ್ವ ವಿಮು ?”

ಎಂದು ಆ ವ್ಯಕ್ತಿ ತುಸು ನಕ್ಕು ನುಡಿದಾಗ ನಾನು ಅವನಿಗೆ ಏನನ್ನೂ ಹೇಳಲಾರದವನಾಗಿದ್ದೆ. ಅಷ್ಟರಲ್ಲಿ ಅವನೇ ಕೇಳಿದ :

“ಗುರುತು ಸಿಗಲಿಲ್ಲ ಅಲ್ವಾ ?”

ತನ್ನ ಕೈಯಲ್ಲಿರೋ ಪ್ಲಾಸ್ಟಿಕ್ ಚೀಲವನ್ನು ಒಂದು ಕೈಯಿಂದ ಇನ್ನೊಂದು ಕೈಗೆ ಬದಲಾಯಿಸಿದ.

ನಾನು ಏನೋ ಹೇಳಬೇಕೆನ್ನುವಷ್ಟರಲ್ಲಿ ಬೀಡಾದವನು 'ಸ್ವಾಮಿ, ನಿಮ್ಮ ಬೀಡಾ' ಎಂದ.

ಅವನತ್ತ ತಿರುಗುತ್ತ ನೆನಪಿಸಿಕೊಳ್ಳತೊಡಗಿದೆ—ಇವನನ್ನು ಎಲ್ಲೂ ಕಂಡ ನೆನಪೇ ಇಲ್ಲವಲ್ಲ. ಆದರೆ ಇವನ ದನಿ, ಮಾತಾಡೋ ರೀತಿ, ಮುಖದ ಮೇಲೆ ನನ್ನ ಬಗೆಗಿರೋ ಆತ್ಮೀಯತೆ ಇವೆಲ್ಲ ಪರಿಚಿತ ಎನ್ನಿಸುತ್ತಿದೆ. ಇವನನ್ನು ಎಲ್ಲಿ

೧೯೮೩ನೇ ಏಪ್ರಿಲ್ ತಿಂಗಳಿನ ನವನೀತದಲ್ಲಿ ಪ್ರಕಟವಾದ ಡಾ॥ ರಾಜೇಂದ್ರ ಪ್ರಸಾದ ಶರ್ಮ ಅವರ 'ಘೂಸ್' ಕಥೆಯ ಭಾಷಾನುವಾದ.

ಕಂಡಿದ್ದೆ? ಈ ಸದ್ಗೃಹಸ್ಥನಿಗೆ ಯಾವಾಗ ಸಿಕ್ಕಿದ್ದೆ?

ಕೈಯಲ್ಲಿ ಬೀಡಾ ಹಿಡಿಯುತ್ತಿದ್ದಂತೆಯೇ ನೆನಪಾಯಿತು. ದೀನಾನಾಥ, ಛೆ! ದೀನಾನಾಥ ಇರಲಾರರು. ಅಂದು ನಾವು ಅವನನ್ನು ರೇಗಿಸೋಕೆ ಅಂತ 'ದೀನೂಚಾಚಾ' ಅನ್ನುತ್ತಿರಲಿಲ್ವೆ? ಹೌದು ಅವನೇ ಅನ್ನೋ ಖುಶಿಯಲ್ಲಿ ಬಾಯಲ್ಲಿ ಬೀಡಾ ತುಂಬಿಕೊಳ್ಳುತ್ತ,

"ನಿಮ್ಮನ್ನ ಗುರುತಿಸಕ್ಕಾಗೋದಿಲ್ಲ. ತಮಾಶೆ ಮಾಡ್ತೀರ?" ಎಂದೆ.

"ಒಳ್ಳೇದು, ಹಾಗಾದ್ರೆ ನಾನ್ಯಾರೂಂತ ಹೇಳು ನೋಡೋಣ"

ಎಂದು ಅವನು ಜೋರಾಗಿ ನಕ್ಕಾಗ ಆ ಮುದಿಮುಖವೂ ಸ್ವಲ್ಪ ಕೆಂಪಾಯಿತು. ಒಮ್ಮೆ ನನ್ನ ಊಹೆ ತಪ್ಪಾಗಿದ್ದರೆ ಈ ಅಂಗಡಿ ಎದುರು ಅಭಾಸವಾಗಲಿಕ್ಕಿಲ್ಲ ತಾನೆ ಎಂದು ಯೋಚಿಸಿ, ಇದರಿಂದ ತಪ್ಪಿಸಿಕೊಳ್ಳಲಿಕ್ಕಾಗಿ ಬೀಡ ತಿನ್ನುತ್ತ, "ನೀವ್ಯಾರು ಅನ್ನೋದನ್ನ ಆಮೇಲೆ ಹೇಳ್ತೀನಿ. ಈಗ ಬೀಡ ತಿಂತೀರ ಹೇಳಿ" ಎಂದು ನಕ್ಕೆ.

"ನಿನ್ನ ಹಾಗೆ ನಾನೂ ಬೀಡ ತಿನ್ನೋವ್ನು ಅನ್ನೋದನ್ನ ಮರೆತ್ಯಾ?"

"ಇರ್ಬಬಹುದು. ಅದ್ರೆ ತುಂಬ ದಿನವಾಯ್ತಲ್ಲ ಹಾಗಾಗಿ ಏನಾದ್ರೂ ಬದಲಾಗಿದೀರ ಅಂತ"

ಎಂದು ನುಡಿದು ಅಂಗಡಿಯವನಿಗೆ ಬೀಡದ ಸವಿಯನ್ನು ವರ್ಣಿಸುತ್ತಲೇ ಯೋಚಿಸತೊಡಗಿದೆ---ಇವನಿಗೆ ಮಿ. ದೀನಾನಾಥ, ದೀನಾನಾಥ ಅವರೆ, ದೀನೂ ಚಾಚಾ ಇದರಲ್ಲಿ ಯಾವುದನ್ನು ಕರೆಯಲಿ. ದೀನೂಚಾಚಾ ಅಂದರೆ ಎಲ್ಲಾದರೂ ತಪ್ಪಾಗಿ ಮೊದಲಿನಂತೆ ರೇಗಾಡಿದರೆ, ಸಿಡುಕಿ ಬೈಯೋಕೆ ಶುರು ಮಾಡಿದರೆ, ಈ ಪೇಟೆ ಮಧ್ಯೆ ಇದೊಳ್ಳೆ ತಾಪತ್ರಯ ಆಯ್ತಲ್ಲ.

"ಹೇಳು ಮತ್ತೆ ನಾನು ಯಾರೂಂತ"

ಎಂದು ಅವನು ಮಕ್ಕಳಂತೆ ಮೊಂಡುಹಿಡಿದಾಗ, ಬೀಡದವನಿಂದ ಒಂದು ಬೀಡ ತೆಗೆದುಕೊಂಡು ಅವನನ್ನು ಸಮೀಪಿಸುತ್ತ ಹೇಳಿದೆ.

"ತಾವು ಮಿ. ದೀನಾನಾಥರಲ್ಲವೆ?"

ಬೀಡವನ್ನು ಬಾಯಿಗೆ ತುರುಕುತ್ತ ನುಡಿದ: "ತಪ್ಪು"

ನಾಚಿಕೆಯಿಂದ ಅಕ್ಕಪಕ್ಕ ನೋಡುತ್ತ ಕೇಳಿದೆ:

"ಹಾಗಾದ್ರೆ?"

ಅಂಗಡಿಯವನಿಗೆ ದುಡ್ಡು ಕೊಟ್ಟೆ.

"ನಾನು ಮಿ। ದೀನಾನಾಥ ಅಲ್ಲ. ದೀನೂ ಚಾಚಾ ಮಿಮೂ"

ಎಂದು ಅವನು ನಕ್ಕು ನುಡಿದಾಗ ನಾನು ಬಿಟ್ಟ ಬಾಣ ಗುರಿ ತಲುಪಿತಲ್ಲ ಎಂದು ಒಳಗೇ ಖುಶಿಪಟ್ಟೆ.

"ಅಪ್ಸರಿ ದೀನೂಚಾಚಾ, ನೀವು ಇಲ್ಲಿ ಹೇಗೆ? ಇಷ್ಟು ದಿನದ ಮೇಲೆ....?" ಎಂದು ನಾನು ಸಂತೋಷದಿಂದ ಕೇಳುತ್ತಿದ್ದಂತೆಯೇ, ಅವನು ನನ್ನ ಮಾತನ್ನು ಅರ್ಧಕ್ಕೇ ತಡೆಯುತ್ತ,

"ಪೇಟೆ ಕಡೆಗೆ ತಾನೆ? ನಾನೂ ಆ ಕಡೆಗೇ ಹೋಗ್ತಿದೀನಿ"

ಎಂದನು. ನನ್ನ ಕೈ ಚೀಲ ಹಿಡಿದು ಅವನಿಗೆ ಜೊತೆಯಾದೆ.

ದೀನಾನಾಥ ಏನನ್ನೋ ಯೋಚಿಸುತ್ತಿದ್ದ. ಬಾಯಲ್ಲಿ ಬೀಡ ನುಗ್ಗಾಗುತ್ತಿತ್ತು. ಅವನಿಗೆ ಇಂಥ ದುರವಸ್ಥೆ ಹೇಗೆ ಬಂತು ಎಂದು ತಿಳಿಯಲು ಕಾತರಗೊಂಡಿದ್ದೆ. ಲೂಧಿಯಾನದಲ್ಲಿ ನಾವು ಒಂದು 'ಡಿಪಾರ್ಟಮೆಂಟಲ್ ಟ್ರೈನಿಂಗ್' ನಲ್ಲಿದ್ದಾಗ ಇವನು ಎಷ್ಟು ಚೆನ್ನಾಗಿದ್ದ. ಎಂಥ ಚುರುಕುತನವಿತ್ತು. ಅದರೆ ಇವತ್ತು ಈಗ ಈ ಸ್ಥಿತಿಗೆ ಬರೋಕೆ ಏನು ಕಾರಣವಿರಬಹುದು. ಅವನು ಒಮ್ಮೆಲೇ,

"ನೀನೀಗ ಎಲ್ಲಿದೀಯೆ? ಏನ್ಮಾಡ್ತಿದೀಯೆ? ನಿನ್ನ ಬಟ್ಟೆ ಬರೆ ಎಲ್ಲ ನೋಡಿದ್ರೆ ಬಾಳ ಉನ್ನತ ಹುದ್ದೇಲಿ ಇದ್ದಂತೆ ಕಾಣ್ಸುತ್ತೆ"

ಎಂದು ಪ್ರಶ್ನಿಸಿದ.

"ಎಲ್ಲ ತಮ್ಮ ದಯೆ ದೀನೂಚಾಚಾ, ಒಂದು ಟ್ರೈನಿಂಗ್ ಇನ್‌ಸ್ಟಿಟ್ಯೂಟಿನಲ್ಲಿ ಫೋರಮನ್ನಾಗಿದೀನಿ"

ಎಂದು ವಿನಮ್ರನಾಗಿ ನುಡಿದೆ.

"ಎಷ್ಟು ಸಿಗುತ್ತೆ ?"

"ಎಲ್ಲೋ ಹನ್ನೆರಡು, ಹದಿಮೂರು ನೂರು."

"ಹಾಗೆಂತ ಆಗ್ಲೇ ನೀನು ಯೋಚಿಸಿಕೊಂಡಿದ್ದೆ."

"ಹೇಳಿದ್ನಲ್ಲಾ ಎಲ್ಲ ತಮ್ಮಂಥೋರ ದಯೆ ಅಂತ"

ತಿರುಗಿ ಅವನು ಏನನ್ನೋ ಯೋಚಿಸತೊಡಗಿದ. ಇವತ್ತು ದೀನೂಚಾಚಾ ಅಂತ ಕರೆದರೂ ಯಾಕೆ ಜಗಳಕ್ಕೆ ಬರಲಿಲ್ಲ ಎಂದು ಆಶ್ಚರ್ಯವಾಯಿತು. ಲೂಧಿಯಾನದಲ್ಲಾಗಿದ್ದರೆ....?

ಲೂಧಿಯಾನದಲ್ಲಿ ಜೊತೆಯವರ ಚಿತಾವಣೆಯಿಂದ ಮೊದಲ ಬಾರಿಗೆ ಇವನನ್ನು 'ದೀನೂಚಾಚಾ' ಅಂದಾಗ ಸಿಟ್ಟಿನಿಂದ ಗದರಿದ್ದಲ್ಲದೆ ನನ್ನನ್ನು ತರಾಟೆಗೆ ತೊಗೊಂಡಿದ್ದ.

"ಲೇ ಬೆಪ್ಪ, ಬೇರೆಯವ್ರ ಮಾತ್ಕೇಳಿ ನನ್ನ ಹತ್ರ ಹೊಡ್ತಾ, ತಿನ್ಬೇಡ ಗೊತ್ತಾಯ್ತ?"

"ಯಾಕೆ?"

"ನಂಗ್ಯಾಕೆ ಚಾಚಾ ಅಂತೀಯೆ? ನನ್ನ ಕೂದಲು, ಗಡ್ಡ ಎಲ್ಲ ಚಾಚಾ ಅನ್ನೋವಷ್ಟು ಮುದಿ ಆಗಿದೆಯಾ?"

"ಅದು ಫ್ಯಾಶನ್ನಿಗಾಗಿ ದೀನೂಚಾಚಾ"

"ಓಹೋ! ಇಂಥವೆಲ್ಲ ನಿಮ್ಗೆ ಫ್ಯಾಶನ್ನೊ!"

"ಇದ್ರಿಂದ ನಿಮ್ಗೇನ್ ತೊಂದ್ರೆ ದೀನೂಚಾಚಾ?"

"ನಾನ್ಹೇಳ್ತಾ ಇದ್ದಂತೆ ತಿರುಗ ಚಾಚಾ ಅಂತೀಯ ನಾಚಿಗ್ಗೆಟ್ಟವನೆ"

"ಹಾಗಾದ್ರೆ ನಿಮ್ಮನ್ನ ಏನಂತ ಕರೀಬೇಕು ದೀನೂ ಚಾಚಾ?"

"ಥತ್, ಸುಮ್ಗೆ ಹೋಗ್ತೀಯೊ, ಎರಡು ಬಿಗೀಬೇಕಾ? ಮಿ. ದೀನಾನಾಥ ಅಂದ್ರೆ ನಿನ್ ಬಾಯಲ್ಲಿ ಹುಣ್ಣಾಗುತ್ತಾ? ನಿನ್ಗಿಂತ ಏನ್ಮಹಾ ದೊಡ್ಡವನು.

"ಓಹೋ! ಹಾಗೋ ವಿಷ್ಯ"

"ಹೌದು. ಅದ್ರಲ್ಲಿ ನಗುವಂಥದೇನಿದೆ?"

"ಮತ್ತ್ಯಾಕೂ ಅಲ್ಲ. ಇಂಗ್ಲಿಷರು ಹೋದ್ರು. ಆದ್ರೆ ಮಿಸ್ಟರ್ ಅಂಥ ಕರೆಸ್ಕೊಳ್ಳೋರನ್ನ ಇಲ್ಲೇ ಬಿಟ್ಟು ಹೋದ್ರಲ್ಲ ಅಂತ. ನೀವ್ಯಾಕೆ ಇಂಗ್ಲಿಷರ ಜೊತೆಗೆ ಹೋಗಲಿಲ್ಲ ದೀನೂ ಚಾಚಾ?"

"ಅರೆ, ಲಜ್ಜೆಗೆಟ್ಟವ್ನೆ, ತಿರುಗ ದೀನೂ ಚಾಚಾ ಅಂತೀಯ"

"ನಂಗೆ ಅದೇ ರೂಢಿಯಾಗ್ಬಿಟ್ಟಿದೆ."

"ದೊತ್ತ ತಿಂತೀಯೆ ನೋಡು"

"ದೀನೂಚಾಚಾ, ನಾವೆಲ್ಲ ಇಲ್ಲಿ ಡ್ಯೂಟಿ ಮೇಲೆ ಇರೋವ್ರು, ನೀವೆನಾದ್ರೂ ಹೊಡೆದ್ರಿ ಅಂದ್ರೆ ಅಶಿಸ್ತಿನ ವರ್ತನೆಯ ಆರೋಪಕ್ಕಾಗಿ ನಿಮ್ಮ ಕೆಲ್ಸ ಕಳ್ಕೊಳ್ತೀರ"

"ದೀನೂಚಾಚಾ...."

"ಏನು ಏನು?" ಅವನು ಬೆಚ್ಚಿ ಬಿದ್ದು ಕೇಳಿದ.

ನಾನು ನನ್ನ ವಾಚಿನತ್ತ ದೃಷ್ಟಿಹರಿಸುತ್ತ ಹೇಳಿದೆ:

"ನಿಮ್ ವಿಷಯ ಏನು ಎತ್ತ ಅಂತ ಕೇಳ್ತಿದೀನಿ. ಮತ್ತೆ ನಿಮ್ ಮಕ್ಕಳು..."

"ಎಲ್ಲ ಫಸ್ಟ್ ಕ್ಲಾಸಾಗಿದ್ದಾರೆ. ಹಿರಿಯವ್ನು ಈ ಊರಲ್ಲೇ ದೊಡ್ಡ ಆಫೀಸ

ರಾಗಿದ್ದಾನೆ. ನಿಂಗೂ ಗೊತ್ತಿರ್ಬಹುದು. ಡಿ. ಕೆ. ಕಶ್ಯಪ ಅಂತ" ಎಂದು ಹೆಮ್ಮೆ ಯಿಂದ ನುಡಿದ.

"ಓಹೋ, ಅವ್ನು ನಿಮ್ ಮಗನೇ? ಅವ್ನ ಹೆಸ್ರು ಕೇಳಿದ್ರೆ ಊರಿಗೆ ಊರೇ ನಡುಗುತ್ತೆ. ಏನು ವ್ಯಕ್ತಿತ್ವ.... ಪ್ರಾಯಶಃ ಸಿವಿಲ್ ಲೈನಿನಲ್ಲಿ ಅವನ ಬಂಗಲೆಯೂ ಇರ್ಬೇಕು"

ಎಂದು ನಾನು ಅದೇ ದನಿಯಲ್ಲೇ ನುಡಿದೆ.

"ಎರಡನೇವ್ನು ಒಂದು ಫ್ಯಾಕ್ಟರೀಲಿ ಮೆನೇಜರು. ಮೂರನೇಯವ್ನು ಓವರಸಿಯರು ಕೊನೆಯವ್ಳು ಮಗಳು. ಅವ್ಳ ಮದ್ವೆಯೊಂದು ಆಗ್ಬಿಟ್ರೆ........"

ಅವರ ಮಾತನ್ನು ಅರ್ಧಕ್ಕೇ ತಡೆಯುತ್ತ ಹೇಳಿದೆ:

"ಭಾಪರೆ, ಹಾಗಾದ್ರೆ ಪ್ರತಿ ತಿಂಗ್ಳು ನಿಮ್ ಎದುರು ನೋಟಿನ ಕಂತೆ....!" ಆ ಕ್ಷಣವೇ ಆಲೋಚನೆ ಬಂತು–ಇಷ್ಟೊಂದು ಆದಾಯ ಇದ್ರೂ ಇವ್ರಿಗೆ ಈ ಹೀನಸ್ಥಿತಿ ಯಾಕೆ ಬಂತು ಎಂದು ಕೇಳೋಣ ಅನ್ನಿಸ್ತು. ಅದ್ರೆ........ಒಮ್ಮೆ ತಪ್ಪಾಗಿ ಭಾವಿಸಿ ಆ ಮೇಲೆ........ನಾಟಕ ಅಲ್ಲ ತಾನೆ?

"ಈಗ ನೀವು ಎಲ್ಲಿದೀರಿ?"

"ಇಲ್ಲೇ ಹತ್ತಿರದ ಒಂದು ಹಳ್ಳಿಯಲ್ಲಿ. ಫರ್ನಿಚರಿನ ಒಂದು ಚಿಕ್ಕ ಅಂಗಡಿ ಮಾಡ್ಕೊಂಡು ನಾನು, ನಿನ್ನ ಚಾಚಿ ಮತ್ತು ಮಗ್ಳು......ಹೇಗೋ ಹೊಟ್ಟೆಗೆ ಬಟ್ಟೆಗೆ ಸಾಕಾಗುತ್ತೆ"

ಅವರ ದನಿಯಲ್ಲಿ ಔದಾಸೀನ್ಯ ನೆಲೆಸಿತ್ತು.

ಕೈಯಲ್ಲಿರೋ ವಾಚಿನತ್ತ ದೃಷ್ಟಿ ಹೋಗುತ್ತಲೇ ಬೆಚ್ಚಿಬಿದ್ದೆ. ನಾನು ಹೋಗಬೇಕಾಗಿದ್ದ ಬಸ್ಸು ಆಗಲೇ ಹೋಗಿರಬೇಕು. ಇನ್ನೂ ಒಂದೂವರೆ ಗಂಟೆ ಕಾಯಬೇಕು ಇನ್ನೊಂದು ಬಸ್ಸಿಗೆ.

"ಅರೆ, ನೀವು ಸರಕಾರಿ ಕೆಲಸದಲ್ಲಿದ್ರಲ್ಲ ಅದೇನಾಯ್ತು?"

"ಒಂದು ಗಲಾಟೇಲಿ ಕೆಲ್ಸ ಹೊರಟುಹೋಯ್ತು ವಿನು"

"ಹೇಗೆ? ಏನಾಗಿತ್ತು?"

ದೀನನಾಥನ ಮುಖ ಒಮ್ಮೆಲೇ ಇಳಿದು ಹೋಯಿತು. ನಾನು ಈ ಪ್ರಶ್ನೆ ಕೇಳಿ ಅವನ ದುಃಖದ ಗೂಡಿಗೆ ಕೈಯಿಕ್ಕಿದಂತಾಯಿತು. ಮಾತು ಬದಲಿಸುವ ಸಲುವಾಗಿ ಕೇಳಿದೆ;

"ನೀವೀಗ ಹಳ್ಳಿಯಿಂದ ಬರ್ತಿದೀರೋ ಅಥವಾ ಹಳ್ಳೀಗೆ ಹೋಗ್ತಿದೀರೋ?"

"ಹಳ್ಳಿಯಿಂದ ಬೆಳಗಿನ ಗಾಡಿಗೆ ಬಂದೆ. ಈಗ ಮಗನ ಹತ್ರ ಹೋಗ್ತಿದ್ದೀನಿ.

ಅದೇ ಡಿ. ಕೆ. ಕಶ್ಯಪ. ಅವ್ನ ಹೆಸರಿಗೆ ಇಡೀ ಊರೇ........"

"ಮೇಲುಗೈಯಾಗಿದೆ"

"ಮೇಲುಗೈ ಯಾವುದ್ರಲ್ಲಿ?"

"ನೀವು ಬೆಳಗಿನ ಗಾಡಿಗೇ ಬಂದವ್ರು. ಈಗ ಸಂಜೆ ಆರಾಗುವುದ್ರಲ್ಲಿದೆ. ಇದುವರೆಗೂ ನೀವು ನಿಮ್ಮಗನ ಹತ್ರ–ಅದೇ ವಿ. ಡಿ. ಕೆ. ಕಶ್ಯಪನಲ್ಲಿಗೆ ಹೋಗಿಲ್ಲ?"

"ಹೋಗ್ತೀನಿ. ಅವಸರ ಯಾಕೆ? ನನ್ಮಗ ದೊಡ್ಡ ಆಫೀಸರು. ಹಗಲೆಲ್ಲ ಅವ್ನಿಗ್ಯಾಕೆ ತೊಂದ್ರೆ ಮಾಡೋದು. ಸೊಸೆ ಮತ್ತೆ ಮಕ್ಕಳು ಕೂಡ........!"

ಅವನ ಮಾತಿನತ್ತ ನನ್ನ ಲಕ್ಷ್ಯವಿರಲಿಲ್ಲ. ಅವನಿಂದ ತಪ್ಪಿಸಿಕೊಳ್ಳೋ ಉಪಾಯವನ್ನು ಹುಡುಕುತ್ತಿದ್ದೆ.

"ಮಕ್ಕಳಿರೋವಾಗ ಬರೀ ಕೈಯಲ್ಲಿ ಹೇಗೆ ಹೋಗೋದು ಹೇಳು ಮಮು. ನಮ್ ಹಳ್ಳೀಲಂತೂ ಏನೂ ಸಿಗೋಲ್ಲ. ಹಾಗಾಗಿ ಪೇಟೆಯಿಂದ ಏನಾದ್ರೂ ತೊಗೊಂಡು ಹೋಗೋದು ಬೇಡ್ವೆ?"

ಅವನ ದನಿಯಲ್ಲಿ ಗರ್ವವಿತ್ತು.

"ಹಾಗೋ ಸಮಾಚಾರ"

ಎನ್ನುತ್ತ ಅವನ ಚೀಲವತ್ತ ಕಣ್ಣು ಹಾಯಿಸಿದಾಗ ನಾಲ್ಕಾರು ಕೊಳೆತ ಬಾಳೆ ಹಣ್ಣುಗಳು ಕಣ್ಣಿಗೆ ಬಿದ್ದವು.

"ಹಾಗಂತ ಮಗ ಏನೂ ಅನ್ನಲ್ಲ. ಆದ್ರೂ....ಸೊಸೆ ಬರೀಕೈಯಲ್ಲಿ ಹೋದ್ರೆ ಸಿಟ್ಟಾಗ್ತಾಳೆ."

ಎಂದು ಮೆಲ್ಲನುಸುರಿದ.

"ಹೂಂ"

"ಒಮ್ಮೆ ಸಿಟ್ಟಿನಿಂದ ಹೇಳಿಯೂ ಇದ್ದಳು."

"ಏನಂತ"

"ಜನ ಬಾಗ್ಯೆಯಲ್ಲಿ ಬಂದು ಬಂಗಲೇಲಿ ಠಿಕಾಣಿ ಹೂಡ್ತಾರೆ. ಇದೇನು ಧರ್ಮಶಾಲೇನ? ಮಕ್ಕಳಿಗೇನಾದ್ರು ತರ್ಬೇಕು ಅಂತಾನೂ...."

"ಹಾಗಾದ್ರೆ ನಿಮ್ ಸೊಸೆ ಬಾಳ ಕೆಟ್ಟ ಹೆಂಗ್ಸು, ದಿನೂ ಚಾಚಾ. ಅದೂ ಮಾವನ ಜೊತೆ........!" ವಾಚಿನತ್ತ ನೋಡುತ್ತ ನುಡಿದೆ.

"ಲವ್–ಮ್ಯಾರೇಜಿನ ಸೊಸೆ ಅಲ್ವ?"

ನಾನು ನಿಧಾನವಾಗಿ ಉತ್ತರಿಸಿದೆ:

"ಲವ್-ಮ್ಯಾರೇಜಾದ ಸೊಸೆ ಸೊಕ್ಕು ಮಾಡ್ಬೇಕು ಅಂತಿದಿಯ ದೀನೂ ಚಾಚಾ. ನಾನೂ ಲವ್ ಮ್ಯಾರೇಜಾದವ್ನೇ. ಆದ್ರೆ ನಿಮ್ ಸೊಸೆ ಬಿಂದು ನಮ್ ತಂದೆನ ಎಷ್ಟೊಂದು ಸೇವೆ ಮಾಡಿದ್ಲು ಅಂದ್ರೆ ಸಾಯೋವರ್ಗೂ ಅವ್ರು ಹರಸ್ತಾನೇ ಇದ್ರು........"

ಅವನು ನನ್ನ ಮಾತನ್ನು ಮಧ್ಯದಲ್ಲೇ ತಡೆಯುತ್ತ,

"ಎಲ್ಲ ಅವರವ್ರು ಪಡೆದುಬಂದಿದ್ದು"
ಎನ್ನುವಾಗ ಅವನ ದನಿ ಗದ್ಗದಿತವಾಗಿತ್ತು.

"ಅದೇನು ಪದೇ ಪದೇ ವಾಚು ನೋಡ್ತಾ ಇದೀಯೆ. ಎಲ್ಲಾದ್ರು ಹೋಗ್ಬೇಕಾಗಿದ್ಯಾ?"

"ಹೌದು, ಇಂದೂರಿಗೆ ಹೋಗ್ತಿದ್ದೇನೆ"

"ಇಂದೂರಿಗೆ, ಯಾಕೆ?"

"ನಿಮ್ ಸೊಸೆ ಬಿಂದು ಕೆಲ್ಸ ಮಾಡ್ತಿರೋದು ಅಲ್ಲೆ ತಾನೆ?" ಮಕ್ಕಳು ದೊಡ್ಡವರಾಗ್ತಿದ್ದಾರೆ. ಪರೀಕ್ಷೆ ನಂತ್ರ ಯಾವ್ದೂ ನೋಡ್ಬೇಕು–ನಂಗೆ ಅಲ್ಲಿಗೆ ಟ್ರಾನ್ಸ್‌ಫರ್ ಆಗುತ್ತೋ ಅಥ್ವಾ ಬಿಂದೂಗೆ ಇಲ್ಲಿಗೆ ಆಗುತ್ತೋ ಅಂತ. ಇಲ್ದಿದ್ರೆ"

"ಇಲ್ದಿದ್ರೆ?"

"ಇಲ್ದಿದ್ರೆ, ಬಿಂದು ಕೆಲ್ಸ ಬಿಡ್ತಾಳೆ."

"ಏನು ಅವ್ಳು ಕೆಲ್ಸ ಬಿಡ್ತಾಳ್ಯೆ?"

"ನಿಜವಾಗಲೂ. ಇಲ್ದಿದ್ರೆ ನಾನು ಅವಳನ್ನ ಬಿಟ್ಬಿಡ್ತೀನಿ."
ಎಂದು ನಕ್ಕೆ. ಅದಕ್ಕೆ ಅವನು ಜೋರಾಗಿ ನಕ್ಕು,

"ನೀನಿನ್ನೂ ನಿನ್ನ ತಮಾಶೆ ಮಾಡೋ ರೂಢೀನ ಬಿಟ್ಟಿಲ್ಲ ಅನ್ನು. ನಡಿ, ನಿನ್ ಬಸ್‌ಸ್ಟ್ಯಾಂಡಿನ ವರ್ಗೂ ಬಿಟ್ಟುಬರ್ತೀನಿ" ಎಂದ.

ಅವನು ಹಿಂಬಾಲಿಸುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿ ಹೇಳಿದೆ:

"ನಿಮಗ್ಯಾಕೆ ತ್ರೊಂದ್ರೆ ದೀನೂ ಚಾಚಾ. ನಾನು ಹೋಗ್ತೀನಿ. ನೀವು ತಪ್ಪು ತಿಳಿಯೋಲ್ಲ ಅಂದ್ರೆ ಒಂದ್ಮಾತು."

"ಹೇಳು."

"ನಿಮ್ ಸೊಸೆ ನಿಮ್ಗೆ ಗೌರವ ಕೊಡದಿದ್ಮೇಲೆ ನೀವ್ಯಾಕೆ ಅಲ್ಲಿಗೆ ಹೋಗ್ಬೇಕು? 'ಅಹಂಕಾರಕ್ಕೆ ಉದಾಸೀನವೇ ಮದ್ದು' ತಾನೆ"
ಎಂದು ಗಂಭೀರವಾಗಿ ನುಡಿದು ಬಸ್‌ಸ್ಟ್ಯಾಂಡಿನ ರಸ್ತೆಗೆ ಹೊರಳಿದೆ.

ಬಹಳ ಭಾರ ಹೊತ್ತವನಂತೆ ತಲೆ ಬಗ್ಗಿಸಿಕೊಂಡೇ ಅವನು ನನ್ನನ್ನು

ಹಿಂಬಾಲಿಸಿದ. ಸ್ವಲ್ಪ ದೂರ ಕ್ರಮಿಸಿದ ಮೇಲೆ ಬಹಳ ನಿರಾಸೆಯ ದನಿಯಲ್ಲಿ ನುಡಿದ: "ಅನಿವಾರ್ಯದಿಂದ ಮಗನ ಮನೆಗೆ ಹೋಗ್ತಿದೀನಿ ಸಾಮಿ. ಇಲ್ಲಿದ್ರೆ!"

"ಅನಿವಾರ್ಯ!"

"ಹೌದು, ಅನಿವಾರ್ಯ. ಮಗಳ ಮದ್ವೆ ಮಾಡ್ಬೇಕಾಗಿದೆ. ನನ್ನ ಕೈಯಲ್ಲಿ ಏನೂ ಇಲ್ಲ. ಈ ಮಗನ್ನ ಆಫೀಸರನ್ನಾಗಿ ಮಾಡೋದ್ರಲ್ಲಿ ಎಲ್ಲ ಹೋಯ್ತು. ನೌಕರಿ ಕೂಡ........"

ಹೇಳುತ್ತಿದ್ದಂತೆ ಕೊರಳು ತುಂಬಿ ಬಂದಿತ್ತು.

"ಅಂದ್ರೆ?"

"ಇವನನ್ನ ದೊಡ್ಡ ಆಫೀಸರನನ್ನಾಗಿ ಮಾಡಲಿಕ್ಕೆ ಅಂತ ಸರಕಾರದ ವಶೀಲಿ ಪಡೆದಿದ್ನಲ್ಲ!

"ಓಹ್!"

ನಂಗೇನು ಗೊತ್ತಿತ್ತು. ಇವನಿಂದಾಗಿ ನನ್ನ ಕೆಲಸ, ಪೆನ್‌ಷನ್, ಗ್ರಾಚ್ಯುಟಿ, ಫಂಡ್, ಎಲ್ಲ ಮುಳುಗಿ ಹೋಗುತ್ತೆ ಅಂತ. ಈ ಪರದೇಶಿ ಹುಡುಗಿಗೊಂದು ಎಲ್ಲಿ ಮನೆ ಮಾಡಿಕೊಟ್ರೆ ಸಾಕು, ಇನ್ಮೇಲಾದ್ರೂ ನಾನಿಂಥ ಪಾಪದ ಕೆಲ್ಸಕ್ಕೆ ಕೈ ಹಾಕಲ್ಲ!" ತುಸು ತಡೆದು ಹೇಳಿದ: "ಯೌವನದ ಹುಚ್ಚಿನಲ್ಲಿ ಆ ಹುಡ್ಗಿ ಎಂಥ ಕೆಲ್ಸ ಮಾಡ್ಕೊಂಡಿದ್ದಾಳೆ ಅಂದ್ರೆ ಅವ್ಳ ಮುಖ ನೋಡಿದ್ರೆ, ಬೇಗ ಆಗಲಿಲ್ಲಾಂದ್ರೆ ನಾನು ಬಾವಿಗೋ, ರೈಲು ಹಳಿಗೋ ಹುಡುಕ್ಬೇಕಾಗುತ್ತೆ."

"ಏನ್ ಹುಡ್ಗಿ ಅಂಥಾದ್ದೇನು ಮಾಡ್ಕೊಂಡಿದಾಳೆ?"

"ಇನ್ನೇನು ಬಸಿರು ಮಾಡ್ಕೊಂಡಿದ್ದಾಳೆ ಅಷ್ಟೇ. ಯೌವನದ ಆಸೆಯಲ್ಲಿ ಈ ಸಮಾಜದವರು ಕುಮಾರಿಯಾದವಳು ತಾಯಿಯಾಗೋದು ಎಂಥ ಅಪರಾಧ ಅನ್ನೋದನ್ನ ಕೂಡ ಯೋಚಿಸಿದ್ದಾಗಿಲ್ಲ."

ಎನ್ನುವಾಗ ಅವನ ದನಿಯಲ್ಲಿ ತಿರಸ್ಕಾರ ತುಂಬಿತ್ತು.

ಅಯ್ಯೋ ರಾಮ!—ನನಗೆ ತಲೆ ಸುತ್ತು ಬಂದಂತಾಯಿತು.

ಅಷ್ಟರಲ್ಲೇ ಬಸ್‌ಸ್ಟ್ಯಾಂಡು ಬಂದಿದ್ದರಿಂದ ಈ 'ತಾಪತ್ರಯ'ದಿಂದ ಮುಕ್ತಿ ಸಿಗುತ್ತದೆಂದು ನಿರಾಳವಾಯಿತು. ಟಿಕೆಟ್ ಕೌಂಟರಿನಲ್ಲಿ ಗಲಾಟೆ ಇರಲಿಲ್ಲ. ನಾನು ನೂರರ ನೋಟನ್ನು ತೆಗೆದುಕೊಡುತ್ತಿರುವಂತೆ ದೀನಾನಾಥನ ಕಣ್ಣು ಮಿಂಚಿತು. ಟಿಕೆಟ್ಟು ಮತ್ತು ಉಳಿದ ಹಣವನ್ನು ಜೇಬಿನಲ್ಲಿಡುತ್ತಿದ್ದಂತೆ ಅವನು ದೈನ್ಯದಿಂದ ಹೇಳತೊಡಗಿದ:

"ವಿಮ್ಸು, ನಂಗಿವತ್ತು ಮಗನ ಹತ್ರ ಹೋಗ್ಲೇಬೇಕಾಗಿದೆ. ಯಾಕಂದ್ರೆ ಆ ಹುಡ್ಗಿ ವಿಷ್ಯ ಮಾತಾಡೋದಿದೆಯಲ್ಲ."

ನಾನು ಸುಮ್ಮನಿರುವುದನ್ನು ಕಂಡು ತಿರುಗಿ ಅವನೇ ಹೇಳಿದ:

"ನಾನು ಬರೀ ಕೈಯಲ್ಲಿ ಹೋದ್ರೆ ನನ್ನ ಸೊಸೆ ಬಂಗಲೆಗೇ ಸೇರ್ಸಲ್ಲ. ಇನ್ನು ಮಗ್ನಿಗೆ ಸಹಾಯ ಮಾಡೋದಂತೂ ದೂರ ಉಳೀತು."

ಆಗಲೂ ನಾನು ಮೌನವಾಗಿರುವುದನ್ನು ಕಂಡು ಮುಂದುವರಿಸಿದ:

"ಹಣ್ಣನ್ನೇನೋ ತೊಗೊಂಡಿದೀನಿ. ಆದ್ರೆ ಅಷ್ಟ್ರಿಂದ್ಲೇ ಕೆಲ್ಸ ಆಗೋಲ್ಲ."

ಆ ಮಾತಿಗೆ ಬೆಚ್ಚಿದ ನಾನು ಅವನ ಚೀಲದಲ್ಲಿರೋ ಕೊಳಕು ಹಣ್ಣುಗಳನ್ನು ನೋಡುತ್ತಲೇ, ಅವನೇನಾದರೂ ಈ ಹಣ್ಣುಗಳನ್ನು ತೊಗೊಂಡು ಲವ್ ಮ್ಯಾರೇಜ್ ಆಗಿರೋ ಅವನ ಸೊಸೆ ಎದುರು ಹೋದರೆ ಅವಳು ಇವುಗಳನ್ನೆಲ್ಲ ಅವನ ಮುಖಕ್ಕೇ ಎಸೆದುಬಿಡಬಹುದು ಎನ್ನಿಸಿತು.

"ಅದ್ಕೆ ನಾನು ಬೆಳಗಿಂದಲೂ ಯಾರಾದ್ರೂ ಗುರುತನವ್ರು ಸಿಗ್ತಾರೇನೋ ಅಂತ ಅಲ್ಲಿ ಇಲ್ಲಿ ಅಂತ ಸುತ್ತಾನೇ ಇದ್ದೀನಿ"

ಅನ್ನುವಾಗ ಅವನ ಕೊರಳ ಸೆರೆ ಉಬ್ಬಿ ಬಂತು.

ಈ ಬಾರಿ ತಲೆ ಚಿಟ್ಟು ಹಿಡಿದಂತಾಗಿ ಹೇಳಿದೆ:

"ದೀನೂ ಚಾಚಾ, ನಂಗೆ ನಿನ್ನ ಈ ಅರ್ಥಂಬರ್ಥದ ಮಾತು ಅರ್ಥವಾಗಲ್ಲ." ನೋಟುಗಳನ್ನು 'ಹಿಪ್ ಪಾಕೆಟ್ಟಿ' ನಲ್ಲಿ ಇಡುತ್ತಿರೋವಾಗ ಅವನು ನನ್ನ ಕೈ ಹಿಡಿದು ಭಿಕಾರಿಯಂತೆ ಅಂಗಲಾಚಿದ:

"ವಿಮ್ಸು, ನೀನೀಗ ನಂಗೆ ಐವತ್ತು–ಅರವತ್ತು ರೂಪಾಯಿ ಕೊಡೋಕೆ ಸಾಧ್ಯವೆ? ನಾನು ಅವುಗಳನ್ನು ಹಿಂದಿರುಗಿಸುತ್ತೇನೆ. ನಾನೀಗ ಸೊಸೆ ಮತ್ತು ಮಕ್ಕಳಿಗಾಗಿ ಏನಾದ್ರೂ ಒಂದಿಷ್ಟು ತೊಗೊಂಡು ಹೋಗ್ದೇ ಇದ್ರೆ.... ಇದ್ರೆ........" ಎಂದು ಬಿಕ್ಕುತ್ತ ಹರಿದ ತೋಳಿನಿಂದ ಕಣ್ಣೀರನ್ನು ಒರೆಸಿ ಕೊಳ್ಳತೊಡಗಿದ ....

—ಚಂದ್ರಮತಿ

ಸ್ವರ್ಗ ನರಕದ ಕಲ್ಪನೆ ಕೇವಲ ಬಾಯಿ ಮಾತಿನಿಂದಲ್ಲ. ಸ್ವರ್ಗ ದೊರಕಲು ಜೀವನದಲ್ಲಿ ಸಾಧನೆ ಬೇಕು.

—ಸ್ವಾಮಿ ರಾಮದಾಸ

ಸುಂದರಿ ಮೋಹಿನಿಯ ಜೊತೆ ಕಳೆದ ಪ್ರಣಯ ಜೀವನದ ನಾಲ್ಕುವರೆ ವರ್ಷ

[ಲೋಹನ್‌ಸೋಲಂಕಿ ಮತ್ತು ವಿಜಯ್ ಬಜಾಜ್ ಅವರಿಂದ ಬರೆಯಲ್ಪಟ್ಟ ಒಂದು ರೋಮಾಂಚಕ, ಸತ್ಯ ಪ್ರೇಮ ಕಥೆ]

ಭೂತ-ಪ್ರೇತ, ತಂತ್ರ-ಮಂತ್ರ, ಪಿಶಾಚಿ-ಸಿದ್ಧಿ, ಅಘೋರಿ ವಿದ್ಯೆ ಹಾಗೂ ಆತ್ಮ-ಪರಮಾತ್ಮ ಇವುಗಳ ಅಸ್ತಿತ್ವದ ಪ್ರಶ್ನೆಯ ಬಗ್ಗೆ ಮನುಷ್ಯನ ಮನಸ್ಸು ಶತಶತಮಾನಗಳಿಂದ ದ್ವಂದ್ವದಲ್ಲಿ ಮುಳುಗಿದೆ. ಸಮಾಜದ ಒಂದು ವರ್ಗ ಇವುಗಳ ಅಸ್ತಿತ್ವದ ಬಗ್ಗೆ ಒಪ್ಪಿಗೆಯನ್ನು ಸೂಚಿಸಿದರೆ ಮತ್ತೊಂದು ವರ್ಗ ಇವೆಲ್ಲ ಸ್ವಕಪೋಲ ಕಲ್ಪಿತ ಕಥೆಗಳೆಂದು ಅಲ್ಲಗೆಳೆಯುತ್ತಾರೆ. ಇಂಥ ಜನರಲ್ಲಿ ವಿಜ್ಞಾನದ ಬಗ್ಗೆ ಆಸ್ಥೆಯುಳ್ಳವರು ಹೆಚ್ಚಾಗಿದ್ದಾರೆ. ಇವರ ಪ್ರಕಾರ ಲೋಕ ಪರಲೋಕಗಳು ನಮ್ಮ ಧರ್ಮಗ್ರಂಥಗಳಲ್ಲಿ ಕೇವಲ ಕಲ್ಪನೆಯ ಸೃಷ್ಟಿಗಳು ಮಾತ್ರವಾಗಿವೆ. ಇವುಗಳ ಭಯವನ್ನು ತೋರಿಸಿ ನಮ್ಮ ಧರ್ಮಪಂಡಿತರು ಸಮಾಜವನ್ನು ಧರ್ಮಭೀರುವನ್ನಾಗಿ ಮಾಡಿ ಜನರ ಪೇಡಿತನ ಮತ್ತು ಭಯಭೀತ ಮನಸ್ಸಿನ ಲಾಭಪಡೆಯುತ್ತಿದ್ದಾರೆ.

ಜಟಿಲವಾದ ಈ ಎಲ್ಲ ವಿಷಯಗಳ ಬಗ್ಗೆ ವಾದ-ವಿವಾದಗಳು ಏಳುತ್ತಲೇ ಇವೆ. ಅನೇಕ ಸಂಶೋಧನೆಗಳೂ ನಡೆದಿವೆ. ಇಷ್ಟೆಲ್ಲ ನಡೆದರೂ ವಿಜ್ಞಾನವೂ ಕೂಡ ಈ ವಿಷಯದ ಬಗ್ಗೆ ಧೈರ್ಯವಾಗಿ ನಕಾರಾತ್ಮಕ ಮತ್ತು ಸ್ಪಷ್ಟವಾದ ಉತ್ತರವನ್ನು ಕೊಡುವುದರಲ್ಲಿ ಅಸಮರ್ಥವಾಗಿದೆ. ಆತ್ಮ-ಪರಮಾತ್ಮ, ಭೂತ-ಪ್ರೇತ, ಲೋಕ-ಪರಲೋಕ ಮುಂತಾದವುಗಳ ಅಸ್ತಿತ್ವ ಇದೆಯೋ ಇಲ್ಲವೇ ಎಂಬ ಈ ವಿವಾದಕ್ಕೆ ಹೋಗದೆಯೇ ಈ ಸಂದರ್ಭದಲ್ಲಿ ಒಂದು ಅದ್ಭುತವಾದ, ಆದರೆ ರೋಮಾಂಚಕಾರಿಯಾದ ಸಂಸ್ಮರಣೆ ಪ್ರಸ್ತುತವಾಗಿದೆ:

ಈ ಒಂದು ಸ್ಮರಣೆಯ ಪ್ರಮುಖ ನಾಯಕ ೬೨ ವರ್ಷದ ದಲಾಲ್‌ಜಿ ಭಾಯಿ ಗಢಿಯಾ. ಅವರನ್ನು ನೋಡಿದರೆ ಯಾರಿಗೂ ಅವರ ಸರಿಯಾದ ವಯಸ್ಸಿನ ಅಂದಾಜೇ ಸಿಗುವುದಿಲ್ಲ. ಅವರ ಹೊಂಬಣ್ಣದಿಂದ ಹೊಳೆಯುತ್ತಿರುವ

೧೯೮೨ರ ಜುಲೈ 'ನವನೀತ್' ಸಂಚಿಕೆಯಲ್ಲಿ ಬಂದಿರುವ 'ಮೋಹನ್ ಸೋಲಂಕಿ, ವಿಜಯಬಜಾಜ್' ಅವರ 'ಏಕ್ ಸುಂದರೀ ಪ್ರೇತನೀ ಕೇ ಸಾಥ್ ಬಿತಾಯೇ ಪ್ರಣಯ್-ಜೀವನ್ ಕೇ ಸಾಥೇ ಚಾರ್ ವರ್ಷ್' ಲೇಖನದ ಅನುವಾದ.

ದೇಹ ಇಂದಿಗೂ ಕೂಡ ಅವರ ಯೌವನಾವಸ್ಥೆಯಲ್ಲಿದ್ದಂತೆಯೇ ಇದೆ.

ಶ್ರೀ ದಯಾಲ್‌ಜೀಭಾಯಿ ಗಢಿಯಾ ಗುಜರಾತಿಗಳು ಮತ್ತು ಹದಿನಾಲ್ಕು ಭಾಷೆಗಳನ್ನು ಬಲ್ಲವರು. ಅವರು ಆಯುರ್ವೇದ ಔಷಧಿಗಳನ್ನು ಚೆನ್ನಾಗಿ ಬಲ್ಲವರು. ಅನೇಕ ದುರ್ಲಭ ಕೇಸ್‌ಗಳನ್ನು, ಅತ್ಯಂತ ಪರಿಣತರಾದ ವೈದ್ಯರಿಂದಲೂ ಗುಣಪಡಿಸಲಾಗದ ಕಾಯಿಲೆಗಳನ್ನು ಇವರು ತಮ್ಮ ಔಷಧಿಗಳಿಂದ ಗುಣಪಡಿಸಿದ್ದಾರೆ.

ದಯಾಲ್‌ಜೀಭಾಯಿ ಅವರ ಪರಿವಾರದಲ್ಲಿ ಏಳು ಜನ ಗಂಡು ಮಕ್ಕಳು, ಇಬ್ಬರು ಹೆಣ್ಣುಮಕ್ಕಳು ಮತ್ತು ಸೊಸೆಯಂದಿರಲ್ಲದೆ ಅವರ ಅರ್ಧಾಂಗಿನಿ ಪುಷ್ಪಾಬೇನ್ ಕೂಡ ಇದ್ದಾರೆ. ಮೋಹಿನಿ ವಿದ್ಯೆಯಲ್ಲಿ ದಯಾಲ್‌ಜೀಭಾಯಿ ಅವರು ಪರಿಣತಿಯನ್ನು ಪಡೆದುಕೊಂಡಿದ್ದಾರೆ. ನಾವು ಅವರನ್ನು ಭೇಟಿಯಾದಾಗ ಭೂತ–ಪ್ರೇತದ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಿದೆವು. "ಮೋಹಿನಿ ವಿದ್ಯೆಯ ಬಗ್ಗೆ ನನಗೆ ಸ್ವಲ್ಪವೂ ಜಿಜ್ಞಾಸೆ ಇರಲಿಲ್ಲ. ನಾನು ಪೈಲ್ವಾನ್ ಆಗಬೇಕೆಂದಿದ್ದೆ. ಆ ಸಂದರ್ಭದಲ್ಲಿಯೇ ಒಂದು ಅಪೂರ್ವ ಘಟನೆ ನಡೆದಿತ್ತು. ಅವರಿಂದಾಗಿ ನಾನು ಮೋಹಿನಿ ವಿದ್ಯೆಯನ್ನು ಕಲಿತು ನೂರಾರು ಜನರಿಗೆ ಅನುಕೂಲ ಮಾಡಿದ್ದೇನೆ. ಇಂದಿಗೂ ಕೂಡ ಮೋಹಿನಿ ಬಾಧೆಯಿಂದ ನರಳುತ್ತಿರುವ ಅಥವಾ ಶಾರೀರಕ ತೊಂದರೆಯಿಂದ ಪೀಡಿತವಾಗಿರುವ ಅನೇಕ ಜನ ನನ್ನ ಬಳಿಗೆ ಬರುತ್ತಾರೆ" ಎಂದು ಹೇಳಿದರು.

ನಿಶ್ಶಬ್ದ ರಾತ್ರಿ ಮತ್ತು ಆ ಯುವತಿ :

ದಯಾಲ್‌ಜೀಭಾಯಿಯ ಜೀವನದಲ್ಲಿ ನಡೆದ ಅಪೂರ್ವ ಘಟನೆಯ ವರ್ಣನೆ ಈ ರೀತಿ ಇದೆ—

೧೯೩೮ರ ಸುಮಾರಿನಲ್ಲಿ ಅವರ ತಂದೆ ದಿ| ವಸಣಜೀ ಗಢಿಯಾ ಯವತಮಾಲ್ (ಮಹಾರಾಷ್ಟ್ರ) ನಲ್ಲಿ ವಾಸವಾಗಿದ್ದರು. ಅಲ್ಲಿಯೇ ಅವರ ಕಿರಾಣಿ ಹಾಗೂ ದವಸ-ಧಾನ್ಯದ ಅಂಗಡಿ ಇತ್ತು. ಇಡೀ ಪರಿವಾರ ಅತ್ಯಂತ ಆನಂದದಾಯಕವಾದ ಜೀವನವನ್ನು ನಡೆಸುತ್ತಿತ್ತು. ಆಗ ದಯಾಲ್‌ಜೀಭಾಯಿಯ ವಯಸ್ಸು ಹದಿನೆಂಟಾಗಿರಬಹುದು. ಅವರಿಗೆ ವ್ಯಾಯಾಮ ಮಾಡುವುದರಲ್ಲಿ ಹೆಚ್ಚು ಆಸಕ್ತಿ ಇತ್ತು ಮತ್ತು ಇದೇ ಖಯಾಲಿಯಲ್ಲಿ ತಮ್ಮ ದೇಹವನ್ನು ಬಲಗೊಳಿಸುವಲ್ಲಿ ತೊಡಗಿದರು. ದೇಹ ಸಂಘಟನೆಯಲ್ಲಿ ತೊಡಗಿದುದರಿಂದ ಓದಿನಲ್ಲಿ ಮನಸ್ಸು ಹಿಡಿಸಲಿಲ್ಲ. ಸರಿ ಕಸರತ್ತನ್ನೇ ಮಾಡುತ್ತಿದ್ದರು. ಈ ಮಧ್ಯೆ

ಚಿಕ್ಕ-ಪುಟ್ಟ ಆಟಗಳನ್ನು ಆರಂಭಿಸಿದರು—ಎದೆಯ ಮೇಲೆ ಕಲ್ಲನ್ನು ಇಟ್ಟು ಒಡೆಯುವುದು, ಕಬ್ಬಿಣದ ದಪ್ಪ ಸಲಾಕಿಯನ್ನು ಎದೆಯ ಮೇಲಿಟ್ಟುಕೊಂಡು ಚಾಣದಿಂದ ಅದನ್ನು ಎರಡು ತುಂಡುಗಳನ್ನಾಗಿ ಕತ್ತರಿಸುವುದು, ಇಡೀ ತೆಂಗಿನ ಕಾಯಿಯನ್ನು ಕೈಯಿಂದ ಒಡೆಯುವುದು—ಇಂಥ ಅನೇಕ ಚಮತ್ಕಾರಗಳನ್ನು ಅವರು ಶಾಲೆಗಳು ಹಾಗೂ ಕೆಲವು ವಿಶೇಷ ಸ್ಥಳಗಳಲ್ಲಿ ಪ್ರದರ್ಶನ ಮಾಡುತ್ತಿದ್ದರು.

ಆ ಸಮಯದಲ್ಲಿ ದಯಾಲ್‌ಜೀಭಾಯಿ ಇನ್ನೂ ಅವಿವಾಹಿತರಾಗಿದ್ದರು. ಒಂದು ದಿನ ಅರ್ಧ ರಾತ್ರಿಯಲ್ಲಿ ಸಿನಿಮಾ ನೋಡಿಕೊಂಡು ಮನೆಗೆ ಬರುತ್ತಿದ್ದರು. ದಾರಿಯಲ್ಲಿ ಕತ್ತಲೆ ಕವಿದಿರುವಂಥ ಒಂದು ಸ್ಥಳವಿತ್ತು. ಅಲ್ಲಿ ಮರಗಳ ತೋಪು ಇತ್ತು. ಆ ತೋಪಿನ ಮಧ್ಯೆ ನಡೆದು ಬರುವಾಗ ಜನಗಳ ಮನಸ್ಸಿನಲ್ಲಿ ಭಯ ಮಿಂಚಿಹೋಗುತ್ತಿತ್ತು. ರಾತ್ರಿ ಹೊತ್ತು ಆ ಮಾರ್ಗದಲ್ಲಿ ಜನರ ಓಡಾಟವೇ ನಿಂತುಹೋಗಿರುತ್ತಿತ್ತು. ಆದರೆ ದಯಾಲ್‌ಜೀಭಾಯಿ ಮಾತ್ರ ಭಯಕ್ಕೆ ಎಂದೂ ಮಹತ್ವವನ್ನು ಕೊಟ್ಟಿರಲಿಲ್ಲ. ಆ ಶೂನ್ಯವಾದ ದಾರಿಯ ಎರಡೂ ಕಡೆ ತಲೆಯನ್ನು ಮೇಲೆತ್ತಿಕೊಂಡು ನಿಂತ ಮರಗಳು ಆ ಕತ್ತಲೆಯಲ್ಲಿ, ಭೂತಗಳೇ ನೀಳವಾದ ಛಾಯೆಯನ್ನು ಪಡೆದುಕೊಂಡಿವೆಯೋ ಎಂಬಂತೆ ಕಾಣುತ್ತಿದ್ದವು.

ತಮ್ಮದೇ ಲಹರಿಯಲ್ಲಿ ದಯಾಲ್‌ಜೀಭಾಯಿ ನಡೆದು ಬರುತ್ತಿದ್ದರು. ಒಂದು ಜಾಗದಲ್ಲಿ ಇದ್ದಕ್ಕಿದ್ದಂತೆ ಅವರ ಕಾಲುಗಳು ನಿಂತುಬಿಟ್ಟವು. ಅವರು ಮುಂದೆ ಹೋಗಲು ಪ್ರಯತ್ನಿಸಿದರು. ಆದರೆ ಮುಂದೆ ಹೋಗಲಾಗಲಿಲ್ಲ. ಸ್ವಲ್ಪ ಹೊತ್ತಿನ ನಂತರ ಎದುರಿಗಿದ್ದ ಒಂದು ಮರದ ಹತ್ತಿರ ನಿಂತಿರುವ ಒಬ್ಬ ತರುಣಿ ಅವರಿಗೆ ಕಾಣಿಸಿಕೊಂಡಳು. ರಾತ್ರಿಯಲ್ಲಿ ನಿರ್ಜನ ಪ್ರದೇಶದಲ್ಲಿ ಯುವತಿ ಒಬ್ಬಳು ಏಕಾಂಗಿಯಾಗಿ ನಿಂತಿರುವುದನ್ನು ಕಾಣುವುದೇ ಅದನ್ನು ಲಕ್ಷ್ಯದಲ್ಲಿ ಹಾಕುವುದಕ್ಕೆ ಸಾಕಾಗಿತ್ತು. ಬಹುಶಃ ಅವಳು ಯಾರ ನಿರೀಕ್ಷೆಯಲ್ಲಿಯೋ ಇರಬೇಕೆಂದು ಯೋಚಿಸಿದರು. ನಿಂತುಕೊಂಡಿರುವಂತೆಯೇ, ಇವಳ ಜೊತೆಯಲ್ಲಿ ಯಾರಿದ್ದಾರೆ? ನೋಡೋಣ ಎಂದು ನೋಡುತ್ತಿದ್ದರು. ಈ ರೀತಿಯ ಪ್ರತೀಕ್ಷೆಯಲ್ಲಿ ಸುಮಾರು ಅರ್ಧ ಘಂಟೆ ಕಳೆದರೂ ಅಲ್ಲಿಗೆ ಯಾರೂ ಬಾರದಿದ್ದುದನ್ನು ಕಂಡು ದಯಾಲ್‌ಜೀಭಾಯಿಗೆ ಅನುಮಾನವಾಗತೊಡಗಿತು. ಈ ಯುವತಿ ಮನೆಯಿಂದ ಓಡಿಬಂದಿರಬಹುದೆಂದು ಯೋಚಿಸಿದರು. ಕೇಳಿ ತಿಳಿದುಕೊಳ್ಳಬೇಕೆಂಬ ದೃಷ್ಟಿಯಿಂದ ಅವಳ ಹತ್ತಿರ ಹೋದರು. ಹತ್ತಿರಹೋಗಿ

ಯುವತಿಯನ್ನು ಗಮನವಿಟ್ಟು ನೋಡುತ್ತಿದ್ದಂತೆಯೇ ಸ್ತಂಭಿತರಾದರು. ಕೆಂಪು ಸೀರೆಯನ್ನು ಉಟ್ಟ ತರುಣಿ ಆಭರಣಗಳ ಕಾಂತಿಯಿಂದ ಸುಂದರ–ಮನೋಹರವಾಗಿ ಕಾಣುತ್ತಿದ್ದಳು. ಇಷ್ಟೊಂದು ಭಯಂಕರವಾದ ಕತ್ತಲೆಯಲ್ಲಿ ಒಂದು ಮರದ ಕೆಳಗೆ ಏಕಾಂಗಿಯಾಗಿ ಆ ನವಯೌವನೆಯು ನಿಂತಿರುವುದು, ದಯಾಲ್‌ಜೀಭಾಯಿಯ ಮನಸ್ಸನ್ನು ಬಲವಾಗಿ ಆಕರ್ಷಿಸಿತು. ಅವಳ ತೀರ ಸಮೀಪಕ್ಕೆ ಬಂದು ನಿಂತರೂ ಅವಳಲ್ಲಿ ಯಾವ ಚಲನೆಯೂ ಉಂಟಾಗಲಿಲ್ಲ. ಯಾವನೋ ಅಪರಿಚಿತ ವ್ಯಕ್ತಿಯನ್ನು ನೋಡಿಯೂ ಬೆಚ್ಚಿಬೀಳದೆ ಹಾಗೆಯೇ ನಿಂತಿದ್ದಳು. 'ಯಾರು ನೀನು? ಇಲ್ಲಿ ಇಷ್ಟು ಹೊತ್ತಿನಿಂದ ನಿಂತುಕೊಂಡು ಏನು ಮಾಡುತ್ತಿದ್ದೀಯೆ? ಮನೆಯಿಂದೇನಾದರೂ ಓಡಿ ಬಂದಿದ್ದೀಯಾ.... ಅಥವಾ ಯಾರ ನಿರೀಕ್ಷಣೆಯಲ್ಲೇನಾದರೂ ಇದ್ದೀಯಾ?' ದಯಾಲ್‌ಜೀಭಾಯಿಯ ಈ ಪ್ರಶ್ನೆಗಳನ್ನು ಕೇಳಿಯೂ ಬೆಚ್ಚದೆ, ಬೆದರದೆ ನಿರ್ವಿಕಾರವಾಗಿ ನಿಂತಿದ್ದಳು. ಐದು ನಿಮಿಷಗಳಾದರೂ ಅವಳು ಯಾವ ಉತ್ತರವನ್ನೂ ಕೊಡದಾಗ ಅವರು ಮತ್ತೆ ಕೇಳಿದರು—'ಏನು ಸಮಾಚಾರ? ಏನಾದರೂ ತೊಂದರೆ ಇದ್ದರೆ ಹೇಳು. ನಾನು ನಿನಗೆ ಯಾವುದಾದರೂ ಸಹಾಯ ಮಾಡಿಯೇನು!'

ಈ ಸಾರಿ ಆ ತರುಣಿ ಇವರ ಕಡೆ ಗಮನವಿಟ್ಟು ನೋಡಿದಳು. ಅವಳ ಕಣ್ಣುಗಳಲ್ಲಿ ಯಾವುದೇ ರೀತಿಯ ಆಶ್ಚರ್ಯವಾಗಲಿ, ಅವಳ ಮುಖದಲ್ಲಿ ಯಾವುದೇ ರೀತಿಯ ವ್ಯಾಕುಲತೆಯಾಗಲಿ ಇರಲಿಲ್ಲ. ಆ ತರುಣಿಯು ಸ್ವಲ್ಪ ಹೊತ್ತಿನ ತನಕ ದಯಾಲ್‌ಜೀಭಾಯಿಯ ಕಡೆ ಒಂದೇ ಸಮನೆ ನೋಡುತ್ತಿದ್ದಳು.... ಕ್ಷಣಾರ್ಧದಲ್ಲಿ ಅವಳ ತುಟಿಗಳ ಮೇಲೆ ತೆಳುವಾದ ಮಂದಹಾಸ ಮಿನುಗಿತು. ಸಹಸ್ರ–ಸಹಸ್ರ ಕಂಪಿನಾಳ ಪುಷ್ಪಗಳು ಅವಳ ಮುಖದ ಮೇಲೆ ಅರಳಿವೆಯೋ ಎನ್ನುವಂತೆ ದಯಾಲ್‌ಜೀಭಾಯಿಗೆ ಅನ್ನಿಸಿತು. ಅವಳ ದೇಹವನ್ನು ಅವರು ಮಂತ್ರಮುಗ್ಧರಂತೆ ನೋಡುತ್ತಿದ್ದರು. ಅವಳ ಕಣ್ಣುಗಳಲ್ಲಿ ಕಣ್ಣುಗಳನ್ನು ಮಿಲಾಯಿಸಿದರು. ಅವಳು ಅದೇ ರೀತಿ ಮಂದಸ್ಮಿತೆಯಾಗಿದ್ದಳು. ನಂತರ ನಿಧಾನವಾಗಿ ಹೇಳಿದಳು—'ನಾನು ನಿನ್ನ ದಾರಿಯನ್ನೇ ಕಾಯುತ್ತಿದ್ದೆ. ನಾವು ಇಂದಿನವರಲ್ಲ, ಜನ್ಮಜನ್ಮಾಂತರದ ಸಂಗಾತಿಗಳು. ನಾನು ಯುಗಾಂತರಗಳಿಂದ, ನಿನ್ನನ್ನು ಹುಡುಕಿಕೊಂಡು, ನೂರಾರು ಕತ್ತಲೆಯ ಗುಹೆಗಳಲ್ಲಿ ಅಲೆಯುತ್ತಿದ್ದೇನೆ.'

ದಯಾಲ್‌ಜೀಭಾಯಿ ಅವಳ ಈ ಮಾತುಗಳನ್ನು ಕೇಳಿ ಹತಪ್ರಭರಾದರು.

ಈ ಮಾತುಗಳು ಅವರ ಅರಿವಿಗೆ ಸ್ವಲ್ಪವೂ ಬಂದಿರಲಿಲ್ಲ. ಅವರು ಈ ರೀತಿ ಹತಪ್ರಭರಾದುದನ್ನು ಕಂಡು ಆಕೆ ಪುನಃ ಹೇಳಿದಳು—

'ನಿಮಗೆ ಪ್ರಾಯಶಃ ನನ್ನ ಮಾತುಗಳಲ್ಲಿ ನಂಬಿಕೆ ಬರಲಿಲ್ಲವೆಂದು ಕಾಣುತ್ತದೆ. ಆದರೆ ಇದು ಸತ್ಯ. ಬಹುಶಃ ನಿಮಗೆ ನನ್ನ ಪರಿಚಯವಿಲ್ಲದಿರಬಹುದು. ಆದರೆ ನನಗೆ ನಿಮ್ಮ ಪರಿಚಯವಿದೆ. ನಾವು ಪರಸ್ಪರ ಸಂಗಾತಿಗಳು.' ಇದನ್ನು ಹೇಳಿ ಅವಳು ನಗತೊಡಗಿದಳು. ಈಕೆ ಪ್ರಾಯಶಃ ಮನೆಬಿಟ್ಟು ಓಡಿ ಬಂದಿರಬೇಕು ಮತ್ತು ನನ್ನಲ್ಲಿ ಮೋಹಗೊಂಡಿರಬೇಕು ಎಂದು ದಯಾಲ್‌ಜೀಭಾಯಿ ಭಾವಿಸಿದರು. ಅವರು ಅವಳನ್ನು ಕುರಿತು ಹೇಳಿದರು—

'ನೀನು ಈ ರೀತಿ ಮನೆಬಿಟ್ಟು ಓಡಿ ಬರುವುದು ಸರಿಯಲ್ಲ. ನಡಿ. ನಾನು ನಿನ್ನನ್ನು ನಿನ್ನ ಮನೆಗೆ ತಲುಪಿಸುತ್ತೇನೆ. ನೀನು ಮನೆಯಲ್ಲಿಲ್ಲದಿರುವುದನ್ನು ಕಂಡು ನಿನ್ನ ಮನೆಯವರು ವ್ಯಾಕುಲಕ್ಕೊಳಗಾಗುವರು.' ಅವರ ಮಾತುಗಳನ್ನು ಕೇಳಿ ಆ ಯುವತಿ ಗಂಭೀರವಾದಳು. ಅವಳು ಪುನಃ ಯೋಚಿಸಿ ಹೇಳಿದಳು—

"ಒಂದು ಷರತ್ತಿನ ಮೇಲೆ ನಾನು ಮನೆಗೆ ಹಿಂತಿರುಗಲು ಸಿದ್ಧಳಿದ್ದೇನೆ."

"ಯಾವ ಷರತ್ತು?"

"ನೀನು ನನ್ನ ಬಾಯಾರಿಕೆ ಅಡಗಿಸಿದರೆ ನಾನು ಹಿಂತಿರುಗಿ ಬರುವೆನು. ಇಲ್ಲದಿದ್ದರೆ ನಾನು ಇಲ್ಲಿಯೇ ಇರುತ್ತೇನೆ. ನಿನ್ನ ಹೆಸರಿನ ಮಾಲೆಯನ್ನು ಜಪಿಸುತ್ತೇನೆ, ಅಷ್ಟೆ!" ಇದನ್ನು ಕೇಳಿ ದಯಾಲ್‌ಜೀ ರೋಮಾಂಚಿತರಾದರು. ಏನು ಮಾಡಬೇಕೆಂದು ಏನೂ ತೋಚಲೇ ಇಲ್ಲ. ಉದ್ದೇಶ ಸ್ಪಷ್ಟವಾಗಿತ್ತು. ಆ ತರುಣಿ ಅವರ ಬ್ರಹ್ಮಚರ್ಯವನ್ನು ಮುರಿಯಲು ಸಿದ್ಧಳಾಗಿದ್ದಳು. ಹುಡುಗಿಯರು ಅಥವಾ ಹೆಂಗಸರ ಕಡೆ ಎಂದೂ ಅವರ ಗಮನ ಹರಿದಿರಲಿಲ್ಲ. ಅವರು ತಮ್ಮಲ್ಲಿಯೇ ಮಗ್ನರಾಗಿದ್ದರು. ಆದರೆ ಇಂದು....ಇಂದು ತಮ್ಮ ಬ್ರಹ್ಮಚರ್ಯ ಜಾರುತ್ತಿರುವಂತೆ ಕಾಣುತ್ತಿತ್ತು. ಅದೇ ಸಮಯಕ್ಕೆ ಆ ತರುಣಿ ಅವರ ಮತ್ತಷ್ಟು ಸಮೀಪಕ್ಕೆ ಜಾರಿ ಬಂದಳು. ಅವಳ ಶರೀರದಿಂದ ಕಸ್ತೂರಿ-ಗಂಧ ಗಾಳಿಯಲ್ಲಿ ತೇಲುತ್ತ ಅವರ ಮೂಗಿನಲ್ಲಿ ತುಂಬುತ್ತ ಹೊರಟುಹೋಗಿತ್ತು. ಮಾದಕತೆಯಿಂದ ತುಂಬಿದ ಆ ಸುಗಂಧದಿಂದ ಅವರ ಇಡೀ ಶರೀರ ಉತ್ತೇಜಿತವಾಗಿತ್ತು. ಅವರ ಕಡೆಗೆ ನೋಡುತ್ತ, ಮಂದಸ್ಮಿತೆಯಾದ ತರುಣಿಯು ದಯಾಲ್‌ಜೀಭಾಯಿಯ ಕೊರಳಲ್ಲಿ ತನ್ನ ಬಿಳಿಯ ಗುಂಡಾದ ಬಾಹುಗಳನ್ನು ನೋಡಿವಳು. ಇಬ್ಬರ ಉಸಿರಾಟವೂ ತೀವ್ರ....ಮತ್ತಷ್ಟು ತೀವ್ರಗೊಳ್ಳುತ್ತಿತ್ತು. ಇದಾದ ನಂತರ ದಯಾಲ್‌ಜೀಭಾಯಿ ತಮ್ಮ ಪ್ರಜ್ಞೆಯನ್ನೇ ಕಳೆದುಕೊಂಡರು

ಮತ್ತು ಆ ಯುವತಿಯು ಜೊತೆಯಲ್ಲಿ ಕತ್ತಲೆಯಲ್ಲಿ ಎಲ್ಲಿಯೋ ಮಾಯವಾಗಿ ಬಿಟ್ಟಿದ್ದರು.

ತೃಪ್ತಿಯು ಪರಾಕಾಷ್ಠೆಯ ಅನುಭವವಾಗುತ್ತಲೇ ಆ ತರುಣಿ ಮಾರನೇ ದಿನ ಬರುವುದಾಗಿ ಹೇಳಿ ಅಲ್ಲಿಂದ ಹೊರಡತೊಡಗಿದಳು. ದಯಾಲ್‌ಜೀಭಾಯಿ ಹೇಳಿದರು—'ಇನ್ನು ಬಾರಿ-ಬಾರಿಗೂ ಇಲ್ಲಿ ಬರುವುದು ಸರಿಯಾಗುವುದಿಲ್ಲ. ನನ್ನ ತಂದೆ ತಾಯಿಗಳಿಗೆ ಗೊತ್ತಾದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಇಂದು ಏನಾಯಿತು, ಅದು ಮತ್ತೆ ಸಾಧ್ಯವಾಗುವುದಿಲ್ಲ. ಇನ್ನು ನೀನು ಎಂದಿಗೂ ಬರುವಂತಿಲ್ಲ.'

'ಇಂದೇ ಇನ್ನೂ ಪ್ರಾರಂಭವಾಗಿದೆ. ನನ್ನ ಬಯಕೆಯೂ ಅನಂತವಾಗಿದೆ. ಅದಂತೂ ಯುಗ-ಯುಗಾಂತರದವರೆಗೂ ಇರುತ್ತದೆ. ನಾನು ನಿನ್ನನ್ನು ಯಾವುದೇ ಎಂಥದೇ ಪರಿಸ್ಥಿತಿಯಲ್ಲೂ ಬಿಡಲಾರೆ. ನಾವಿಬ್ಬರೂ ಪರಸ್ಪರ ಸಮಗಾಗಿಯೇ ಇರುವವರು' ಎಂದು ಹೇಳಿದ ಆ ಯುವತಿ ಆ ಕತ್ತಲೆಯಲ್ಲಿ ಎಲ್ಲಿಯೋ ಮಾಯವಾಗಿಬಿಟ್ಟಳು. ದಯಾಲ್‌ಜೀಭಾಯಿ ತಮ್ಮ ಮನೆಗೆ ಬಂದುಬಿಟ್ಟಿದ್ದರು. ಮನೆಗೆ ಬಂದ ಮೇಲೆ ಬ್ರಹ್ಮಚರ್ಯೆಯ ವ್ರತ ಮುರಿದು ಬಿದ್ದುದರಿಂದ ಸಾಕಷ್ಟು ಪಶ್ಚಾತ್ತಾಪವಾಗುತ್ತಿತ್ತು. ಆ ಯುವತಿಯನ್ನು ಇನ್ನು ಎಂದಿಗೂ ಭೇಟಿ ಮಾಡುವುದಿಲ್ಲವೆಂದು ನಿರ್ಧರಿಸಿಕೊಂಡರು.

ಮಾರನೆಯ ದಿನವೂ ಸಹ ಎಂದಿನಂತೆ ತಮ್ಮ ಎಲ್ಲ ಕೆಲಸಗಳನ್ನು ಪೂರ್ಣವಾಗಿ ಮಾಡಿದ್ದರು. ವ್ಯಾಯಾಮ ಮತ್ತು ಕಸರತ್ತು ಮಾಡಿದ ನಂತರ ಪೇಟೆ-ಸಂತೆ ಮತ್ತು ಮನೆಯ ಕೆಲಸಗಳನ್ನು ಮಾಡಿದ್ದರು. ನಂತರ ಮಲಗುವುದಕ್ಕೆ ತಮ್ಮ ಕೋಣೆಗೆ ಹೋಗಿದ್ದರು. ಸಾಕಷ್ಟು ಹೊತ್ತಿನತನಕ ತಮ್ಮ ಮಂಚದ ಮೇಲೆ ಮಲಗಿದ್ದು ಏನೇನೋ ವಿಚಾರಗಳಲ್ಲಿ ಮುಳುಗೇಳುತ್ತ ಹಾಗೆಯೇ ನಿದ್ದೆ ಹೋಗಿದ್ದರು.

ಇದ್ದಕ್ಕಿದ್ದಂತೆ ರಾತ್ರಿ ಹನ್ನೆರಡುವರೆ ಗಂಟೆಯ ಹೊತ್ತಿನಲ್ಲಿ ಯಾರೋ ತಮ್ಮ ಬಳಿ ನಿಂತಿರುವಂತೆ ಭಾಸವಾಯಿತು. ಅವರು ಕಣ್ಣುಮುಚ್ಚಿಕೊಂಡೇ ಆಗಂತುಕರ ಕಾಲುಸಪ್ಪಳವನ್ನು ಕೇಳಿಸಿಕೊಳ್ಳುತ್ತಿದ್ದರು. ನಂತರ ಬಳೆಗಳ ಝಣಝಣ ಶಬ್ದ ಕೇಳಿಸಿತು. ಛನ್-ಛನ್-ಛನನ್, ಯಾರೋ ಸಿತಾರಿನ ತಂತಿಯನ್ನು ಮೀಟಿದರೊ ಎನ್ನುವಂತೆ ಅನುಭವವಾಯಿತು. ಮಧುರ ಮತ್ತು ಸಿಹಿಯಾದ ಸಂಗೀತ ಗಾಳಿಯಲ್ಲಿ ತೇಲಿಹೋಯಿತು. ಮುಚ್ಚಿದ ಕಣ್ಣುಗಳು ಕೂಡಲೇ ತೆರೆದವು. ಎದುರಿನಲ್ಲಿ ಅದೇ ತರುಣಿಯನ್ನು ಕಂಡು ಬೆಚ್ಚಿಬಿದ್ದರು.

ಆಕೆ ಬಾಗಿಲನ್ನು ತೆರೆದುಕೊಂಡು ಬಂದಿರಬೇಕೆಂದು ಯೋಚಿಸಿದರು. ಆದರೆ ಬಾಗಿಲು ಒಳಗಿನಿಂದ ಬಂದಾಗಿತ್ತು, ಮತ್ತೆ....ಮತ್ತೆ....ಹೇಗೆ ಬಂದಿರಬಹುದು? ಈ ಪ್ರಶ್ನೆ ಅವರ ಮನಸ್ಸು-ಬುದ್ಧಿಯಲ್ಲಿ ಪ್ರತಿಧ್ವನಿಸುತ್ತಿತ್ತು.

'ನೀನು ಇಲ್ಲಿಗೆ ಹೇಗೆ ಬಂದೆ? ಎಲ್ಲಿಯಾದರೂ ಯಾರಾದರೂ ನೋಡಿಬಿಟ್ಟರೆ?'

ಅವಳು ಯಾವ ಉತ್ತರವನ್ನು ಕೊಡುವ ಪ್ರಯತ್ನ ಮಾಡಲಿಲ್ಲ, ಕೇವಲ ತನ್ನ ಕಣ್ಣುಗಳನ್ನು ಅವನ ಮುಖದ ಮೇಲೆ ಚೆಲ್ಲಿ ನಿಂತಿದ್ದಳು. ಪುನಃ ಪ್ರಶ್ನಿಸಿದಾಗ ಅವಳ ತುಟಿಗಳ ಮೇಲೆ ಅದೇ ಚಿರಪರಿಚಿತ ಮಂದಹಾಸ ಚಿಮ್ಮಿ ಬಂದಿತ್ತು. ನಿಧಾನವಾಗಿ ತುಟಿದಳ ತೆರೆಯಿತು, ಆಕೆ ಕಿಟಕಿಯ ಕಡೆಗೆ ತೋರಿಸುತ್ತ ಹೇಳಿದಳು—'ನಾನು ಈ ದಾರಿಯಿಂದ ಬಂದಿದ್ದೇನೆ. ನಿಶ್ಚಿಂತನಾಗಿರು, ಮನೆಯವರು ನೆಮ್ಮದಿಯ ನಿದ್ರೆಯಲ್ಲಿದ್ದಾರೆ. ಯಾರಿಗೂ ಕಾಲ ಸಪ್ಪಳವೂ ಕೇಳಿಸುವುದಿಲ್ಲ.'

ಇಷ್ಟನ್ನು ಹೇಳಿ ಅವಳು ದಯಾಲ್‌ಜೀ ಭಾಯಿಯ ಹತ್ತಿರ ಬಂದು ಕುಳಿತುಕೊಂಡಳು. ಮಧ್ಯರಾತ್ರಿಯಲ್ಲಿ ಶೂನ್ಯವಾದ ಕೊಠಡಿಯಲ್ಲಿ ಈ ರೀತಿ ಅಪರಿಚಿತ ಯುವತಿಯೊಬ್ಬಳು ಒಮ್ಮೆ ಅಂಟಿಕೊಂಡು ಕುಳಿತುಕೊಳ್ಳುವುದು, ಅವರಿಗೆ ಒಡಿಸಲಿಲ್ಲ. ಅವರು ಸ್ವಲ್ಪ ಸಂಕೋಚಪಟ್ಟುಕೊಳ್ಳುತ್ತ ಹೇಳಿದರು. ಆದರೆ ಈ ಕಿಟಕಿಯಿಂದ ನೀನು ಬಂದೆ ಹೇಗೆ?...ಅಲ್ಲದೆ ನೀನು ಮತ್ತೆ ಎಂದಿಗೂ ನನ್ನೊಡನೆ ಸೇರುವ ಪ್ರಯತ್ನವನ್ನು ಮಾಡುವುದಿಲ್ಲ, ಮಾಡಬಾರದು ಎಂದೂ ಹೇಳಿದ್ದೆ. 'ನಾನು ನಿನ್ನನ್ನು ಸೇರಲು ಕಿಟಕಿಯೇ ಏನು, ಕಬ್ಬಿಣದ ಬಾಗಿಲನ್ನು ಮುರಿದು ಬರಬಲ್ಲೆ. ನಿನ್ನೊಂದಿಗೆ ಸೇರಲು ಬರುವ ನನಗೆ ಯಾರೂ ತೊಂದರೆ ಉಂಟುಮಾಡಲಾರರು. ನಾನು ಬಯಸಿದಾಗ ಎಲ್ಲಿಬೇಕಾದರೂ ಯಾವ ವೇಳೆಯಲ್ಲಿ ಬೇಕಾದರೂ, ನಿನ್ನನ್ನು ಸೇರಿಕೊಳ್ಳುತ್ತೇನೆ.'

ಇದನ್ನು ಕೇಳಿ ದಯಾಲ್‌ಜೀಭಾಯಿಗೆ ಕೊಂಚ ಕೋಪ ಬರುವುದು ಸಹಜವಾಗಿತ್ತು, ಆದರೂ ಅವರು ತನ್ನ ಪರಿವಾರದವರನ್ನು ಗಮನಿಸಿ ಕೋಪವನ್ನು ತಡೆದುಕೊಂಡರು ಮತ್ತು ಮೆಲ್ಲೇಳುತ್ತ ಅವಳೊಂದಿಗೆ ಹೇಳಿದರು—'ನಡಿ, ಹೊರಗೆಹೋಗೋಣ. ಅಲ್ಲಿಯೇ ಕುಳಿತುಕೊಂಡು ಮಾತನಾಡೋಣ. ಇಲ್ಲಿರುವುದು ಅಪಾಯಕಾರಿ.'

'ಏಕೆ, ಇಲ್ಲಿ ಭಯವಾಗುತ್ತದೆಯೆ?' ಅವಳು ಕೇಳಿದಳು. 'ಹೌದು, ಮನೆಯವರಿಗೆ ಹೆದರಲೇಬೇಕಾಗುತ್ತದೆ. ತಂದೆಯವರಿಗೇನಾದರೂ ನಿನ್ನ ವಿಷಯ ತಿಳಿದುಬಿಟ್ಟರೆ ಮನೆಯಲ್ಲಿರುವುದು ಕಷ್ಟವಾಗುತ್ತದೆ.' ದಯಾಲ್‌ಜೀಭಾಯಿಯ

ಮಾತುಗಳನ್ನು ಕೇಳದೆ ಮಂದಸ್ಮಿತಳಾಗಿ ಅವರನ್ನು ನೋಡುತ್ತಲೇ ಇದ್ದಳು. ನಂತರ ಇದ್ದಕಿದ್ದಂತೆ ಮೇಲೇಳುತ್ತ ಹೇಳಿದ್ದಳು—

ನಿಮಗೆ ಇಷ್ಟವಿದ್ದರೆ ನಡೆಯಿರಿ, ಹೊರಗಡೆ ನಡೆದರು.

ದಯಾಲ್‌ಜೀಭಾಯಿ ಯುವತಿಯಿಂದ ಬಿಡುಗಡೆ ಪಡೆಯುವ ದೃಷ್ಟಿಯಿಂದ ಹೊರಗಡೆ ಬಂದು ಮೊದಲ ದಿನದಂತೆಯೇ ಸ್ವಲ್ಪಹೊತ್ತು ಮಾಯವಾಗಿ ಬಿಟ್ಟರು. ಯುವತಿಯ ಸಾನ್ನಿಧ್ಯವನ್ನು ಪಡೆಯುತ್ತಿದ್ದಂತೆಯೇ ದಯಾಲ್‌ಜೀಭಾಯಿಯ ಮೇಲೆ ಅದಾವ ಇಂದ್ರಜಾಲದ ಪ್ರಭಾವವಾಗುತ್ತಿತ್ತೊ ಕಾಣೆ ಅವರು ತಮ್ಮ ಇರವನ್ನೇ ಮರೆತುಬಿಡುತ್ತಿದ್ದರು ಮತ್ತು ಆ ಯುವತಿಯ ಶಾರೀರಿಕ ಸಂಪರ್ಕಕ್ಕಾಗಿ ವ್ಯಾಕುಲಗೊಳ್ಳುತ್ತಿದ್ದರು.

ಆ ದಿನವೂ ಸಹ ಸುಮಾರು ನಾಲ್ಕು ಗಂಟೆಯ ತನಕ ಇಬ್ಬರೂ ಪ್ರೇಮಾಲಾಪದಲ್ಲಿ ಮುಳುಗಿದ್ದರು. ಯುವತಿಯು ಇದ್ದಕಿದ್ದಂತೆ ಮೇಲೆದ್ದು ಹೇಳಿದಳು—'ಒಳ್ಳೆಯದು, ಈಗ ನಾನು ಹೋಗುತ್ತೇನೆ.' ದಯಾಲ್‌ಜೀಭಾಯಿಗೆ ಅವಳು ಹೋಗುವುದು ಇಷ್ಟವಿರಲಿಲ್ಲ, ಆದರೂ ಅವರು ನೋಡು ನೋಡುತ್ತಿರುವಂತೆಯೇ ಆ ಯುವತಿ ಎದ್ದು ಕತ್ತಲಲ್ಲಿ ಒಂದು ಕಡೆ ಕಣ್ಮರೆಯಾಗಿದ್ದಳು. ದಯಾಲ್‌ಜೀಭಾಯಿಗೆ ಯುವತಿಯು ಹೀಗೆ ಇದ್ದಕಿದ್ದಂತೆ ಮಾಯವಾಗುವುದು ಆಶ್ಚರ್ಯಕರವಾಗಿ ಕಾಣುತ್ತಿತ್ತು. ಆದರೂ ಅವರು ಯೋಚಿಸಿದರು, ಬಹುಶಃ ನನ್ನ ಕಣ್ಣುಗಳಿಗೆ ಮೋಸವಾಗಿರಬೇಕು ಎಂದು ಯೋಚಿಸುತ್ತ ಅವರು ತಮ್ಮ ಕೋಣೆಗೆ ಬಂದರು. ಹೋಗುತ್ತಿರುವಾಗಲೇ ಆ ತರುಣಿ ಮಾರನೆಯದಿನವೂ ಬರುವುದಾಗಿ ಹೇಳಿ ಹೋಗಿದ್ದಳು. ದಯಾಲ್‌ಜೀಭಾಯಿ ಅವರ ಮನಸ್ಸು ಸ್ಪರ್ಶಸುಖದ ಮಧುರ ಕಲ್ಪನೆಯಲ್ಲಿ ಕಳೆದುಹೋಗಿತ್ತು. ಯುವತಿಯನ್ನು ಸಂಧಿಸುವುದರಲ್ಲಿ ಅವರಿಗೆ ಈಗ ಅಲೌಕಿಕ ಸುಖದ ಅನುಭವವಾಗತೊಡಗಿತ್ತು. ಅವರು ಬಹಳ ವ್ಯಾಘ್ರರಾಗಿ ಕಾತರತೆಯಿಂದ ಅವಳ ಆಗಮನದ ಪ್ರತೀಕ್ಷೆ ಮಾಡುತ್ತಿದ್ದರು ಮತ್ತು ಅವಳು ಅವರ ಹತ್ತಿರ ಬರುತ್ತಿದ್ದಂತೆಯೇ ಅವಳ ಬಾಹುಗಳಲ್ಲಿ ಬಂಧಿತರಾಗಿ ಬಿಡುತ್ತಿದ್ದರು. ಯುವತಿಯ ಬಂಧನದಲ್ಲಿ ಅವರಿಗೆ ಬಹಳ ಸುಖ ದೊರೆಯುತ್ತಿತ್ತು. ಒಂದು ದಿನ ಅವರು ಆ ತರುಣಿಯ ಹೆಸರನ್ನು ಕೇಳಿಬಿಟ್ಟರು. ಅವಳು ತನ್ನ ಹೆಸರನ್ನು ಶಾಂತಾ ಎಂದು ಹೇಳಿದ್ದಳು. ಶಾಂತಾಳನ್ನು ಪಡೆದ ದಯಾಲ್‌ಜೀಭಾಯಿಯು ಒಳ್ಳೆಯ ಸ್ವರ್ಗಸುಖವನ್ನು ಪಡೆದಿದ್ದರು...

ಈಗ ಶಾಂತಾ ಪ್ರತಿನಿತ್ಯವೂ ಬರುತ್ತಿದ್ದಳು ಮತ್ತು ದಯಾಲ್‌ಜೀಭಾಯಿಯು

ಜೊತೆಯಲ್ಲಿ ಪ್ರಣಯ ಲೀಲೆಯನ್ನು ನಡೆಸಿ ಹೋಗುತ್ತಿದ್ದಳು. ಒಂದು ದಿನ ದಯಾಲ್‌ಜೀಭಾಯಿ ರಾತ್ರಿಯೆಲ್ಲಾ ಶಾಂತಾಳಿಗಾಗಿ ಪ್ರತೀಕ್ಷೆ ಮಾಡುತ್ತಿದ್ದರು, ಶಾಂತಾ ಆ ರಾತ್ರಿ ಬಂದಿರಲಿಲ್ಲ. ಶಾಂತಾಳ ವಿರಹವಲ್ಲಿ ಒಂದೊಂದು ಕ್ಷಣವನ್ನು ಅವರು ಬಹಳ ಕಷ್ಟ ಮತ್ತು ಅಶಾಂತಿಯಿಂದ ಕಳೆದಿದ್ದರು. ಶಾಂತಾ ಬರದ ಕಾರಣ ಅವರ ಮನಸ್ಸಿನಲ್ಲಿ ಅನೇಕ ರೀತಿಯ ಅನುಮಾನಗಳು ಉಂಟಾಗುತ್ತಿದ್ದವು. ಹೇಗೋ ಹಗಲು ಕಳೆಯಿತು, ಪುನಃ ರಾತ್ರಿ ಬಂದಿತು. ನಿಶ್ಚಿತ ಸಮಯಕ್ಕೆ ಸರಿಯಾಗಿ ಶಾಂತಾಳೂ ಬಂದಳು. ಅವಳು ಬರುತ್ತಲೇ ಮಾದಕ ಮಂದಹಾಸವನ್ನು ಬೀರುತ್ತ ಹೇಳಿದಳು! ಬಹುಶಃ ನೀನು ನನ್ನಿಂದ ಕೋಪಗೊಂಡಿರಬಹುದು. ಏನು ಮಾಡಲಿ, ನಿನ್ನೆ ಬರಲಾಗದಂತಹ ಕೆಲಸ ಬಂದು ಬಿಟ್ಟಿತು, ಅದರಿಂದ ನಾನು ನಿನ್ನೆ ಬರಲಾಗಲಿಲ್ಲ.

'ಇವೆಲ್ಲ ನೆಪಗಳು. ನನ್ನ ವಿಕಲಗೊಂಡ ಮನಸ್ಸನ್ನು ನೀನೇನು ಬಲ್ಲೆ. ನಾನು ಇಡೀ ರಾತ್ರಿ ಚಕೋರಪಕ್ಷಿಯಂತೆ ನಿನ್ನ ಪ್ರತೀಕ್ಷೆಯಲ್ಲಿ ಎಚ್ಚರವಾಗಿದ್ದೆ.' ದಯಾಲ್‌ಜೀಭಾಯಿ ಕಪಿಯಂತೆ ಹೇಳಿದರು. ಶಾಂತಾಳು ಅದೇ ರೀತಿಯಲ್ಲಿ ನಸುನಗುತ್ತ ಹೇಳಿದಳು—

'ನನ್ನನ್ನು ಕ್ಷಮಿಸಿಬಿಡು. ಇನ್ನು ಮುಂದೆ ಹೀಗಾಗಲಾರದು.' ಇಷ್ಟನ್ನು ಹೇಳಿ ಅವಳು ದಯಾಲ್‌ಜೀಭಾಯಿಯನ್ನು ತನ್ನ ಎದೆಯಲ್ಲಿ ತುಂಬಿಕೊಂಡಳು. ದಯಾಲ್‌ಜೀಭಾಯಿಯೂ ಕೂಡ ಎಲ್ಲ ದೂರುಗಳನ್ನು ಮರೆತು ಅವಳ ವಕ್ಷಸ್ಥಳದಲ್ಲಿ ಕರಗುತ್ತಾ ಹೋಗಿದ್ದರು.

ಒಂದು ದಿನ ಪುನಃ ಇದ್ದಕಿದ್ದಂತೆ ಶಾಂತ ಮಾಯವಾಗಿ ಬಿಟ್ಟಿದ್ದಳು. ದಯಾಲ್‌ಜೀಭಾಯಿ ಮತ್ತೊಂದು ಸಾರಿ ಇಡೀ ರಾತ್ರಿ ಅವಳ ನಿರೀಕ್ಷೆ ಮಾಡುತ್ತಾ, ಅಶಾಂತಿಯಿಂದ ರಾತ್ರಿಯನ್ನು ಕಳೆಯುತ್ತಿದ್ದರು, ಆದರೆ ಅವಳು ಬರಲಿಲ್ಲ. ಮಾರನೆಯ ದಿನ ಶಾಂತಾ ಬಂದಾಗ ದಯಾಲ್‌ಜೀಭಾಯಿಗೆ ಅವಳ ಮೇಲೆ ಮಿತಿಮೀರಿದ ಕೋಪ ಬಂತು ಮತ್ತು ಆವೇಶದಲ್ಲಿ ಅವಳನ್ನು ಹೊಡೆದೂ ಬಿಟ್ಟರು. ಆ ವೇಶದಲ್ಲಿಯೇ ಅನಂತರ ಅವಳ ಮನೆಯ ವಿಳಾಸವನ್ನು ಕೇಳುತ್ತ ಹೇಳಿದರು—'ನೀನು ನನಗೆ ನಿನ್ನ ಮನೆಯ ವಿಳಾಸವನ್ನು ಕೊಟ್ಟುಬಿಡು. ನಿನಗೆ ಬರಲಾಗದಿದ್ದರೆ ನಾನು ಅಲ್ಲಿಗೇ ಬಂದು ಬಿಡುತ್ತೇನೆ. ಆದರೆ ಶಾಂತಾ ತನ್ನ ಇಕ್ಕಟ್ಟನ್ನು ತಿಳಿಸಿ ಮನೆಯ ವಿಳಾಸವನ್ನು ಕೊಡಲು ನಿರಾಕರಿಸಿದಳು. ದಯಾಲ್‌ಜೀಭಾಯಿ ಲಕ್ಷ ಪ್ರಯತ್ನಪಟ್ಟರೂ ಅವಳು ತನ್ನ ಮನೆಯ ವಿಳಾಸವನ್ನು ಕೊಡದಿದ್ದಾಗ ಮಾರನೆಯ ದಿನ ತಾನೇ ಸ್ವತಃ ಅವಳನ್ನು ಹಿಂಬಾಲಿಸಿ

ದರು. ಶಾಂತಾ ಕತ್ತಲೆಯ ದಾರಿಯಲ್ಲಿ ನಡೆಯುತ್ತ ಅವಳು ಸ್ಮಶಾನದ ಕಡೆಗೆ ಹೋಗುತ್ತಿರುವುದನ್ನು ಕಂಡರು ಮತ್ತು ಅವಳು ಪುನಃ ಒಂದು ಪೊದೆಯ ಬಳಿ ಬಂದಾಗ ದಯಾಲ್‌ಜೀಭಾಯಿ ಅವಳನ್ನು ಹಿಡಿದುಕೊಂಡರು. ದಯಾಲ್‌ಜೀ ಭಾಯಿ ಹಿಡಿದುಕೊಳ್ಳುತ್ತಿದ್ದಂತೆಯೇ ಅವಳು ಬೆಚ್ಚಿಬಿದ್ದಳು.

'ನೀನು, ಇಲ್ಲಿ?'

'ಏಕೆ, ಏನಾಯಿತು? ನಿನ್ನ ಮನೆಯ ವಿಳಾಸವನ್ನು ತಿಳಿಯಲೇಬೇಕೆಂದು ಇಂದು ನಾನು ನಿಶ್ಚಯಮಾಡಿಕೊಂಡಿದ್ದೆ.' ದಯಾಲ್‌ಜೀಭಾಯಿ ದೃಢವಾದ ಸ್ವರದಲ್ಲಿ ಹೇಳಿದರು, ನಡುಗಿಬಿಟ್ಟಳು ಶಾಂತಾ. ಅವಳ ಮುಖದ ಮೇಲೆ ವಿಸ್ಮಯ ಜಾಗ್ರತವಾಯಿತು ಮತ್ತು ಅವಳು ವ್ಯಾಕುಲಗೊಂಡಂತೆಯೂ ಕಾಣು ತ್ತಿತ್ತು. ಹಿಂತಿರುಗಿ ಹೋಗುವಂತೆ ದಯಾಲ್‌ಜೀಭಾಯಿಯನ್ನು ಪ್ರಾರ್ಥಿಸಿ ಕೊಂಡಳು. ಆದರೆ ಇಂದು ಅವಳ ಮನೆಯಿರುವ ಜಾಗವನ್ನು ನೋಡಿಕೊಂಡೇ ಹೋಗುವುದಾಗಿ ದಯಾಲ್‌ಜೀಭಾಯಿ ದೃಢಸ್ವರದಲ್ಲಿ ಹೇಳಿದರು. ಶಾಂತಾಳ ಎಲ್ಲ ರೀತಿಯ ಪ್ರಯತ್ನಗಳೂ ವಿಫಲವಾಗಲು, ಸೋತುಹೋದ ಶಾಂತಾ ಎಲ್ಲ ವಿಷಯಗಳನ್ನು ಹೇಳಿದಳು—'ನಾನು ಸಾಧಾರಣ ಸ್ತ್ರೀ ಅಲ್ಲ, ಆದರೆ ಒಬ್ಬ ಮೋಹಿನಿ. ಯುವಾವಸ್ಥೆಯಲ್ಲಿಯೇ ಬಾವಿಯಲ್ಲಿ ನೀರು ತರಲು ಹೋದಾಗ ಬಾವಿಗೆ ಬಿದ್ದ ಕಾರಣ ಮೃತ್ಯುವನ್ನಪ್ಪಿದೆ. ಅನಂತರ ಪ್ರೇತಯೋನಿಯಲ್ಲಿ ಹೀಗೆಯೇ ಅಲೆದಾಡುತ್ತಿದ್ದೆ. ಅನಂತರ ನನಗಿಂತಲೂ ಬಲಶಾಲಿಯಾದ ಒಬ್ಬ ತಾಂತ್ರಿಕ ಮೋಹಿನಿ (ವೃದ್ಧೆ)ಯು ನನ್ನನ್ನು ತನ್ನ ವಶಮಾಡಿಕೊಂಡಳು ನಾನಲ್ಲದೆ ಇನ್ನೂ ಅನೇಕ ಮೋಹಿನಿಗಳು ಅವಳ ಅಧೀನದಲ್ಲಿವೆ.' ಎಲ್ಲ ಮೋಹಿನಿ ಗಳೂ ಆ ವೃದ್ಧೆಯನ್ನು ಆಜೀಮಾ ಎಂದು ಕರೆಯುತ್ತವೆ. ಆ ವೃದ್ಧೆಯೂ ಕೂಡ ಅವುಗಳನ್ನು ತನ್ನ ಮಕ್ಕಳಂತೆಯೇ ಪ್ರೀತಿಸುತ್ತಾಳೆ ಎಂದೂ ಹೇಳಿದಳು.

ಶಾಂತಾ ಸಾಧಾರಣ ತರುಣಿಯಲ್ಲ, ಅವಳು ಮೋಹಿನಿ, ಇದನ್ನು ತಿಳಿದ ದಯಾಲ್‌ಜೀಭಾಯಿಗೆ ರೋಮಾಂಚವಾಯಿತು. ಇಲ್ಲಿಯವರೆಗೆ ಅವರಿಗೆ ಎಂದೂ ಯಾವುದೇ ರೀತಿಯ ಭಯದ ಅನುಭವವಾಗಿರಲಿಲ್ಲ; ಆದರೆ ಆ ದಿನ ನಿಜಕ್ಕೂ ಭಯ ಎಂದರೇನು ಎಂಬುದನ್ನು ತಿಳಿದುಕೊಂಡರು. ಅತ್ಯಂತ ಧೈರ್ಯಶಾಲಿ ಎಂದು ತಿಳಿದಿದ್ದರೂ ಸಾಕಷ್ಟು ದಿನಗಳಿಂದಲೂ ಮೋಹಿನಿಯ ಸಂಸರ್ಗವಿತ್ತು ಎಂದು ತಿಳಿದಕೂಡಲೇ ಗಾಬರಿಯುಂಟಾಗಿತ್ತು. ಅವಳ ಜೊತೆ ಯಲ್ಲಿ ಅವರು ಯೌವ್ವನದ ಮಾದಕ ಆನಂದವನ್ನೂ ಅನುಭವಿಸಿದ್ದರು. ವಾಸ್ತವ

ವಾಗಿ ಅಂದು ಅವರಿಗೆ ಒಂದು ರೀತಿಯ ವಿಚಿತ್ರ ಅನುಭವವಾಗಿತ್ತು. ವಿಸ್ಮಯ ಮತ್ತು ರೋಮಾಂಚಗಳಿಂದ ಅವರ ಇಡೀ ಶರೀರ ಥರಥರನೆ ನಡುಗಿತ್ತು. ಹೇಗೋ ತನ್ನನ್ನು ತಾನು ಸಾವರಿಸಿಕೊಂಡರು ಮತ್ತು ಶಾಂತಾಳಿಗೆ ಹೇಳಿದರು—'ನಾನು ನಿನ್ನ ಅಜ್ಜೀಮಾಳನ್ನು ಭೇಟಿಮಾಡಬಯಸುತ್ತೇನೆ.' ಸರಿ, ಆಗಲಿ, ನಾನು ನಿನಗೆ ಒಂದು ಉಪಾಯವನ್ನು ಹೇಳುತ್ತೇನೆ. ಅದೇ ರೀತಿ ನೀನು ಮಾಡುವುದಾದರೆ ಅವಳನ್ನು ಭೇಟಿ ಮಾಡುವುದು ಸುಲಭವಾಗುತ್ತದೆ. ತಾಂತ್ರಿಕ ವೃದ್ಧೆ ಶಿವನ ಉಪಾಸಕಿ. ಪೂಜಾ ಪತ್ರೆ ಮುಂತಾದುವುಗಳೊಂದಿಗೆ ಈ ಮರದ ಕೆಳಗೆ ಬಂದು ಸ್ವಲ್ಪ ಹೊತ್ತು ಶಿವ-ಮಂತ್ರದ ಜಪಮಾಡುತ್ತಿದ್ದರೆ ವೃದ್ಧೆಯೊಂದಿಗೆ ನಿನ್ನ ಭೇಟಿಯಾಗುತ್ತದೆ. ಆದರೆ ಈ ಕೆಲಸವನ್ನು ರಾತ್ರಿ ಹನ್ನೆರಡು ಗಂಟೆಯ ಮೇಲೆ ಮಾಡಬೇಕು ಎಂದು ಹೇಳಿ ಶಾಂತಾ ಮಂತ್ರವನ್ನು ಸಹ ದಯಾಲ್‌ಜೀಭಾಯಿಗೆ ತಿಳಿಸಿದಳು.

ವೃದ್ಧೆಯ ತಂತ್ರ-ಮಂತ್ರ

ಮಾರನೆಯ ದಿನ ದಯಾಲ್‌ಜೀಭಾಯಿಯು ಪೇಟೆಯಿಂದ ಬಿಲ್ವಪತ್ರೆ ಮತ್ತು ಪೂಜಾ ಸಾಮಗ್ರಿಯನ್ನೆಲ್ಲ ಕೊಂಡುಕೊಂಡು ಪೂರ್ಣನಿಷ್ಠೆಯೊಂದಿಗೆ ರಾತ್ರಿಯ ನಿರೀಕ್ಷೆ ಮಾಡತೊಡಗಿದರು. ಅರ್ಧ ರಾತ್ರಿಯಲ್ಲಿ ಅವರು ಎಲ್ಲ ಸಾಮಗ್ರಿಗಳನ್ನು ತೆಗೆದುಕೊಂಡು ಶಾಂತಾ ಹೇಳಿದ್ದ ಜಾಗವನ್ನು ತಲುಪಿದರು. ಅವರು ಇನ್ನು ಶಾಂತಾಳ ನಿರೀಕ್ಷೆಮಾಡುತ್ತಿರುವಾಗಲೇ ಆಕಸ್ಮಾತ್ತಾಗಿ ಶಾಂತಾ ಬಂದಳು. 'ಬಂದು ಬಿಟ್ಟೆಯಾ?' ಶಾಂತಾ ಬರುತ್ತಿದ್ದಂತೆಯೇ ಕೇಳಿದಳು. 'ಹೌದು ನಾನು ನಿನ್ನ ಪ್ರತೀಕ್ಷೆಯಲ್ಲಿಯೇ ಇದ್ದೆ.' ದಯಾಲ್‌ಜೀಭಾಯಿ ಹೇಳಿದರು. 'ಒಳ್ಳೆಯದು, ನಡಿ,' ಎಂದು ಹೇಳಿ ದಯಾಲ್‌ಜೀಭಾಯಿಯನ್ನು ಕರೆದುಕೊಂಡು ವೃದ್ಧೆ (ಮೋಹಿನಿ) ಇರುತ್ತಿದ್ದ ಜಾಗಕ್ಕೆ ಹೋದಳು. ಒಂದು ನಿರ್ಜನ ಪ್ರದೇಶದಲ್ಲಿ ಮರದ ಹತ್ತಿರ ಹೋಗಿ ದಯಾಲ್‌ಜೀಭಾಯಿ ಶಿವ ಮಂತ್ರೋಚ್ಚಾರಣೆ ಮಾಡಲು ಆರಂಭಿಸಿದರು. ಸ್ವಲ್ಪ ಹೊತ್ತಿನ ನಂತರ ಇದ್ದಕಿದ್ದಂತೆ ಎಲ್ಲಿಂದಲೋ ಎಪ್ಪತ್ತು ವರ್ಷದ ಮುದುಕಿ ಬಂದು ನಿಂತುಬಿಟ್ಟಳು. ಈ ಮುದುಕಿಯ ಕೂದಲು ಬಿಳುಪು, ಕಣ್ಣಿನ ಹತ್ತಿರ ಚರ್ಮ ಸುಕ್ಕುಗಟ್ಟಿತ್ತು ಮತ್ತು ಕೆನ್ನೆಗಳು ಒಳಕ್ಕೆ ಅಂಟಿಕೊಂಡಿದ್ದವು. ಇಷ್ಟಾದರೂ ಅವಳ ಕಣ್ಣುಗಳಲ್ಲಿ ಒಂದು ರೀತಿಯ ವಿಚಿತ್ರವಾದ (ಕಾಂತಿ) ಇತ್ತು. ಮುದುಕಿಯನ್ನು ಕಾಣುತ್ತಲೇ ದಯಾಲ್‌ಜೀಭಾಯಿ ಬಾಗಿ ಚರಣಸ್ಪರ್ಶ ಮಾಡಿದರು. ನಂತರ

ಮಂತ್ರವನ್ನು ಪಠಿಸುತ್ತ ಶಿವನ ಆರಾಧನೆಯನ್ನು ಮಾಡಿದರು. ತಾವು ತಂದಿದ್ದ ಪೇಡೆಯನ್ನೆಲ್ಲ ಆ ಮುದುಕಿಗೆ ಸಮರ್ಪಿಸಿ ಬಿಟ್ಟರು. ಮುದುಕಿಯು ಪ್ರಸನ್ನಳಾಗಿ ಕೇಳಿದಳು—

'ಏನು ಸಮಾಚಾರ, ಮಗು, ನೀನು ಇಷ್ಟೊಂದು ಪೂಜೆಯನ್ನು ಮತ್ತು ನನ್ನ ಸೇವೆಯನ್ನು ಏಕೆ ಮಾಡುತ್ತಿದ್ದೀಯೆ?'

'ನಾನು ನಿನ್ನ ಆಶೀರ್ವಾದವನ್ನು ಬಯಸುತ್ತೇನೆ, ಅಜೀಮಾ. ಶಾಂತಾಳಲ್ಲಿ ನನಗೆ ಪ್ರೇಮವುಂಟಾಗಿದೆ. ಅವಳೂ ನನ್ನನ್ನು ಇಷ್ಟಪಟ್ಟಿದ್ದಾಳೆ. ಅವಳ ಜೊತೆಯಲ್ಲಿ ಇರುವುದಕ್ಕೆ ನಿಮ್ಮ ಅನುಮತಿಯನ್ನು ಬೇಡುತ್ತೇನೆ.' ವೃದ್ಧೆಯು ಸಂತೋಷಗೊಂಡು ದಯಾಲ್‌ಜೀಭಾಯಿಗೆ ಆಶೀರ್ವಾದವನ್ನು ಮತ್ತು ಜೊತೆಯಲ್ಲಿರಲು ಅನುಮತಿಯನ್ನು ಕೊಟ್ಟುಬಿಟ್ಟಳು. ಅಂದಿನಿಂದ ಶಾಂತಾಳ ಸಂಪರ್ಕವಿಲ್ಲದೆ ಅವರಿಗೆ ಇರಲಾಗುತ್ತಿರಲಿಲ್ಲ. ಶಾಂತಾಳೂ ಕೂಡ ಪ್ರತಿದಿನವೂ ಹನ್ನೆರಡು ಗಂಟೆಯಿಂದ ನಾಲ್ಕು ಗಂಟೆಯ ತನಕ ಅವರೊಂದಿಗೆ ಇರುತ್ತಿದ್ದಳು.

ದಯಾಲ್‌ಜೀಭಾಯಿ ಪ್ರತಿನಿತ್ಯವೂ ಶಾಂತಾಳನ್ನು ಭೇಟಿಮಾಡಲು ಸ್ಮಶಾನಕ್ಕೆ ಹೋಗುತ್ತಿದ್ದರು. ತಾಂತ್ರಿಕ ವೃದ್ಧೆಯೂ ಸಹ ಅವರನ್ನು ಭೇಟಿ ಮಾಡುತ್ತಿದ್ದಳು. ಅವಳು ದಯಾಲ್‌ಜೀಭಾಯಿಯ ಸ್ವಭಾವದಿಂದ ಬಹಳ ಪ್ರಸನ್ನಳಾಗಿದ್ದಳು. ಯಾವಾಗಲಾದರೂ ಶಾಂತಾ ಬರುವುದು ತಡವಾದರೆ ವೃದ್ಧೆಯು ಅವರೊಂದಿಗೆ ಮಾತನಾಡುತ್ತ ಕುಳಿತಿರುತ್ತಿದ್ದಳು. ಮಾತು-ಮಾತಿನಲ್ಲಿಯೇ ಆ ವೃದ್ಧೆಯು ಪ್ರೇತ-ವಿದ್ಯೆಗೆ ಸಂಬಂಧಿಸಿದಂತೆ ಅನೇಕ ಗೂಢ ವಿಚಾರಗಳನ್ನು ಹೇಳಿದ್ದಳು. ಅವಳು ಮೋಹಿನಿಗಳನ್ನು ತನ್ನ ವಶಮಾಡಿಕೊಂಡುದರ ವಿಷಯವನ್ನು ಚರ್ಚಿಸಿದ್ದಳು. ಒಂದು ದಿನ ದಯಾಲ್‌ಜೀಭಾಯಿಯು ಆ ತಂತ್ರ-ಮಂತ್ರಗಳನ್ನು ತನಗೆ ಕಲಿಸಿಕೊಡುವಂತೆ ಆ ವೃದ್ಧೆಯನ್ನು ಪ್ರಾರ್ಥಿಸಿಕೊಂಡರು. ಆ ಮುದುಕಿಯು ಅವರಿಗೆ ಮಂತ್ರಗಳನ್ನು ಕಲಿಸಲು ಒಪ್ಪಿಕೊಂಡಳು ಮತ್ತು ಸುಮಾರು ಮೂರು ತಿಂಗಳ ತನಕ ಅವರು ವೃದ್ಧೆಯಿಂದ ತಂತ್ರ-ಮಂತ್ರಗಳನ್ನು ಕಲಿಯುತ್ತಿದ್ದರು.

ಸಂಧಿಸುವುದರಲ್ಲಿ ಅಡ್ಡಿಯಿರಲಿಲ್ಲ

ಈ ಮಧ್ಯೆ ಒಮ್ಮೆ ದಯಾಲ್‌ಜೀಭಾಯಿಯ ತಂದೆಯವರಿಗೆ ಅವರ ಮೇಲೆ ಅನುಮಾನವುಂಟಾಯಿತು. ರಾತ್ರಿ ಹೊತ್ತು ಹೀಗೆ ಇವರು ಒಂಟಿಯಾಗಿ

ಹೊರಗೆ ಹೋಗುತ್ತಿರುವುದನ್ನು ಕಂಡ ತಂದೆಗೆ ಯಾವಳಾದರೂ ಹೆಣ್ಣಿನ ಪ್ರಣಯ ಬಂಧನದಲ್ಲೇನಾದರೂ ಸಿಕ್ಕಿಕೊಂಡಿರುವನೋ ಎಂಬ ಶಂಕೆ ಉಂಟಾಯಿತು. ಹೀಗೆಂದು ಯೋಚಿಸಿ, ತಮ್ಮ ಪತ್ನಿಯೊಂದಿಗೆ ಚರ್ಚಿಸಿ, ಕರಾಚಿಯಲ್ಲಿ ಪುಷ್ಪಾಬೇನ್ ಎಂಬ ಸುಂದರ ಕನ್ಯೆಯನ್ನು ನೋಡಿ ೧೯೪೪ರಲ್ಲಿ ದಯಾಲ್‌ಜೀಭಾಯಿಯ ಮದುವೆ ಮಾಡಿದ್ದರು. ಅವರ ಮದುವೆಯ ವಿಷಯ ತಿಳಿದಾಗ ಶಾಂತಾಗೆ ಅದು ಚೆನ್ನಾಗಿ ಕಾಣಲಿಲ್ಲ. ಅವಳು ಆ ಮದುವೆಗೆ ವಿರೋಧವನ್ನು ವ್ಯಕ್ತಪಡಿಸಿದಳು. ದಯಾಲ್‌ಜೀಭಾಯಿ ಅವರು ತಂದೆ–ತಾಯಿಗಳ ಆಗ್ರಹ ಮತ್ತು ತನ್ನ ಸಮಸ್ಯೆಯನ್ನು ವೃದ್ಧೆ (ಮೋಹಿನಿ)ಗೆ ತಿಳಿಸಿದ ಮೇಲೆ ಆ ಮುದುಕಿಯು ಮದುವೆಗೆ ಅನುಮತಿಯನ್ನು ಕೊಟ್ಟಿದ್ದಲ್ಲದೆ ಶಾಂತಾಳನ್ನು ಸಮಾಧಾನ ಪಡಿಸಿದಳು. ಶಾಂತಾಳೂ ಸಹ ಹೇಗೊ ಅಂತೂ ಮದುವೆಯಾದ ಮೇಲೂ ನನ್ನನ್ನು ಸಂಧಿಸುತ್ತಿರಬೇಕೆಂಬ ಷರತ್ತಿನ ಮೇಲೆ ಒಪ್ಪಿಕೊಳ್ಳಲು ಸಿದ್ಧಳಾದಳು. ದಯಾಲ್‌ಜೀಭಾಯಿ ಸಹ ಷರತ್ತನ್ನು ಒಪ್ಪಿಕೊಂಡಿದ್ದರು.

ಆದರೆ ಶಾಂತಾ ಸವತಿ ಮಾತ್ಸರ್ಯದಿಂದ ಅಸೂಯೆ ಪಡುತ್ತ ಮನಸ್ಸಿನಲ್ಲಿಯೇ ಕುದಿಯುತ್ತಿದ್ದಳು. ಏನಾದರೂ ದಯಾಲ್‌ಜೀಭಾಯಿ ಶಾಂತಾಳನ್ನು ಕೂಡಲು ಬರದಿದ್ದರೆ ಶಾಂತಾ ತಾನೇ ಅರ್ಧ ರಾತ್ರಿಯಲ್ಲಿ ಅವರನ್ನು ಸೇರಲು ಬಂದು ಬಿಡುತ್ತಿದ್ದಳು. ಪುಷ್ಪಾಬೇನ್‌ಳಿಗೆ ಇವರ ಸುಳಿವೂ ಸಿಗುತ್ತಿರಲಿಲ್ಲ. ಕೆಲವು ಸಾರಿಯಂತೂ ಶಾಂತಾ ಅವರು ಪ್ರಣಯ ಕೇಳಿಯಲ್ಲಿರುವಾಗಲೇ ಆ ಮಧ್ಯೆ ಬಂದು ಬಿಡುತ್ತಿದ್ದಳು. ದಯಾಲ್‌ಜೀಭಾಯಿಗೆ ಇದು ಕೆಲವೊಮ್ಮೆ ಕೆಟ್ಟದೆನಿಸುತ್ತಿತ್ತು. ಆದರೂ ಅವರು ವಚನಬದ್ಧರಾಗಿದ್ದರು. ಅವರು ಸಾಧಾರಣವಾಗಿ ನಿತ್ಯವೂ ಶಾಂತಾಳನ್ನು ಕೂಡಲು ರಾತ್ರಿ ಸ್ಮಶಾನಕ್ಕೆ ಹೋಗುತ್ತಿದ್ದರು. ಅವರು ಇದುವರೆಗೂ ತನ್ನ ಮೋಹಿನಿ ಸಂಬಂಧ ಮೋಹಿನಿಯೊಂದಿಗೆ ಇದೆ ಎಂಬ ವಿಷಯವನ್ನು ತಮ್ಮ ಹೆಂಡತಿ (ಪುಷ್ಪಾಬೇನ್)ಗೆ ಹೇಳಿರಲಿಲ್ಲ. ಕೆಲವು ದಿನಗಳ ತನಕ ಒಂದಲ್ಲ ಒಂದು ನೆಪವನ್ನು ಹೇಳಿ ಪ್ರಸಂಗವನ್ನು ನಿವಾರಿಸುತ್ತಿದ್ದರು. ಆದರೆ ಯಾವಾಗಲೂ ಈ ರೀತಿ ರಾತ್ರಿಯಲ್ಲಿ ಹೊರಗೆ ಹೋಗುವುದು ಪುಷ್ಪಾಬೇನ್‌ಗೆ ಅನುಮಾನವನ್ನುಂಟುಮಾಡುತ್ತಿತ್ತು. ಒಂದು ದಿನ ಪುಷ್ಪಾಬೇನ್ ತನ್ನ ಅನುಮಾನವನ್ನು ವ್ಯಕ್ತಪಡಿಸಿದಳು ಮತ್ತು ಅವರು ತನ್ನ ಮತ್ತು ಶಾಂತಾಳ ಸಂಬಂಧದ ಬಗ್ಗೆ ತನ್ನ ಪತ್ನಿಗೆ ಎಲ್ಲವನ್ನೂ ತಿಳಿಸಿದ್ದರು. ಪುಷ್ಪಾಬೇನ್‌ಗೆ ಈ ಮಾತು ತುಂಬ ವಿಚಿತ್ರ, ಆದರೆ ಭಯಂಕರವೆನಿಸಿತ್ತು.

ಮೋಹಿನಿಯಿಂದ ಮುಕ್ತಿ

ದಯಾಲ್‌ಜೀಭಾಯಿ ಅವರ ಹೇಳಿಕೆಯ ಪ್ರಕಾರ ಸಾಂಸಾರಿಕ ವಿಷಯಗಳಲ್ಲಿ ತೊಡಗಿದುದರಿಂದ ಒಮ್ಮೊಮ್ಮೆ ಶಾಂತಾಳನ್ನು ಭೇಟಿಮಾಡಲು ಆಗುತ್ತಿರಲಿಲ್ಲ. ಇದರಿಂದ ಕ್ಷುಬ್ಧಳಾದ ಶಾಂತಾ ಈಗ ಅವರ ಕುಟುಂಬದ ಮಧ್ಯದಲ್ಲಿಯೇ ಇರುತ್ತೇನೆಂದು ಹಠ ಮಾಡತೊಡಗಿದ್ದಳು. ಪುಷ್ಪಾಬೇನ್ ರೀತಿಯಲ್ಲಿಯೇ ಹೆಂಡತಿಯಾಗಿ ಇರಬಯಸಿದಳು. ಆದರೆ ಮೋಹಿನಿಯನ್ನು ತನ್ನ ಹೆಂಡತಿಯನ್ನಾಗಿ ಮಾಡಿಕೊಂಡು ಕುಟುಂಬದ ಮಧ್ಯೆ ಇಟ್ಟುಕೊಳ್ಳುವುದು, ಸಾಮಾನ್ಯವಾದ ವಿಷಯವಾಗಿರಲಿಲ್ಲ, ಆದ್ದರಿಂದ ದಯಾಲ್‌ಜೀಭಾಯಿಯು ಈ ರೀತಿ ಮಾಡಲು ಸಾಧ್ಯವಿಲ್ಲ ಎಂದು ತಮ್ಮ ಅಸಮರ್ಥತೆಯನ್ನು ವ್ಯಕ್ತಪಡಿಸಿದ್ದರು.

ಶಾಂತಾ ಈಗ ಪ್ರತಿನಿತ್ಯವೂ ಅವರೊಂದಿಗೆ ಜಗಳಮಾಡತೊಡಗಿದ್ದಳು. ಈ ರೀತಿ ಅವಳು ಅವರನ್ನು ಕಂಗೆಡಿಸಿಬಿಟ್ಟಿದ್ದಳು. ಅಲ್ಲದೆ ಹಾಗೆ ಮಾಡದಿದ್ದರೆ ತಾನು ಪುಷ್ಪಾಬೇನ್ ಅನ್ನು ಕೊಂದುಬಿಡುತ್ತೇನೆ ಎಂಬ ಬೆದರಿಕೆಯನ್ನು ಹಾಕಿದ್ದಳು. ಇದರಿಂದ ದಯಾಲ್‌ಜೀಭಾಯಿ ಕ್ರೋಧಗೊಂಡು, ತಾಂತ್ರಿಕ ವೃದ್ಧೆಯಿಂದ ಅನುಮತಿ ಪಡೆದು ಮಂತ್ರಬಲದಿಂದ ಶಾಂತಾಳನ್ನು ಭಸ್ಮಮಾಡಿ ಅವಳಿಂದ ಮುಕ್ತಿಯನ್ನು ಪಡೆದುಕೊಂಡರು.

ಇಂದು ದಯಾಲ್‌ಜೀಭಾಯಿ ತಮ್ಮ ಪತ್ನಿ ಮತ್ತು ಪುತ್ರರೊಂದಿಗೆ ಸುಖ ಜೀವನವನ್ನು ಕಳೆಯುತ್ತಿದ್ದಾರೆ.

ಡಾ॥ ಬಿ. ನಂ. ಚಂದ್ರಯ್ಯ



ದೇವರನ್ನು ಪ್ರೀತಿಸುವವರು ಎಲ್ಲರನ್ನೂ ಪ್ರೀತಿಸುತ್ತಾರೆ.

—ಗುರುನಾನಕ್

ಚಿಂಪಾಂಜಿಗಳಲ್ಲಿ ಭಾಷಾಕಲಿಕೆ

ಮಾನವನ ಬದುಕು ಉತ್ತಮಗೊಳ್ಳಲು ಅವಶ್ಯಕವಾದ ಅಭ್ಯಾಸಗಳನ್ನು, ನಡೆನುಡಿಗಳನ್ನು ಮತ್ತು ವೈಜ್ಞಾನಿಕ ವಿಧಾನಗಳನ್ನು ಅರ್ಜಿಸಿಕೊಳ್ಳುವ ಪದ್ಧತಿಯನ್ನು ಕಲಿಕೆ ಎಂದು ಹೇಳಬಹುದು. ಕಲಿಕೆ ನಮ್ಮ ನಡೆನುಡಿಗಳನ್ನು ಮಾರ್ಪಡಿಸುವುದಲ್ಲದೆ ನಮ್ಮ ಸುತ್ತಮುತ್ತಲಿನ ಪರಿಸರಕ್ಕೆ ಹೊಂದಿಕೊಳ್ಳಲು ಮತ್ತು ಯುಕ್ತವಾದ ರೀತಿಯಲ್ಲಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲು ಜೀವಿಗಳಿಗೆ ಸಹಾಯಮಾಡುತ್ತದೆ. ಕಲಿಕೆಯ ಸ್ವಭಾವ, ವಿಧಗಳು, ಅದಕ್ಕೆ ಅನುಕೂಲ ಮಾಡಿಕೊಡುವ ಸಲಕರಣೆಗಳು ಮತ್ತು ಪರಿಸ್ಥಿತಿಗಳನ್ನು ಕೂಲಂಕಷವಾಗಿ ತಿಳಿಯಲು ಮನೋವಿಜ್ಞಾನಿಗಳು, ಮಾನವಶಾಸ್ತ್ರಜ್ಞರು, ಜೈವಿಕ ಭಾಷಾವಿಜ್ಞಾನಿಗಳು ಸಂಶೋಧನೆಗಳನ್ನು ನಡೆಸಿದ್ದಾರೆ. ಅವರು ತಮ್ಮ ಪ್ರಯೋಗಗಳಿಗೆ ಬಳಸಿಕೊಂಡ ಪ್ರಾಣಿಗಳ ಪೈಕಿ ಬಿಳಿ ಇಲಿಗಳು, ಬೆಕ್ಕು, ನಾಯಿ, ಗೊರಿಲ್ಲ, ಒರಾಂಗುಟಾನ್ ಮತ್ತು ಚಿಂಪಾಂಜಿಗಳು ಮುಖ್ಯವಾದುವು.

ಕಲಿಕೆಗೆ ಸಂಬಂಧಪಟ್ಟಂತೆ ನಡೆದಿರುವ ಸಂಶೋಧಗಳನ್ನು ಬೇರೆ ಬೇರೆ ಗುಂಪುಗಳಾಗಿ ವಿಂಗಡಿಸಬಹುದು: (೧) ಕಲಿಕೆಯ ಸನ್ನಿವೇಶದಲ್ಲಿ ಕಂಡುಬರುವ ವಸ್ತುಗಳ ಸಹಾಯದಿಂದ ಪ್ರಾಣಿಗಳೂ ಕಲಿಯುತ್ತವೆಂಬುವಕ್ಕೆ ಸಂಬಂಧಿಸಿದವು. (೨) ಪ್ರಾಣಿಗಳ ಕಲಿಕೆಯಲ್ಲಿ ಅಂತರ್ದೃಷ್ಟಿಯು ಬಹು ಮುಖ್ಯಪಾತ್ರವನ್ನು ವಹಿಸುತ್ತವೆಂಬುವನ್ನು ಕುರಿತ ಅಧ್ಯಯನಗಳು. (೩) ಕಲಿಕೆಯ ಪ್ರಕ್ರಿಯೆಯಲ್ಲಾಗುವ ಶಾರೀರಕ ವ್ಯತ್ಯಾಸಗಳು ಇಲ್ಲವೆ ನರಮಂಡಲದಲ್ಲಾಗುವ ವ್ಯತ್ಯಾಸಗಳಿಗೆ ಸಂಬಂಧಿಸಿದವು. (೪) ಕಲಿಕೆಯ ಪ್ರಕ್ರಿಯೆಗೆ ಅನುಬಂಧಿತ ಉದ್ದೀಪನ ಸಹಾಯ ಮಾಡುವುದೆಂಬ ಅಭಿಪ್ರಾಯವನ್ನು ಕೊಡುವ ಪ್ರಯೋಗಗಳು. ಕಲಿಕೆಯ ಕ್ಷೇತ್ರದಲ್ಲಿ ಪ್ರಯೋಗಗಳನ್ನು ನಡೆಸಿರುವವರ ಪೈಕಿ ಇ. ಎಲ್. ಥಾರನ್‌ಡೈಕ್, ಪಾವ್‌ಲೋವ್, ಸ್ಕಿನ್ನರ್, ಹಲ್, ಗಥ್ರೀ, ಫರ್‌ಸನ್, ಡಬ್ಲ್ಯು. ಎಚ್. ಕೀತ್‌ಹೇಯಸ್ ಮತ್ತು ಕೇಟ್ ಹೇಯಸ್, ಅಲಿನ್‌ಗಾರ್ಡ್‌ನರ್ ಮತ್ತು ಬಿಯಟ್ರಿಸ್ ಗಾರ್ಡ್‌ನರ್, ರೋಗರ್‌ಫೌಟ್ಸ್, ಅಡ್ರಿಯನ್ ಕೋರ್ಟ್‌ಲ್ಯಾಂಡ್, ಡೇವಿಡ್ ಪ್ರಿಮ್ಯಾಕ್, ಡ್ಯೂಅನ್ ರುಮ್‌ಬಾಗ್ ಪ್ರಮುಖರು.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ, ವಿಶೇಷವಾಗಿ ಅಮೇರಿಕದಲ್ಲಿ, ಚಿಂಪಾಂಜಿಗಳ

ಭಾಷಾಕಲಿಕೆಯನ್ನು ಕುರಿತಂಥ ಪ್ರಯೋಗಗಳು ನಡೆಯುತ್ತಿವೆ. ಚಿಂಪಾಂಜಿ ಭಾಷೆಯನ್ನು ಕಲಿಯಬಲ್ಲುದೇ? ಯಾವ ಯಾವ ವಿಧಾನಗಳಲ್ಲಿ ಎಷ್ಟೆಷ್ಟು ಪದಗಳನ್ನು ಚಿಂಪಾಂಜಿ ಕಲಿಯಲು ಶಕ್ತವಾಗಿದೆ. ತನ್ನ ಅನಿಸಿಕೆಗಳನ್ನು ಯಾವುದೇ ತೊಡಕಿಲ್ಲದೆ ಅದು ವ್ಯಕ್ತಪಡಿಸುವುದೇ?—ಮುಂತಾದ ವಿಚಾರಗಳನ್ನು ಮುಖ್ಯ ಅಧ್ಯಯನ ವಿಷಯಗಳನ್ನಾಗಿಟ್ಟುಕೊಂಡು ಸಂಶೋಧನೆಗಳು ತೀವ್ರವಾಗಿ ಸಾಗುತ್ತಿವೆ. ಓಕ್ಲಹೋಮ ವಿಶ್ವವಿದ್ಯಾಲಯ, ಜಾರ್ಜಿಯದ ಯೆರ್ಕ್ಸ್ ಪ್ರೈಮೇಟು ಸಂಶೋಧನಾ ಕೇಂದ್ರ, ಲೂಯಿಸಿಯಾನದ ಡೆಲ್ಟಾ ಪ್ರಾದೇಶಿಕ ಪ್ರೈಮೇಟು ಸಂಶೋಧನಾ ಕೇಂದ್ರ ಮತ್ತು ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯಗಳಲ್ಲಿನ ಸಂಶೋಧಕರು ಚಿಂಪಾಂಜಿಗಳ ಮೇಲೆ ಪ್ರಯೋಗಗಳನ್ನು ನಡೆಸಿದ್ದಾರೆ. ೧೯೫೦ರ ದಶಕದಲ್ಲಿ ವಿಕಿ ಎನ್ನುವ ಹೆಣ್ಣು ಚಿಂಪಾಂಜಿ ಒಂದಕ್ಕೆ ಭಾಷಾತರಬೇತಿಯನ್ನು ನೀಡಿರುವ ವಿಷಯ ಕೀತ್ ಮತ್ತು ಕೇಟ್ ಹೇಯಸ್ ಅವರ 'ದಿ ಏಪ್ ಇನ್ ಅವರ್ ಹೌಸ್' ಎನ್ನುವ ಪುಸ್ತಕದಿಂದ ತಿಳಿದುಬರುತ್ತದೆ. ಉದ್ರಿಕ್ತ ಪರಿಸ್ಥಿತಿಯಲ್ಲಿದ್ದಾಗ ವಿನಾ ಉಳಿದ ವೇಳೆಯಲ್ಲಿ ವಿಕಿ ಯಾವ ಸದ್ದನ್ನೂ ಮಾಡುತ್ತಿರಲಿಲ್ಲ. ಆದರೂ ವಿಕಿಗೆ ಮಾತು ಕಲಿಸುವ ಪ್ರಯತ್ನ ನಡೆದವು. ಅದಕ್ಕೇನಾದರೂ ವಸ್ತು ಬೇಕಾದಾಗ ಅಥವಾ ಅದನ್ನು ಮಾತನಾಡಲು ಕೇಳಿದಾಗ 'ಅಹ್' ಎನ್ನುವ ಸದ್ದನ್ನು ಮಾತ್ರ ಮಾಡುತ್ತಿತ್ತು. ವಿಕಿಯ ತುಟಿಗಳನ್ನು ಹಿಡಿದು ಮಾಮ, ಪಾಪ ಮತ್ತು ಕಪ್ ಎನ್ನುವ ಪದಗಳನ್ನು ಉಚ್ಚರಿಸುವಂತೆ ತರಬೇತಿ ನೀಡಲಾಯಿತು. ಈ ಪ್ರಯೋಗ ಒಂದು ವಿಶ್ವದಾಖಲೆ. ವಿಕಿಗೆ ವಾಹನ ಸವಾರಿ ಮಾಡಬೇಕೆನಿಸಿದಾಗ ಸಂತೋಷದ ಮುಖ ಮಾಡಿಕೊಂಡು ಕೂಗುತ್ತಿತ್ತು. ವಿಕಿಗೆ ಮಾತು ಕಲಿಸುವ ಪ್ರಯತ್ನಗಳು ನಡೆಯುತ್ತಿರುವಾಗಲೇ ದುರ್ದೈವದಿಂದ ಸಾಂಕ್ರಾಮಿಕ ರೋಗವೊಂದಕ್ಕೆ ತುತ್ತಾಗಿ ಅಸು ನೀಗಿತು. ಹೀಗಾಗಿ ಪ್ರಯೋಗ ಅಲ್ಲಿಗೇ ನಿಂತಿತು.

ವಿಕಿಯ ಮೇಲೆ ನಡೆಸಿದ ಪ್ರಯೋಗಗಳಿಂದ ಅನೇಕ ಮನೋವಿಜ್ಞಾನಿಗಳು ಉತ್ತೇಜಿತರಾದರು. ಚಿಂಪಾಂಜಿಗಳಲ್ಲಿ ಭಾಷಾಕಲಿಕೆಯನ್ನು ಕುರಿತು ಪ್ರಯೋಗಗಳನ್ನು ನಡೆಸಲು ಮುಂಬಂದರು. ನೆವಡಾ ವಿಶ್ವವಿದ್ಯಾಲಯದ ಮನೋವಿಜ್ಞಾನ ಬೋಧಕರಾದ ಅಲೆನ್ ಗಾರ್ಡನರ್ ಮತ್ತು ಆತನ ಪತ್ನಿ ಬೆಯಟ್ರಿಸ್ ಗಾರ್ಡನರ್ ಅವರು ಆಫ್ರಿಕೆಯ ಕಾಡಿನಲ್ಲಿದ್ದ ಚಿಂಪಾಂಜಿ ಹೆಣ್ಣುಮರಿಯನ್ನು ತಂದು, ಅದಕ್ಕೆ ಒಂದು ವರ್ಷ ವಯಸ್ಸಾದ ಅನಂತರ ಭಾಷೆಯನ್ನು ಕಲಿಸಲು ಆರಂಭಿಸಿದರು. ಈ ಚಿಂಪಾಂಜಿಯ ಹೆಸರು ವಾಷೂ. ಗಾರ್ಡನರ್ ದಂಪತಿ

ಗಳು ಬಳಸಿರುವ ಭಾಷಾತರಬೇತಿ ವಿಧಾನ ವಿಕಿ ಚಿಂಪಾಂಜಿಗೆ ಬಳಸಿದ್ದಕ್ಕಿಂತ ಬೇರೆ ತೆರನಾದುದು. ಮಾನವ ತನಗಿರುವ ಧ್ವನ್ಯಂಗಗಳ ಸಹಾಯದಿಂದ ಭಾಷೆಯಲ್ಲಿನ ಎಲ್ಲ ಧ್ವನಿಗಳನ್ನು ಉಚ್ಚರಿಸಬಲ್ಲ ಸಾಮರ್ಥ್ಯವನ್ನು ಪಡೆದಿದ್ದಾನೆ. ಆದರೆ ಪ್ರಾಣಿಗಳಲ್ಲಿ ಧ್ವನ್ಯಂಗಗಳು ಹೆಚ್ಚು ವಿಕಾಸಗೊಂಡಿಲ್ಲದಿರುವ ಕಾರಣ ಭಾಷೆಯಲ್ಲಿನ ಎಲ್ಲ ಧ್ವನಿಗಳನ್ನು ಉಚ್ಚರಿಸಬಲ್ಲ ಅವಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಗಾರ್ಡ್‌ನರ್ ದಂಪತಿಗಳು ವಾಷೂವಿಗೆ ಉತ್ತರ ಅಮೇರಿಕದ ಕಿವುಡರು ಬಳಸುವ 'ಅಮೇರಿಕದ ಸಂಕೇತಭಾಷೆ' (ಅಮೇರಿಕನ್ ಸೈನ್ ಲಾಂಗ್ವೇಜ್-ಅಮೆಸ್ಲಾನ್)ಯನ್ನು ಕಲಿಸಲು ತೊಡಗಿದರು. ಅಮೆಸ್ಲಾನನ್ನು ವಾಷೂ ನಿಧಾನವಾಗಿ ಕಲಿಯತೊಡಗಿದುದರಿಂದ ಭಾಷಾವಿಕಾಸವನ್ನು ಕುರಿತ ತಿಳುವಳಿಕೆಯನ್ನು ಪುನರ್‌ಮೌಲ್ಯಮಾಪನ ಮಾಡಬೇಕಾಯಿತು.

ವಾಷೂವಿಗೆ ಭಾಷೆಯನ್ನು ಕಲಿಸುವ ಮುನ್ನ ಅಮೇರಿಕದ ಸಂಕೇತ ಭಾಷೆಯನ್ನು ಗಾರ್ಡ್‌ನರ್ ದಂಪತಿಗಳು ಕಲಿತರು. ಅಲ್ಲದೆ, ವಾಷೂವಿನ ಎದುರು ಪರಸ್ಪರ ಮಾತನಾಡಬಾರದೆಂದೂ ಕೇವಲ ಸಂಕೇತಭಾಷೆಯನ್ನೇ ಬಳಸಬೇಕೆಂದೂ ನಿರ್ಧರಿಸಿದರು. ಅವರ ಈ ಯೋಜನೆಯಿಂದ ವಾಷೂವಿಗೆ ಹಾಗೂ ಅವರಿಗೆ ಆತ್ಮೀಯ ಸಂಬಂಧ ಬೆಳೆಯಲು ಕಾರಣವಾಯಿತು. ಭಾಷಾಕಲಿಕೆ ವಿಚಾರದಲ್ಲಿ ವಾಷೂವಿನ ಪ್ರಗತಿ ಆರಂಭದಲ್ಲಿ ಆಶಾದಾಯಕವಾಗಿರಲಿಲ್ಲ. ಆದರೂ ಗಾರ್ಡ್‌ನರ್ ದಂಪತಿಗಳು ಧೃತಿಗೆಡದೆ ತಮ್ಮ ಪ್ರಯೋಗವನ್ನು ಮುಂದುವರಿಸಿದರು. ಕಾಲಕ್ರಮೇಣ ಗಾರ್ಡ್‌ನರ್ ದಂಪತಿಗಳು ಬಳಸುತ್ತಿದ್ದ ಸಂಕೇತಗಳನ್ನು ವಾಷೂ ಅನುಕರಿಸಲು ತೊಡಗಿತು. ಊಟದ ಅನಂತರ ಟೂತ್‌ಬ್ರಶ್‌ನಿಂದ ಹಲ್ಲುಜ್ಜಲು ಮತ್ತು ಧೂಮಪಾನ ಮಾಡಬೇಕೆಂದು ಸಂಕೇತಗಳ ಮೂಲಕ ಕೇಳುತ್ತಿತ್ತು. ಭಾಷೆಯನ್ನು ಕಲಿಸಲು ಆರಂಭಿಸಿದ ೭ ತಿಂಗಳ ಅನಂತರ 'ಬಾ-ಜಿಮ್' ಎಂದು ಹೇಳಲು, ೨೨ ತಿಂಗಳು ಅನಂತರ ೩೪ ಸಂಕೇತಗಳನ್ನು ೪೦ ತಿಂಗಳಾದ ಮೇಲೆ ೯೨ ಸಂಕೇತಗಳನ್ನು ಕಲಿತಿತ್ತು. ವಾಷೂ ಕಲಿತ ಸಂಕೇತಗಳನ್ನು ಕಾಲಾನುಕ್ರಮದಲ್ಲಿ ಹೇಳುವುದಾದರೆ ಬಾ-ಜಿಮ್, ಮೇಲೆ, ಸಿಹಿ, ಹೋಗು, ಇಲ್ಲಿ ಕೇಳು, ಕೆರೆ, ತೆಗೆ, ಟೂತ್‌ಬ್ರಶ್, ಬೇಗ, ತಮಾಷೆ, ಗಾಯ, ಕುಡಿ, ಕ್ಷಮಿಸು, ದಯವಿಟ್ಟು, ತಿನ್ನುವ ಆಹಾರ, ಹೂವು ಇತ್ಯಾದಿ. ಕೆಲವು ಸಾರಿ ವಾಷೂ ಸಂದರ್ಭಕ್ಕೆ ತಕ್ಕ ಸಂಕೇತಗಳನ್ನು ಬಳಸುತ್ತಿರಲಿಲ್ಲ. ಊಟದ ಅನಂತರ ತಿನ್ನುವ ಹಣ್ಣು ಬೇಕಾದಾಗ 'ಸಿಹಿ ಬೇಕು' ಎನ್ನುವ ಸಂಕೇತವನ್ನು ತೋರಿಸುತ್ತಿತ್ತು. ಇದಲ್ಲದೆ ಅಮೆರಿಕನ್

ಸಂಕೇತ ಭಾಷೆಯಲ್ಲಿ ಇಲ್ಲದ ತನ್ನದೇ ಆದ ಕೆಲವು ಸಂಕೇತಗಳನ್ನು ಮಾಡುತ್ತಿತ್ತು. ಉದಾ : ರೆಫ್ರಿಜರೇಟರ್, ಎಡೆವಸ್ತ್ರ.

ನಾಲ್ಕು ವರುಷಗಳ ತನಕ ವಾಷೂವಿಗೆ ತರಬೇತಿಯನ್ನು ನೀಡಿದ ಅನಂತರ ಗಾರ್ಡ್ನರ್ ದಂಪತಿಗಳು ತಮ್ಮ ಕೆಲಸವನ್ನು ರೋಗರ್ ಫೌಟ್ಸ್ ಎಂಬುವರಿಗೆ ವಹಿಸಿದರು. ಇವರ ನೇತೃತ್ವದಲ್ಲಿ ವಾಷೂ ಅನೇಕ ಸಂಕೇತಗಳನ್ನು ಕಲಿಯಿತು. ಸುಮಾರು ೧೬೦ ಪದಗಳನ್ನು ಸಂಕೇತಗಳ ಮೂಲಕ ವ್ಯಕ್ತಪಡಿಸಲು ಅದು ಸಮರ್ಥವಾಯಿತು. ತರಬೇತಿ ಕಾಲದಲ್ಲಿ ವಾಷೂ ತನ್ನ ಅನಿಸಿಕೆಗಳನ್ನು ಅಭಿವ್ಯಕ್ತಿಸುವಾಗ ಅನೇಕ ತಪ್ಪುಗಳನ್ನು ಮಾಡಿದ್ದರೂ ಕಾಲಾನಂತರ, ಇಂಗ್ಲಿಷ್ ಭಾಷೆಯ ಜಾಯಮಾನಕ್ಕೆ ತಕ್ಕಂತೆ ವ್ಯಾಕರಣಬದ್ಧವಾಗಿ ಪದಗಳನ್ನು ಬಳಸಲು ಕಲಿಯಿತೆನ್ನುವುದು ಗಾರ್ಡ್ನರ್ ದಂಪತಿಗಳ ಹಾಗೂ ರೋಗರ್ ಫೌಟ್ಸ್ ಅವರು ನಡೆಸಿದ ಪ್ರಯತ್ನ ಅವರಿದ್ದ ತಾಳ್ಮೆ ಹಾಗೂ ನಿಷ್ಠೆ ಎಷ್ಟು ಎಂಬುದನ್ನು ತಿಳಿಸುತ್ತದೆ. ಮುಂದೆ ಒಕ್ಲಹೋಮದ ಪ್ರೈಮೇಟು ಅಧ್ಯಯನ ಸಂಸ್ಥೆಗೆ ವಾಷೂವನ್ನು ಒಪ್ಪಿಸಲಾಯಿತು. ಅಲ್ಲಿ ಇತರ ಪ್ರಾಣಿಗಳ ಪರಿಚಯವನ್ನು ವಾಷೂವಿಗೆ ಮಾಡಿಕೊಡಲಾಯಿತು. ಸಂಸ್ಥೆಯಲ್ಲಿನ ಬಾತುಕೋಳಿಯನ್ನು ನೋಡಿದ ವಾಷೂ ಅವನ್ನು ಕುರಿತು 'ನೀರಹಕ್ಕಿಗಳು' (ವಾಟರ್‌ಬರ್ಡ್ಸ್) ಎಂದು ಸಂಕೇತದ ಮೂಲಕ ತೋರಿಸಿತು. ಸಂಸ್ಥೆಯಲ್ಲಿನ ಇತರ ಚಿಂಪಾಂಜಿಗಳಿಗೆ ವಾಷೂ ಅಮೆಸ್ಲಾನ್ ಕಲಿಸಲು ತೊಡಗಿತು. ಇದೇ ಸಮಯದಲ್ಲಿ ಚಿಂಪಾಂಜಿಗಳ ಮೇಲೆ ಪ್ರಯೋಗ ನಿರ್ವಹಿಸುತ್ತಿದ್ದ ಸಂಶೋಧಕರೂ ಕೂಡ ಅವುಗಳಿಗೆ ಸಂಕೇತ ಭಾಷೆಯನ್ನು ಕಲಿಸಲು ತೊಡಗಿದರು. ಇದರಿಂದಾಗಿ ವಾಷೂವಿನ ಮಗುವೂ ಸೇರಿದಂತೆ ಚಿಂಪಾಂಜಿಗಳಿಗೆ ಭಾಷೆ ಕಲಿಸುವ ಕೆಲಸ ಹೆಚ್ಚಾಯಿತು. ಅಮೇರಿಕದ ಸಂಕೇತ ಭಾಷೆಯ ಸಹಾಯದಿಂದ ಚಿಂಪಾಂಜಿಗಳು ವ್ಯವಹರಿಸಲು ತೊಡಗಿದವು.

ವಾಷೂವಿಗೆ ಅಮೆಸ್ಲಾನನ್ನು ಕಲಿಸಿದ ಅನಂತರ, ಗಾರ್ಡ್ನರ್ ದಂಪತಿಗಳು, ಮೊಜೊ ಎನ್ನುವ ಮತ್ತೊಂದು ಚಿಂಪಾಂಜಿಗೆ ಸಂಕೇತ ಭಾಷೆಯನ್ನು ಕಲಿಸಲು ತೊಡಗಿದರು. ಅವರ ಜೊತೆಗೆ ಕೆಲವು ಕಿವುಡು ಮೂಕ ಮಕ್ಕಳೂ ಸಹ ಮೊಜೊವಿನೊಂದಿಗೆ ಸಂಕೇತ ಭಾಷೆಯನ್ನು ಬಳಸುತ್ತಿದ್ದುದರಿಂದ ಮೊಜೊವಿನ ಕಲಿಕೆ ತ್ವರಿತವಾಗಿ ಸಾಗತೊಡಗಿತು. ಅದು ಭಾಷೆಯನ್ನು ಬೇಗ ಕಲಿಯಲು ಸಾಧ್ಯವಾಯಿತು.

ಗಾರ್ಡ್ನರ್ ದಂಪತಿಗಳು ನಡೆಸಿದ ಪ್ರಯೋಗಗಳು ಇತರ ಮನೋವಿಜ್ಞಾನಿ

ಗಳಿಗೆ ಹಾಗೂ ಭಾಷಾಸಂಶೋಧಕರಿಗೆ ಉತ್ತೇಜನ ನೀಡಿದವು. ಕ್ಯಾಲಿಫೋರ್ನಿಯದಲ್ಲಿ ಡೇವಿಡ್ ಪ್ರಿಮ್ಯಾಕ್ ಎಂಬ ಮನೋವಿಜ್ಞಾನಿ, ವಿವಿಧ ಆಕಾರಗಳ ಪ್ಲಾಸ್ಟಿಕ್ ಬಿಲ್ಲೆಗಳನ್ನು ಬಳಸಿ 'ಸಾರಾ' ಎಂಬ ಹೆಣ್ಣು ಚಿಂಪಾಂಜಿಯೊಂದಕ್ಕೆ ಭಾಷೆ ಕಲಿಸಲು ತೊಡಗಿದ್ದರು (೧೯೭೦). ಒಂದು ಬಿಲ್ಲೆ ಒಂದು ಪದಕ್ಕೆ ಸಂಕೇತವಾದರೆ, ಬಿಲ್ಲೆಗಳ ಸರಪಣಿ ವಾಕ್ಯಕ್ಕೆ ಸಂಕೇತ. ತನಗಿದ್ದ ಪರಿಮಿತ ಅವಕಾಶದಲ್ಲಿ ಸಾರಾ ಸುಮಾರು ೧೩೦ ಪದಗಳನ್ನು ಕಲಿಯಿತು. ಉದಾ: ಸಮ ಮತ್ತು ವ್ಯತ್ಯಾಸ, ಹೌದು ಮತ್ತು ಇಲ್ಲ, ಕೆಳಗೆ, ಸೇರಿಸು ಇತ್ಯಾದಿ ಪ್ರಯೋಗ ಪ್ರಾರಂಭವಾಗಿ ಎರಡೂವರೆ ವರ್ಷಗಳ ಬಳಿಕ ಪದ, ವಾಕ್ಯ, ಪ್ರಶ್ನೆಗಳು, ವರ್ಗವಿಂಗಡಣೆ, ನಿಷೇಧಾತ್ಮಕ ಪದಗಳು ಬಹುವಚನರೂಪ, ಸಂಯೋಜಕ ಪದಗಳು, ನಾಮಪದಗಳು, ವಿಶೇಷಣಗಳನ್ನು ತಿಳಿದಿತ್ತು. ಸೇಬು, ದ್ರಾಕ್ಷಿ, ಬಾಳೆಹಣ್ಣು ಬೇಕಾದಾಗ ಅವುಗಳಿಗೆ ಸಂಬಂಧಿಸಿದ ಪ್ಲಾಸ್ಟಿಕ್ ಬಿಲ್ಲೆಗಳನ್ನು ಸಾರಾ ಸಮರ್ಪಕವಾಗಿ ಬಳಸುತ್ತಿತ್ತು. ಯಾವುದೇ ಪ್ರಶ್ನೆಗೆ ಉತ್ತರ ಹೇಳಬೇಕಾದರೆ, ತನ್ನ ಮುಂದಿರುವ ಬಿಲ್ಲೆಗಳನ್ನು ಸಾರಾ ಉಪಯೋಗಿಸಬೇಕಾಗಿದ್ದುದರಿಂದ ಅದು ಕೆಲವು ಸಾರಿ ತಪ್ಪು ಉತ್ತರ ಹೇಳುತ್ತಿತ್ತು. ಈ ತಪ್ಪು ಪೂರ್ಣಪ್ರಮಾಣದ ತಪ್ಪಾಗುತ್ತಿರಲಿಲ್ಲವೆಂದು ತನ್ನ ಪ್ರಯೋಗಗಳಿಂದ ಪ್ರಿಮ್ಯಾಕ್ ಸ್ಪಷ್ಟಪಡಿಸಿದ್ದಾನೆ.

ಜಾರ್ಜಿಯಾದ ಯೆರ್ಕ್ಸ್ ಪ್ರೈಮೇಟು ಸಂಶೋಧನಾ ಕೇಂದ್ರದಲ್ಲಿ ಡ್ಯೂಏನ್ ರುಮ್‌ಬಾಗ್ ಎಂಬುವನ ನೇತೃತ್ವದಲ್ಲಿ ಒಂದು ತಂಡ ಚಿಂಪಾಂಜಿಗಳ ಮೇಲೆ ಪ್ರಯೋಗಗಳನ್ನು ನಡೆಸುತ್ತಿದೆ. ಇವರ ಪ್ರಯೋಗಕ್ಕೆ ಒಳಗಾಗಿರುವ ಚಿಂಪಾಂಜಿಯ ಹೆಸರು ಲಾನಾ. ಇದಕ್ಕೆ ಯರ್ಕಿಷ್ ಎನ್ನುವ ಒಂದು ವಿಶೇಷ ಭಾಷೆಯನ್ನು ಕಲಿಸಲಾಗಿದೆ. ಬಿಳಿಬಣ್ಣದ, ವಿವಿಧ ಜ್ಯಾಮಿತೀಯ ಆಕಾರವುಳ್ಳ ೫೦ ಕೀಲಿಗಳನ್ನು ಹೊಂದಿರುವ ಒಂದು ವಿಶೇಷ ಬೆರಳಚ್ಚು ಯಂತ್ರವನ್ನು ಚಾಲೂಮಾಡುವ ಶಿಕ್ಷಣವನ್ನು ಲಾನಾ ಚಿಂಪಾಂಜಿಗೆ ನೀಡಲಾಗಿದೆ. ಪ್ರತಿಯೊಂದು ಆಕಾರ ಯರ್ಕಿಷ್‌ನ ಒಂದೊಂದು ಪದವನ್ನು ನಿರ್ದೇಶಿಸುತ್ತದೆ. ಕೀಲ್‌ಬೋರ್ಡನ್ನು ಪ್ರಕ್ಷೇಪಗಳು (ಪ್ರೊಜೆಕ್ಟರ್‌ಗಳು) ಹಾಗೂ ಒಂದು ಗಣಕ (ಕಂಪ್ಯೂಟರ್)ಕ್ಕೆ ಅಳವಡಿಸಲಾಗಿದೆ. ಬೆರಳಚ್ಚು ಯಂತ್ರದ ಸಹಾಯದಿಂದ ತನಗೆ ಬೇಕಾದ ಆಹಾರ ಪಾನೀಯ, ಆಟಿಕೆಗಳು, ಸಂಗೀತ, ಚಿತ್ರಗಳು ಮತ್ತು ಸಂಗಾತಿಯನ್ನು ಲಾನಾ ಕೇಳುತ್ತದೆ. ಲಾನಾಕ್ಕೆ ನೀಡಿರುವ ತರಬೇತಿ ವಾಷೂ, ಸಾರಾ ಚಿಂಪಾಂಜಿಗಳಿಗೆ ನೀಡಿರುವುದಕ್ಕಿಂತ

ವಿಶಿಷ್ಟವಾದುದು. ಸಂಕೀರ್ಣವಾದುದು. ಆದುದರಿಂದ ಅದು ಉಳಿದ ಚಿಂಪಾಂಜಿಗಳು ಕಲಿತದ್ದಕ್ಕಿಂತ ಹೆಚ್ಚು ಕಲಿಯಲು ಸಾಧ್ಯವಾಗಿದೆ. ವಿಕಿ, ವಾಷೂ, ಸಾರಾ ಚಿಂಪಾಂಜಿಗಳ ಮೇಲೆ ನಡೆಸಿದ ಪ್ರಯೋಗಗಳಿಂದ ಸಾಧಿತ ವಾಗಿರುವ ಅನೇಕ ಅಂಶಗಳು ಲಾನಾ ಚಿಂಪಾಂಜಿಯ ಮೇಲೆ ನಡೆಸಿರುವ ಪ್ರಯೋಗಗಳಿಂದ ಸಾಧಿತವಾಗಿವೆ.

ಚಿಂಪಾಂಜಿಗಳ ಮೇಲೆ ಬಗೆಬಗೆಯ ಪ್ರಯೋಗಗಳು ನಡೆದರೂ ಮಾನವ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮಾದರಿಯಲ್ಲೇ ಚಿಂಪಾಂಜಿಗಳೂ ವ್ಯಕ್ತಪಡಿಸುತ್ತವೆ ಎಂಬ ವಿಚಾರವನ್ನು ನಿರೂಪಿಸಲು ಈವರೆಗೆ ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ಕಲಿಕೆಯಲ್ಲಿ ಮನುಷ್ಯನಿಗೂ ಚಿಂಪಾಂಜಿಗೂ ಅನೇಕ ಭೇದ ಗಳಿವೆ (೧) ಮನುಷ್ಯನಿಗೆ ಬುದ್ಧಿಶಕ್ತಿ ಹೆಚ್ಚು (೨) ಚಿಂಪಾಂಜಿಗಳ ಸ್ಮೃತಿ ಗಿಂತ ಮನುಷ್ಯನ ಸ್ಮೃತಿ ಅಧಿಕ (೩) ಮನುಷ್ಯನಿಗೆ ಅಮೂರ್ತ ಚಿಂತನಾ ಶಕ್ತಿ ಇರುವುದು (೪) ಅನುಕರಣ ಸಾಮರ್ಥ್ಯ ಮನುಷ್ಯನಿಗೆ ಹೆಚ್ಚು. ಆದುದ ರಿಂದ ಚಿಂಪಾಂಜಿಗಿಂತ ಮಾನವ ಹೆಚ್ಚು ಶೀಘ್ರವಾಗಿ, ಶ್ರಮವಿಲ್ಲದೆ, ಸುಲಭ ವಾಗಿ ಭಾಷೆಯನ್ನು ಕಲಿಯಲು ಸಾಧ್ಯವಾಗುತ್ತದೆ.

ಚಿಂಪಾಂಜಿಗಳು ಹಾಗೂ ಮನುಷ್ಯರು ಪರಸ್ಪರ ಸಂಭಾಷಿಸಲು ಇಂದಿನ ದಿನಗಳಲ್ಲಿ ಕೆಲಮಟ್ಟಿಗೆ ಸಾಧ್ಯವಾಗಿದೆ ಎಂಬ ವಿಚಾರ ಮನೋವಿಜ್ಞಾನ, ಮಾನವಶಾಸ್ತ್ರಜ್ಞ ಹಾಗೂ ಭಾಷಾತಜ್ಞರಿಗೆ ಸಮಾಧಾನ ತಂದಿರುವ ವಿಷಯ ವಾಗಿದೆ. ಚಿಂಪಾಂಜಿಗಳಲ್ಲಿ ಭಾಷಾಕಲಿಕೆಯನ್ನು ಕುರಿತು ವೈಜ್ಞಾನಿಕ ಪ್ರಯೋಗಗಳು ಅಮೆರಿಕದಂಥ ರಾಷ್ಟ್ರಗಳಲ್ಲಿ ನಡೆಯುತ್ತಲೇ ಇವೆ. ಆದ್ದರಿಂದ ಮುಂಬರುವ ದಿವಸಗಳಲ್ಲಿ ಮಾನವನ ಸಾಂಸ್ಕೃತಿಕ ರಚನೆಯನ್ನು ಹಾಗೂ ಭಾಷೆಯ ಉಗಮ ಮತ್ತು ವಿಕಾಸವನ್ನು ಕುರಿತು ಹೆಚ್ಚು ತಿಳಿಯಲು ಈ ಪ್ರಯೋಗಗಳು ಸಹಾಯಕವಾಗುತ್ತವೆ.

ಆರ್. ರಾಮಕೃಷ್ಣ

ಹಳೆಯ ನೀರನ್ನು ಹೊಸ ನೀರು ಬಂದು ಕೊಚ್ಚಿದಂತೆ ಹೊಸ ಕಾಲವು ಹಳೆಯದನ್ನು ತಳ್ಳಿ ಮುಂದೆ ಬರುವದು. ಆಯಾಕಾಲಕ್ಕೆ ಹೊಂದಿ ಹಳತು ಹೊಸತನ ಮಾಡುವದೇ ಜಾಣನ ಬುದ್ಧಿವಂತಿಕೆ.

—ಜಾನವ್ವೆ ಟ್

ಭಾರತದೇಶದಲ್ಲಿ ಸೈಕಲ್ ತಯಾರಿಸುವ ಕೈಗಾರಿಕೆಯ ಭವಿಷ್ಯ

ಇಡೀ ವಿಶ್ವದಲ್ಲಿ ಸೈಕಲ್‌ಗಳನ್ನು ಜಾಸ್ತಿ ತಯಾರಿಸುವ ರಾಷ್ಟ್ರಗಳಲ್ಲಿ ಭಾರತದೇಶವು ನಾಲ್ಕನೆಯ ಸ್ಥಾನವನ್ನು ಪಡೆದಿದೆ. ೧೯೫೦ರಿಂದ ಆರಂಭಗೊಂಡು ಇತ್ತೀಚಿನ ಮೂರು ದಶಕ ವರ್ಷಗಳಲ್ಲಿ ಈ ಕೈಗಾರಿಕೆಯು ಅದ್ಭುತವಾದ ಬೆಳವಣಿಗೆಯನ್ನು ಸಾಧಿಸಿದೆ. ಇದಕ್ಕೂ ಮೊದಲು ಸೈಕಲ್‌ಗಳನ್ನು ಜಾಸ್ತಿ ಸಂಖ್ಯೆಯಲ್ಲಿ ಇಂಗ್ಲೆಂಡ್ ದೇಶದಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು. ದಶಕದಿಂದ ದಶಕಕ್ಕೆ ಸೈಕಲ್‌ಗಳ ಬೇಡಿಕೆಯು ದ್ವಿಗುಣಗೊಂಡಿದೆ. ೧೯೮೮ರಲ್ಲಿ ಸೈಕಲ್‌ಗಳ ಬೇಡಿಕೆಯು ಸುಮಾರು ನಾಲ್ಕೂವರೆ ದಶಲಕ್ಷಗಳ ಸಂಖ್ಯೆಯನ್ನು ಮುಟ್ಟಿದೆ. ಈ ಕಾರಣದಿಂದಲೇ ಸೈಕಲ್‌ಗಳನ್ನು ಜಾಸ್ತಿ ಸಂಖ್ಯೆಯಲ್ಲಿ ತಯಾರಿಸುವ ಅಗ್ರರಾಷ್ಟ್ರಗಳ ಪಂಕ್ತಿಯಲ್ಲಿ ನಾಲ್ಕನೆಯ ಸ್ಥಾನವನ್ನು ಪಡೆದಿತು. ಮೊದಲ ಮೂರು ರಾಷ್ಟ್ರಗಳು ಯಾವುವೆಂದರೆ: ಅಮೇರಿಕಾದ ಸಂಯುಕ್ತ ಸಂಸ್ಥಾನಗಳು, ಜಪಾನ್ ಮತ್ತು ಚೈನಾ. ಸುಮಾರು ೬೦೦೦ ಕ್ಕಿಂತಲೂ ಹೆಚ್ಚಾದ ಕೇಂದ್ರಗಳು ಈ ಬೇಡಿಕೆಯನ್ನು ರಾಷ್ಟ್ರದ ಎಲ್ಲಾ ಭಾಗಗಳಿಗೂ ಪೂರೈಸುತ್ತಿವೆ. ತಯಾರಿಕೆಯಾದ ಸೈಕಲ್‌ಗಳಲ್ಲಿ ಸುಮಾರು ಶೇಕಡಾ ಹತ್ತರಷ್ಟು ಬೇರೆ ದೇಶಗಳಿಗೆ ರಫ್ತಾಗುತ್ತಿವೆ. ಹೀಗೆ ರಫ್ತಾಗುವ ಸೈಕಲ್‌ಗಳಲ್ಲಿ ಹೆಚ್ಚಿನ ಸಂಖ್ಯೆಯವು ಮಧ್ಯಏಷ್ಯಾ, ಆಫ್ರಿಕಾ ಮತ್ತು ದಕ್ಷಿಣ ಏಷ್ಯಾಖಂಡದ ಭಾಗಗಳಿಗೆ ರವಾನಿಸಲ್ಪಡುತ್ತಿವೆ. ಸೈಕಲ್ ಕೈಗಾರಿಕೆಯು ಕೆಲವು ಉಪ ಕೈಗಾರಿಕೆಗಳನ್ನು ಪೋಷಿಸುತ್ತಿದೆ. ಈ ಬಗೆಯ ಅನೇಕ ಉಪ ಕೈಗಾರಿಕೆಗಳು ಪಂಜಾಬ್ ದೇಶದಲ್ಲಿ ನೆಲೆಗೊಂಡಿವೆ. ಈ ಉಪ ವಿಭಾಗಗಳು ಸೈಕಲ್ ತಯಾರಿಕೆಗೆ ಬೇಕಾದ ಉಪಕರಣಗಳನ್ನು ತಯಾರಿಸಿ, ಈ ಬಿಡಿಭಾಗಗಳನ್ನು ಮುಂದುವರಿದ ಪಾಶ್ಚಾತ್ಯ ರಾಷ್ಟ್ರಗಳನ್ನೂ ಒಳಗೊಂಡು, ನಾನಾ ದೇಶಗಳಿಗೆ ರಫ್ತು ಮಾಡುತ್ತಿವೆ.

ಈಗ ಭಾರತದೇಶದ ರಸ್ತೆಗಳಲ್ಲಿ ಸುಮಾರು ೪೫ ದಶಲಕ್ಷ ಸೈಕಲ್‌ಗಳು ಸಂಚರಿಸುತ್ತಿವೆ ಎಂದು ಅಂದಾಜು ಮಾಡಲಾಗಿದೆ. ಅಂದರೆ ಪ್ರತಿ ಮೂರು ಮನೆಗಳ ಪೈಕಿ ಒಂದು ಮನೆಯವರು ಸೈಕಲ್ ಹೊಂದಿರುವರು. ಶೇಕಡಾ

ಆಗಸ್ಟ್ ೮೨ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ದಿ ಫ್ಯೂಚರ್ ಆಫ್ ದಿ ಬೈಸಿಕಲ್ ಇಂಡಸ್ಟ್ರಿ ಇನ್ ಇಂಡಿಯ ಎಂಬ ಲೇಖನದ ಅನುವಾದ.

ಎಪ್ಪತ್ತರಷ್ಟು ಸೈಕಲ್‌ಗಳು ಗ್ರಾಮೀಣ ವಿಭಾಗಗಳಲ್ಲಿ ಉಪಯೋಗಿಸಲ್ಪಡುತ್ತಿವೆ. ಸಾಮಾನ್ಯವಾಗಿ ಸೈಕಲ್‌ಗಳನ್ನು ಉಪಯೋಗಿಸುವವರಲ್ಲಿ ೧೫ ವರ್ಷದ ಮನೆಯ ಯಜಮಾನರೇ ಹೆಚ್ಚಾಗಿ ಉಪಯೋಗಿಸುತ್ತಿರುವಂತೆ ಕಂಡುಬಂದಿದೆ. ಅತ್ಯಂತ ಕಡಿಮೆ ವೆಚ್ಚದಲ್ಲಿ ಸುಲಭವಾಗಿ ತಾನು ಕೆಲಸಮಾಡುವ ಜಾಗಕ್ಕೆ ಸಂಚರಿಸಲು, ಸೈಕಲ್ ಉಪಯೋಗ ಬಹಳವಾಗಿದೆ. ಆದರೆ ಸೈಕಲ್‌ಗಳನ್ನು ಉಪಯೋಗಿಸುವವರ ವಯಸ್ಸು, ವರಮಾನ, ಉದ್ಯೋಗಗಳಲ್ಲಿ ವೈವಿಧ್ಯತೆ ಇದೆ. ಹದಿನೈದು ವರ್ಷದಿಂದ ನಲವತ್ತೈದು ವರ್ಷಗಳವರೆಗಿನ ವ್ಯಕ್ತಿಗಳು ಈ ವಾಹನದ ಪ್ರಯೋಜನವನ್ನು ಜಾಸ್ತಿ ಸಂಖ್ಯೆಯಲ್ಲಿ ಪಡೆಯುತ್ತಿರುವರು. ಮಧ್ಯಮ ವರ್ಗದವರಲ್ಲಿ ಕಡಿಮೆ ದರ್ಜೆಯ ವರಮಾನವನ್ನು ಪಡೆಯುವವರು ಹಾಗೂ ಜಾಸ್ತಿ ವರಮಾನವನ್ನು ಪಡೆಯುವವರು ಈ ವಾಹನವನ್ನು ಸಂಚಾರಕ್ಕಾಗಿ ಉಪಯೋಗಿಸುತ್ತಿರುವರು. ರೈತವರ್ಗದವರಿಂದ ಮೊದಲುಗೊಂಡು ವಿದ್ಯಾರ್ಥಿದೆಶೆಯಲ್ಲಿರುವವರು ಈ ವಾಹನದ ಲಾಭವನ್ನು ಪಡೆಯುತ್ತಿರುವರು. ರಾಷ್ಟ್ರದ ಕೆಲವು ರಾಜ್ಯಗಳಲ್ಲಿ ಈ ವಾಹನಗಳನ್ನು ಬಾಡಿಗೆಗೆ ಕೊಡುವ ಉದ್ಯಮವು ಬಹು ಲಾಭಕರವಾಗಿ ಕಾಣಿಸಿಸಿದೆ.

ನಮ್ಮ ರಾಷ್ಟ್ರದಲ್ಲಿ ತಯಾರಾಗುತ್ತಿರುವ ಸೈಕಲ್‌ಗಳಲ್ಲಿ ಶೇಕಡಾ ೯೦ರಷ್ಟು ವಾಹನಗಳು ಒಂದೇ ಮಾದರಿಗೆ ಸೇರಿದವುಗಳಾಗಿವೆ. ಹಲವಾರು ದಶಕಗಳಿಂದ ಈ ಸೈಕಲ್‌ಗಳ ವಿನ್ಯಾಸಗಳು ಕ್ರಮೇಣ ಬದಲಾವಣೆ ಹೊಂದುತ್ತಲೇ ಬಂದಿವೆ. ಆದಾಗ್ಯೂ ಈ ಶತಮಾನದ ಆರಂಭದಿಂದ ಇವುಗಳ ವಿನ್ಯಾಸಗಳಲ್ಲಿ ಹೆಚ್ಚು ಬದಲಾವಣೆಗಳು ಆಗಿಲ್ಲ. ಈ ವಾಹನದ ನಾನಾ ಭಾಗಗಳು ವಿಶೇಷವಾಗಿ ಉಕ್ಕಿನಿಂದ ತಯಾರಾಗುತ್ತಿವೆ. ಚಕ್ರಗಳನ್ನು ಜಾಸ್ತಿಯ ಸಂಖ್ಯೆಯಲ್ಲಿ ರಬ್ಬರ್ ಉಪಯೋಗಿಸಿ ತಯಾರಿಸುತ್ತಿರುವರು. ನಾನಾ ಸಂಘಸಂಸ್ಥೆಗಳು ಈ ವಾಹನದ ತಯಾರಿಕೆಯಲ್ಲಿ ಪಾಲುಗೊಂಡಿದ್ದರೂ ಮೇಲ್ನೋಟಕ್ಕೆ ವಾಹನವನ್ನು ಉಪಯೋಗಿಸುವವರಿಗೆ ಒಂದು ಮಾದರಿಯಿಂದ ಇನ್ನೊಂದು ಮಾದರಿಗೆ ಹೆಚ್ಚು ವ್ಯತ್ಯಾಸ ಕಂಡುಬರುವುದಿಲ್ಲ. ವಾಹನಗಳನ್ನು ಉಪಯೋಗಿಸುವವರು ವಾಹನವನ್ನು ಉಪಯೋಗಿಸಿದ ಮೇಲೆಯೇ ಅದರ ಮಟ್ಟವನ್ನು ಗ್ರಹಿಸಬಲ್ಲರು. ಅಲ್ಲದೆ ಅವುಗಳನ್ನು ತಯಾರಿಸುವ ಸಂಸ್ಥೆಯ ಹೆಸರು ಮತ್ತು ವಾಹನದ ಬೆಲೆಗಳೂ ಗ್ರಾಹಕರನ್ನು ಬೇರೆ ಬೇರೆ ಮಾದರಿಗಳನ್ನು ಕೊಳ್ಳಲು ಪ್ರೇರೇಪಿಸುತ್ತಿವೆ. ಈ ಸರಳವಾದ ವಾಹನವು ೧೫೦ ಕ್ಕಿಂತಲೂ ಹೆಚ್ಚು ಬಿಡಿಭಾಗಗಳನ್ನು ಹೊಂದಿದೆ. ಪ್ರತಿಯೊಂದು ಭಾಗವೂ ವಿಶೇಷರೀತಿಯಲ್ಲಿ ತಯಾರಿಸಲ್ಪಟ್ಟು, ಬಹು ಕುಶಲತೆ

ಯಿಂದ ಅವುಗಳನ್ನು ಜೋಡಿಸಬೇಕಾಗಿರುವುದು. ಬಿಡಿಭಾಗಗಳನ್ನು ತಯಾರಿಸಲು ಉಪಯೋಗಿಸುವ ಸಾಮಗ್ರಿಗಳ ಗುಣಮಟ್ಟ, ನುರಿತ ಕೆಲಸಗಾರರು ಇವುಗಳನ್ನು ಜೋಡಿಸಲು ಅಚ್ಚುಕಟ್ಟಾದ ಯಂತ್ರಗಳು ಮುಂತಾದ ಹಲವಾರು ಅಂಶಗಳ ಮೇಲೆ ಈ ವಾಹನದ ಉಪಯುಕ್ತತೆಯು ಅವಲಂಬಿಸಿದೆ. ಮೇಲೆ ತಿಳಿಸಿದ ಎಲ್ಲಾ ಅಂಶಗಳೂ ತೃಪ್ತಿಕರವಾಗಿದ್ದರೆ ಸೈಕಲ್ ವಾಹನವು ಅನೇಕ ವರ್ಷಗಳ ಕಾಲ, ಯಾವ ತೊಂದರೆಗಳನ್ನೂ ಕೊಡದೆ ಗ್ರಾಹಕನಿಗೆ ಸೇವೆಯನ್ನು ಕೊಡಬಲ್ಲದು.

ಭವಿಷ್ಯದಲ್ಲಿ ನಮ್ಮ ರಾಷ್ಟ್ರದಲ್ಲಿ ಈ ಕೈಗಾರಿಕೆಯು ಬಹಳ ಆಶಾದಾಯಕವಾಗಿರುವುದು. ಏಕೆಂದರೆ ಮಧ್ಯಮ ಹಾಗೂ ಕಡಿಮೆ ದರ್ಜೆಯ ವರಮಾನವನ್ನು ಪಡೆಯುತ್ತಿರುವವರಿಗೆ, ಈ ವಾಹನವು ಒಂದು ಕಡೆಯಿಂದ ಮತ್ತೊಂದೆಡೆಗೆ ಸಂಚರಿಸಲು ಮತ್ತು ಕೆಲವು ವಸ್ತುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು, ಅತ್ಯಂತ ಕಡಿಮೆ ವೆಚ್ಚದಲ್ಲಿ ಅಗತ್ಯತೆಗಳನ್ನು ಪೂರೈಸುತ್ತಿರುವುದು. ೧೯೭೦ ರಿಂದ ಈಚೆಗೆ ತೈಲಗಳ ಬೆಲೆಗಳು ಅನಿರೀಕ್ಷಿತ ಮಟ್ಟದಲ್ಲಿ ಏರಿದಾಗಿನಿಂದ ಕಡಿಮೆ ವರಮಾನವನ್ನು ಪಡೆಯುತ್ತಿರುವವರು ಸಂಪೂರ್ಣವಾಗಿ ಸೈಕಲ್‌ಗಳನ್ನೇ ಆಶ್ರಯಿಸಬೇಕಾಗಿ ಬಂದಿದೆ. ಸರಕಾರದಿಂದ ನೆರವು ಪಡೆಯುತ್ತಿರುವ ಸಂಸ್ಥೆಗಳಿಗೂ ಸಹ ಕಡಿಮೆ ದೂರಗಳಿಗೆ ಸಾಗಾಣಿಕೆಯ ವೆಚ್ಚವು ಗಮನಾರ್ಹವಾಗಿ ಏರಿ, ಸೈಕಲ್‌ಗಳು ಆ ಸಂಸ್ಥೆಗಳ ನೆರವಿಗೆ ಬಂದಿವೆ.

ಗ್ರಾಮೀಣ ವಿಭಾಗಗಳಲ್ಲಿ ಈ ವಾಹನದ ಉಪಯೋಗವು ಶೀಘ್ರವಾಗಿ ಬೇರನ್ನು ಬಿಟ್ಟು ಭದ್ರವಾಗಿ ನೆಲೆಗೊಂಡಿದೆ. ಮುಂದಿನ ವರ್ಷಗಳಲ್ಲಿ ವ್ಯವಸಾಯಕ್ಷೇತ್ರದಲ್ಲಿ ಮುಂದುವರಿದಿರುವ ರಾಷ್ಟ್ರದ ಭಾಗಗಳಲ್ಲಿ ಈ ವಾಹನದ ಉಪಯುಕ್ತತೆ ಹೆಚ್ಚಬೇಕಾಗಿದೆ. ಮೂಲೆಗಳಲ್ಲಿ ನೆಲಸಿರುವ ಗ್ರಾಮೀಣ ವಿಭಾಗಗಳಲ್ಲಿ ಇತರೆ ವಾಹನಗಳು ಸಂಚರಿಸಲೂ ಅಸಾಧ್ಯವಾಗಿರುವ ಪ್ರದೇಶಗಳಲ್ಲಿ ಸೈಕಲ್ ಹೆಚ್ಚು ಪರಿಣಾಮಕಾರಿಯಾಗಬಲ್ಲದು. ಸಾರ್ವಜನಿಕ ಸಂಪರ್ಕ ವ್ಯವಸ್ಥೆಯು ನಮ್ಮ ದೇಶದ ಹಳ್ಳಿಗಳಲ್ಲಿ ಕೇವಲ ಆರುಲಕ್ಷ ಹಳ್ಳಿಗಳಿಗೆ ಮಾತ್ರ ವಿಸ್ತರಿಸಲ್ಪಟ್ಟಿದೆ. ಉಳಿದ ಹಳ್ಳಿಗಳಲ್ಲಿ ಬೇರೆ ವಾಹನಗಳ ಉಪಯೋಗ ಸಾಧ್ಯವೇ ಇಲ್ಲದಿರುವ ಇಂದಿನ ಪರಿಸ್ಥಿತಿಯಲ್ಲಿ ಈ ಭಾಗಗಳಿಗೆ ಸೈಕಲ್ ಉಪಯೋಗವು ಬಹು ಪರಿಣಾಮಕಾರಿಯಾಗಿ ಪಾತ್ರ ವಹಿಸಬಲ್ಲದು. ಈ ಬಗೆಯ ಹಳ್ಳಿಗಳಿಂದ ಜನರು ಹೆಚ್ಚಿನ ವಿದ್ಯಾಭ್ಯಾಸ, ಸಾಮಗ್ರಿಗಳನ್ನು ಕೊಳ್ಳುವಿಕೆ,

ವೈದ್ಯಕೇಂದ್ರಗಳಿಗೆ ಭೇಟಿ ಮುಂತಾದ ಉದ್ದೇಶಗಳಿಗೆ ಸೈಕಲ್ ವರಪ್ರಧಾನವಾಗಬಲ್ಲುದು.

ಈ ವಾಹನವನ್ನು ತಯಾರಿಸುವ ಸಂಸ್ಥೆಗಳು ಮೇಲಿನ ಎಲ್ಲಾ ಅಂಶಗಳನ್ನೂ ಸೂಕ್ತವಾಗಿ ಪರಿಗಣಿಸಬೇಕು. ಗ್ರಾಹಕರ ಬದಲಾಯಿಸಿದ ಆವಶ್ಯಕತೆಗಳಿಗನುಗುಣವಾಗಿ ತಮ್ಮ ವಾಹನದ ಹೊಸ ಮಾದರಿಯನ್ನು ನಿರೂಪಿಸಬೇಕು. ಈ ವಾಹನಗಳ ಮಾದರಿ, ರಚನೆ ಮೊದಲಾದ ಅಂಶಗಳಲ್ಲಿ ಕಾಲದಿಂದ ಕಾಲಕ್ಕೆ ಅಗತ್ಯವಾದ ಬದಲಾವಣೆಗಳನ್ನು ಶೀಘ್ರವಾಗಿ ನಿಯಂತ್ರಣಕ್ಕೊಳಪಡಿಸಬೇಕು. ಎಲ್ಲಾ ಬದಲಾವಣೆಗಳನ್ನು ರೂಪಿಸಿದ ನಂತರವೂ ಈ ವಾಹನವು ಕಡಿಮೆ ದರ್ಜೆ ವರಮಾನವನ್ನು ಪಡೆಯುತ್ತಿರುವವರಿಗೆ ಅತ್ಯಂತ ಕಡಿಮೆ ವೆಚ್ಚದಲ್ಲಿ ಸಂಪರ್ಕ ಮಾಧ್ಯಮವಾಗಿಯೇ ಉಳಿಯಬೇಕೆಂಬ ಮೂಲಭೂತ ಅಂಶವನ್ನು ಕಡೆಗಣಿಸಬಾರದು. ಈ ಬಗೆಯ ನೂತನ ವಿನ್ಯಾಸಗಳಿಂದ ಬಿಡಿ ಭಾಗಗಳ ರಚನೆಯಲ್ಲೂ ಗಮನಾರ್ಹ ಸುಧಾರಣೆಗಳು ಕಂಡುಬಂದರೆ ಬಿಡಿ ಭಾಗಗಳನ್ನು ವಿದೇಶಗಳಿಗೆ ರಫ್ತುಮಾಡುವ ಉದ್ಯಮವು ಹೇರಳವಾದ ವಿದೇಶಿ ವಿನಿಮಯವನ್ನು ಒದಗಿಸಬಲ್ಲುದು.

ಮೇಲೆ ತಿಳಿಸಿದ ದೃಷ್ಟಿಕೋನಗಳಲ್ಲಿ ಸಮಸ್ಯೆಗಳು ಇಲ್ಲವೆಂದು ಭಾವಿಸಬಾರದು. ರಸ್ತೆಗಳಲ್ಲಿ ದಟ್ಟವಾದ ವಾಹನಸಂಚಾರವು, ಕೆಲವು ಸಂದರ್ಭಗಳಲ್ಲಿ ಸೈಕಲ್ ಉಪಯೋಗವು ಅಪಾಯಕಾರಿ ಎಂಬ ಭಾವನೆಯನ್ನುಂಟುಮಾಡಬಹುದು. ಗಾತ್ರದಲ್ಲಿ ಬಹುಮಟ್ಟಿಗೆ ದೊಡ್ಡದಾಗಿರುವ ಮತ್ತು ಬಹು ವೇಗವಾಗಿ ಸಂಚರಿಸುವ ವಾಹನಗಳೊಡನೆ ಪೈಪೋಟಿ ಸುಲಭಸಾಧ್ಯವಾದುದಲ್ಲ. ನಮ್ಮ ರಾಷ್ಟ್ರದ ಅನೇಕ ನಗರಗಳಲ್ಲಿ ಸೈಕಲ್‌ಗಳ ವಾಹನಕ್ಕಾಗಿಯೇ ಬೇರೆ ರಸ್ತೆಗಳು ನಿರ್ಮಾಣಗೊಂಡಿಲ್ಲ. ಪಾಶ್ಚಾತ್ಯ ರಾಷ್ಟ್ರಗಳ ಕೆಲವು ನಗರಗಳಲ್ಲಿರುವಂತೆ ಸೈಕಲ್‌ಗಳ ಸಂಚಾರಕ್ಕೆಂದೇ ಬೇರೆ ಮಾರ್ಗಗಳು ನಿರ್ಮಾಣವಾದರೆ ಈ ವಾಹನದ ಉಪಯೋಗವು ಹೆಚ್ಚು ಸುರಕ್ಷಿತವಾಗಬಲ್ಲದು. ವಾಣಿಜ್ಯ ಕೇಂದ್ರಗಳು ಹಾಗೂ ಮಾರುಕಟ್ಟೆಗಳಲ್ಲಿ ವಾಹನದ ನಿಲುಗಡೆಗೆ ಭದ್ರತಾ ವ್ಯವಸ್ಥೆಯು ಅಗತ್ಯವಾಗಿರುವುದು, ಇಲ್ಲದಿದ್ದಲ್ಲಿ ವಾಹನಗಳ ಕಳ್ಳತನದ ಹೆದರಿಕೆಯು ಗ್ರಾಹಕರಿಗೆ ಇರುವುದು. ನಗರಸಭೆಗಳು ರಾತ್ರಿಕಾಲದಲ್ಲಿ ದೀಪವನ್ನು ಹೊತ್ತಿಸಿಯೇ ವಾಹನವನ್ನು ಓಡಿಸಬೇಕೆಂಬ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಇದರಿಂದ ಅಪಘಾತಗಳ ಸಂಖ್ಯೆ ತಗ್ಗುವುದು. ಈ ಉದ್ದೇಶವು ಹೆಚ್ಚು ಪರಿಣಾಮಕಾರಿಯಾಗುವಂತೆ ಸರ್ಕಾರದವರು ಸರಿಯಾದ

ವಾಹನಸಂಚಾರದ ನಿಯಮಗಳ ಪ್ರಚಾರ ಮತ್ತು ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವಿಕೆ ಮುಂತಾದ ರಚನಾತ್ಮಕವಾದ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾದ ರೀತಿಯಲ್ಲಿ ಆಚರಣೆಗೆ ತರಬೇಕು. ಪ್ರತಿಯೊಂದು ಸರ್ಕಾರವೂ ಸೈಕಲ್ ಅತ್ಯಂತ ಕಡಿಮೆ ವೆಚ್ಚದಲ್ಲಿ ಸಂಪರ್ಕ ಮಾಧ್ಯಮವಾಗಿರುವುದನ್ನು ಎಲ್ಲಾ ಕಾಲಗಳಲ್ಲೂ ನೆನಪಿನಲ್ಲಿಡಬೇಕು. ಅಲ್ಲದೆ ಈ ವಾಹನಗಳ ತಯಾರಕರ ಮತ್ತು ಗ್ರಾಹಕರ ಹಿತಚಿಂತನೆಯನ್ನು ನಿರಂತರವಾಗಿ ಮಾಡುತ್ತಿರಬೇಕು.

ಕ್ಯಾಪ್ಟನ್ ಎ. ಎನ್. ರಾವ್



ಕೃತಿ ಮತ್ತು ಸಾಧನೆಗಳಲ್ಲಿ ವ್ಯತ್ಯಾಸವಿದೆ. ಕಲ್ಪಿಸಿದಂತೆ ಮನುಷ್ಯ ಪರ್ವತವನ್ನು ಎತ್ತಲಾರ. ದೇವರ ನಾಮವನ್ನು ಜಪಿಸುವಷ್ಟು ಸುಲಭವಾಗಿ ದೇವರನ್ನು ಕಾಣಲಾರ.

—ಸ್ವಾಮಿ ಪರಮಹಂಸ

ಉಪವಾಸವೆಂದರೆ, ವಿವೇಕವನ್ನು ಜಾಗೃತಗೊಳಿಸಿ ಮನಸ್ಸಿನ ಕಾಲುಷ್ಯವನ್ನು ಅಳಿಸುವುದಕ್ಕಾಗಿ. ನನಗೆ ಜೀವ ಉಳಿಸುವ ಮಾತಿಗಿಂತಲೂ ಹೃದಯ ಪರಿವರ್ತನೆಯೇ ಮುಖ್ಯವಾಗಿದೆ.

ಅಹಿಂಸೆ, ಅರ್ಥಾತ್ ಕರುಣಾಭಾವನೆ, ಹಿಂದೂ ಧರ್ಮದ ಜೀವನಾಡಿ. ಅಸ್ಪೃಶ್ಯತೆಯು ಈ ನಿಯಮಭಂಗವನ್ನುಂಟುಮಾಡುವುದರಿಂದಾಗಿಯೇ ಅದು ಅಧರ್ಮವಾಗಿದೆ.

—ಗಾಂಧೀಜಿ

ಮಹಾರಾಷ್ಟ್ರದ ಸಂತ: ಜನಾರ್ದನಸ್ವಾಮಿ

ಜನಾರ್ದನಸ್ವಾಮಿಯು ಜನ್ಮ ೧೫೦೪ರಲ್ಲಿ ಮಹಾರಾಷ್ಟ್ರದ ಚಾಲೀಸ್‌ಗಾಂ ಎಂಬ ಹೆಸರಿನ ಸ್ಥಳದಲ್ಲಾಗಿತ್ತು. ಅವರು ದೇಶಪಾಂಡೆ ಎಂದರೆ ದೇಶಸ್ಥ ಬ್ರಾಹ್ಮಣರಾಗಿದ್ದರು.

ಬಾಲ್ಯದಲ್ಲಿ ಅವರು ಧರ್ಮಶಾಸ್ತ್ರಗಳ ಅಧ್ಯಯನ ಮಾಡಿದರು. ಯೋಗದ ಅನೇಕ ಆಯಾಮಗಳಾದ—ಹಠಯೋಗ, ರಾಜಯೋಗ, ಮಂತ್ರಯೋಗ, ಲಯಯೋಗ, ನಾದಯೋಗ ಮುಂತಾದ ಸಾಧನೆಗಳನ್ನು ಮಾಡಿದ್ದರು. ಇದಲ್ಲದೆ ಅವರು ಕುದುರೆ ಸವಾರಿ, ಯುದ್ಧ ಕಲೆಯ ಅಭ್ಯಾಸವನ್ನು ಸಹ ಮಾಡಿದ್ದರು.

ಅವರ ವೈವಾಹಿಕ ಜೀವನ ಕಿರುವಯಸ್ಸಿನಲ್ಲಿಯೇ ಪ್ರಾರಂಭವಾಗಿತ್ತು. ಅವರು ಇಬ್ಬರು ನವತರುಣಿಯರನ್ನು ವಿವಾಹವಾಗಿದ್ದರು. ಇಬ್ಬರೂ ಸುಂದರಿಯರಾಗಿದ್ದಷ್ಟೇ ಗುಣವಂತರೂ ಶಿಷ್ಟರೂ ಆಗಿದ್ದರು. ತಾಯಿ-ತಂದೆಯರ ಮರಣಾನಂತರ ಕುಟುಂಬದ ಸಂಪೂರ್ಣ ಜವಾಬ್ದಾರಿ ಅವರ ಹೆಗಲಿಗೇ ಬಂದಿತು. ಆದ್ದರಿಂದ ಅವರ ಗಮನವೆಲ್ಲಾ ಹಣ ಸಂಪಾದನೆಯಲ್ಲೇ ಇದ್ದಿತು.

ತಮ್ಮ ಕೆಲಸ-ಕಾರ್ಯಗಳ ನಡುವೆ ಜನಾರ್ದನಸ್ವಾಮಿ ಆಗಾಗ್ಗೆ ಪ್ರವಾಸ ಹೋಗಬೇಕಾಗುತ್ತಿತ್ತು. ಹೀಗೊಮ್ಮೆ ಪ್ರವಾಸ ಮಾಡಿದಾಗ ಅವರೊಂದು ಬಸ್ತಿಯಲ್ಲಿ ಉಳಿದರು, ಅಲ್ಲೊಂದು ದೇವಾಲಯದಲ್ಲಿ ವಿಶ್ರಾಂತಿ ಪಡೆಯುವಾಗ ಭಗವಾನ್ ದತ್ತಾತ್ರೇಯನನ್ನು ನೃಸಿಂಹ ಸರಸ್ವತಿಯ ರೂಪದಲ್ಲಿ ಪ್ರಕಟವಾದದ್ದನ್ನು ಕಂಡರು. ನೃಸಿಂಹ ಸರಸ್ವತಿ ಗಂಗಾಪುರದ ಬಳಿಯಿರುವ ನರಸೋಬಾವಾಡಿಯಲ್ಲಿ ಇರುವ ಒಬ್ಬ ಮಹಾನ್ ವಿಖ್ಯಾತ ಸಂತರಾಗಿದ್ದರು.

ನೃಸಿಂಹ ಸರಸ್ವತಿಗಳು ಜನಾರ್ದನಸ್ವಾಮಿಗಳಿಗೆ ಕೃಷ್ಣಾ ನದಿಯ ದಡದಲ್ಲಿದ್ದ ಪವಿತ್ರವಾದ ಔದುಂಬರ ವೃಕ್ಷದಡಿಯಲ್ಲಿ ದೀಕ್ಷೆಕೊಟ್ಟಿದ್ದರಿಂದ ಅವರ ಆಧ್ಯಾತ್ಮಿಕ ಜೀವನ ಪ್ರಾರಂಭವಾಯಿತು. ಅವರು ಅದೇ ಸ್ಥಳದಲ್ಲಿ ಸಾಕಷ್ಟು ದಿನಗಳವರೆವಿಗೆ ತಪಸ್ಸು ಮಾಡುತ್ತಿದ್ದು ಭಗವಾನ್ ದತ್ತಾತ್ರೇಯನ ಧ್ಯಾನ ಚಿಂತನೆಯಲ್ಲಿ ಮಗ್ನರಾಗಿದ್ದರು. ಈ ಸಮಯದಲ್ಲಿಯೇ ಅವರು ಅನೇಕ ಅಭಂಗಗಳ ರಚನೆಮಾಡಿದರು. ಇವುಗಳಲ್ಲಿ ಸ್ವರ ಹಾಗೂ ಭಕ್ತಿಯ ಮಿಳಿತ ಅತಿ

೧೯೭೦ರ ಫೆಬ್ರವರಿ ತಿಂಗಳ 'ಹಿಂದೀ ಡೈಜಸ್ಟ್' ನವನೀತದ ಸಾವಿತ್ರೀಬಾಯಿ ಖಾಪೋಲ್ಕರ್‌ರವರ 'ಮಹಾರಾಷ್ಟ್ರಕೆ ಸಂತ: ಜನಾರ್ದನಸ್ವಾಮಿ' ಲೇಖನದ ಅನುವಾದ.

ಮನೋಹರವಾಗಿದೆ. ಅವರ ಈ ಭಕ್ತಿಗೀತೆಗಳು ಭಗವಾನ್ ದತ್ತಾತ್ರೇಯನ ಬಗೆಗೆ ಅವರ ಅಗಾಧ ಪ್ರೇಮವನ್ನು ಬಹುಸುಂದರವಾಗಿ ಅಭಿವ್ಯಕ್ತಗೊಳಿಸುತ್ತವೆ.

ಚಾಲೀಸ್‌ಗಾಂಗೆ ಹಿಂದಿರುಗಿ ಅವರು ತಮ್ಮನ್ನು ಸಂಪೂರ್ಣವಾಗಿ ಸಾಂಸಾರಿಕ ಜೀವನದಿಂದ ವಿಮುಖಗೊಳಿಸಿಕೊಂಡರು. ಮತ್ತೆ ತಮ್ಮ ಕುಟುಂಬದವರನ್ನು ಕರೆದುಕೊಂಡು (ಈಗಿನ ದೌಲತಾಬಾದ್) ದೇವಗಢಕ್ಕೆ ಬಂದರು. ಮುಂದೆ ಈ ನಗರವಲ್ಲೂ ನಿಜಾಮರ ಆಡಳಿತವಾಯಿತು.

ಆ ದಿನಗಳಲ್ಲೂ ಈ ನಗರದಲ್ಲಿ ಯುದ್ಧ, ಲೂಟಿ, ಕೊಲೆ-ದರೋಡೆ ನಡೆಯುತ್ತಿತ್ತು. ನಗರದ ಮುಸ್ಲಿಮ್ ರಾಜನು ಜನಾರ್ದನನ ಯುದ್ಧ ಕೌಶಲದಿಂದ ಪ್ರಭಾವಿತನಾಗಿ ಕೊತ್ವಾಲನಾಗಿ ನೇಮಿಸಿಕೊಂಡ. ಕೊತ್ವಾಲನ ಹುದ್ದೆಯಲ್ಲಿ—ರಾಜನ ಕೋಟೆಯ ರಕ್ಷಣೆ ಮತ್ತು ಅದರ ವ್ಯವಸ್ಥೆ ಮಾಡುವುದೇ ಅವರ ಕರ್ತವ್ಯವಾಗಿತ್ತು. ಅವರು ಕರ್ಮಯೋಗಿಯ ರೂಪದಲ್ಲಿ ಪುನಃ ಸಾಂಸಾರಿಕ ಜೀವನದಲ್ಲಿ ತೊಡಗಿದರು. ಜನಾರ್ದನ ಕೋಟೆಯ ಹಳಿಯ ಅವ್ಯವಸ್ಥೆ ಮತ್ತು ಅಶಾಂತಿಯನ್ನು ಬಹುಬೇಗ ಉತ್ತಮ ಮತ್ತು ಪವಿತ್ರ ರೀತಿಯಲ್ಲಿ ಸರಿಪಡಿಸಿದರು, ಕೆಲಸಗಾರರಿಗೆ ವೇತನ ಸರಿಯಾದ ಸಮಯಕ್ಕೆ ಸಿಗತೊಡಗಿತು. ಕೋಟೆಗೆ ಸಂಬಂಧಿಸಿದ ವ್ಯಾಪಾರಿ ಹಾಗೂ ರೈತರು ಶಾಂತ ಮತ್ತು ಸಂತುಷ್ಟರಾಗಿ ಕಂಡರು. ಇತ್ತೀಚಿನ ದಿನಗಳಲ್ಲಿ ಕೋಟೆಯ ಮೇಲಾಗುತ್ತಿದ್ದ ಆಕ್ರಮಣಗಳು ನಿಂತುವು.

ಜನಾರ್ದನನ (ಆಸ್ಥಾನ) ಸಭೆ ದೇವಗಿರಿಯ ಬಳಿಯಿದ್ದ ಧಾರೇಶ್ವರದಲ್ಲಿ ಅವರ ನಿವಾಸ ಸ್ಥಳದಲ್ಲಿಯೇ ಸೇರುತ್ತಿತ್ತು. ವಿಶ್ರಾಂತಿಯ ಕ್ಷಣಗಳಲ್ಲಿ ಅವರು ಸಂತ ಜ್ಞಾನೇಶ್ವರ ಕೃತ 'ಜ್ಞಾನೇಶ್ವರಿ' ಮತ್ತು 'ಅಮೃತ ಅನುಭವ'ದ ಪಾಠ ಮಾಡುತ್ತಿದ್ದರು. ಇವೆರಡೂ ಗ್ರಂಥಗಳು ಸಹಚರರ ರೂಪದಲ್ಲಿ ಯಾವಾಗಲೂ ಅವರ ಬಳಿ ಇರುತ್ತಿದ್ದುವು.

ಅವರ ನಿವಾಸ-ಸ್ಥಾನದ ಬಳಿ ಒಂದು ಗುಹೆ ಇತ್ತು. ಬಹುಶಃ ಅವರು ಅಲ್ಲಿಗೇ ಹೋಗುತ್ತಿದ್ದುದು. ಅಲ್ಲಿ ದತ್ತಾತ್ರೇಯ ಅವರ ಎದುರಿಗೆ ಮಾನವ ರೂಪದಲ್ಲಿ ಪ್ರಕಟವಾಗಿ ಅವರೊಂದಿಗೆ ಮಾತನಾಡುತ್ತಿದ್ದನು.

ಕೊತ್ವಾಲನ ಕೆಲಸಮಾಡುತ್ತಾ ಅವರು ಭಗವಂತನ ಪರಮಭಕ್ತರಾಗಿ ಜನಗಳಿಗೂ ಭಕ್ತಿಯ ಉಪದೇಶ ಮಾಡುತ್ತಿದ್ದರು. ಅವರ ಶಿಷ್ಯರಲ್ಲಿ ಹಿಂದುಗಳಲ್ಲದೆ ಅನೇಕ ಮುಸ್ಲಿಮರೂ ಇದ್ದರು. ಅಂದಿನ ಕಾಲದ ಪದ್ಧತಿಗೆ ಅನುಸಾರವಾಗಿ ಅವರು ಉದ್ದವಾದ ಗಡ್ಡ ಹಾಗೂ ಕೂದಲನ್ನು ಬಿಟ್ಟಿದ್ದರು. ಮತ್ತೆ

ಯಾವಾಗಲೂ ಯುದ್ಧಕ್ಕಾಗಿ ಸಿದ್ಧರಿದ್ದರು.

ಗುರುವಾರ ಅವರಿಗೆ ಪೂಜೆ ಮತ್ತು ಉಪದೇಶಗಳ ದಿನವಾದ್ದರಿಂದಲೇ ಮುಸ್ಲಿಮ್ ಶಾಸಕರು ಗುರುವಾರವನ್ನು ರಜೆಯ ದಿನವಾಗಿ ಘೋಷಿಸಿದ್ದರು. ಅವರೂ ಸಹ ಹಿಂದೂಗಳಂತೆಯೇ ಜನಾರ್ದನಸ್ವಾಮಿಯನ್ನು ಗೌರವಿಸುತ್ತಿದ್ದರು. ಸ್ವಾಮಿಗಳು ಉಪನ್ಯಾಸಮಾಡುವ ಸೂರ್ಯಕುಂಡದಲ್ಲಿ ಜನ ಭಾರೀ ಸಂಖ್ಯೆಯಲ್ಲಿ ಸೇರುತ್ತಿದ್ದರು.

ಅವರ ಮೂವರು ಪ್ರಮುಖ ಶಿಷ್ಯರಲ್ಲಿ ಸಂತ ಏಕನಾಥರು ಸರ್ವಾಧಿಕ ಖ್ಯಾತಿಯನ್ನು ಸಂಪಾದಿಸಿದರು, ಉಳಿದಿಬ್ಬರು—ರಾಮಜನಾರ್ದನ ಮತ್ತು ಜನೀಜನಾರ್ದನ. ಸಂತ ಏಕನಾಥರು ಅವರ ಶಿಷ್ಯತ್ವಸ್ವೀಕರಿಸಿ ಬಹಳ ದಿನಗಳ ವರೆವಿಗೆ ಸೂರ್ಯಕುಂಡವಲ್ಲಿ ತಪಶ್ಚರ್ಯೆಮಾಡಿದರು. ಒಮ್ಮೆ ಅವರು ಏಕನಾಥರೊಡನೆ ನಾಸಿಕಕ್ಕೆ ಹೋದಾಗ ಚಂದ್ರಬೋಧರೆಂಬ ಬ್ರಾಹ್ಮಣನೊಬ್ಬರೊಡನೆ ಭೇಟಿಯಾಯಿತು. ಕೃಷ್ಣಭಕ್ತ ಚಂದ್ರಬೋಧರು ಅವರೊಡನೆ ಭಾಗವತದ ಚರ್ಚೆ ಮಾಡಿದರು. ಜನಾರ್ಧನಸ್ವಾಮಿಯವರು ಚಂದ್ರಬೋಧರಿಂದ ಭಾಗವತದ ಅನುವಾದ ಮರಾಠಿಯಲ್ಲಿ ಮಾಡಲು ಒತ್ತಾಯ ಮಾಡಿದರು. ಇದನ್ನು ಅವರು ಸಹರ್ಷರಾಗಿ ಸ್ವೀಕರಿಸಿದರು. ಅನೇಕ ಮುಸ್ಲಿಮರೂ ಸಹ ಈ ಮರಾಠಿ ಅನುವಾದವನ್ನು ಬಹಳ ಪ್ರೀತಿಯಿಂದ ಓದಿದರು. ಚಂದ್ರಬೋಧರ ನಿಧನಾನಂತರ ದೇವಗಿರಿಯಲ್ಲಿ ಅವರ ಸಮಾಧಿಯ ಸ್ಥಾಪನೆಮಾಡಿದರು.

• ಏಕನಾಥರ ಪ್ರಾರ್ಥನೆಯ ನಂತರ ಜನಾರ್ದನಸ್ವಾಮಿ ಪ್ರತಿ ಗೋಕುಲಾಷ್ಟಮಿಯಲ್ಲಿ ಇವ್ವಕ್ಕಿದ್ದಂತೆ ಬರುತ್ತಿದ್ದರಲ್ಲದೆ ಸಮಾರಂಭದಲ್ಲಿ ಭಾಗವಹಿಸುತ್ತಿದ್ದರು.

ಜನಾರ್ದನಸ್ವಾಮಿ ಪರಿಪೂರ್ಣ ಭಕ್ತ ಹಾಗೂ ಸಂತರಾಗಿದ್ದರು. ಎಲ್ಲ ಪ್ರಾಣಿಗಳನ್ನು ಸಮಾನರೂಪದಿಂದ ಪ್ರೀತಿಸುತ್ತಿದ್ದರು. ಮಹಾರಾಷ್ಟ್ರದ ಅಗ್ರ ಸಂತರಲ್ಲಿ ಅವರು ಗಣನೀಯರಾಗಿದ್ದಾರೆ.

ತಮ್ಮ ಅಂತಿಮ ದಿನಗಳಲ್ಲಿ ಅವರು ಇಡೀ ದಕ್ಷಿಣದ ಯಾತ್ರೆ ಮಾಡಿದ್ದರು, ಮತ್ತೆ ಕರಾಬಂದಿಯ ಧೌಮಿಯಾ ಆಶ್ರಮ ಹಾಗೂ ಮಲ್ಲಿಕಾರ್ಜುನ ಮುಂತಾದ ಪ್ರಖ್ಯಾತ ತೀರ್ಥಕ್ಷೇತ್ರಗಳಲ್ಲಿ ಸಾಕಷ್ಟು ಕಾಲವನ್ನು ಕಳೆದರು.

ಆಗಾಗ್ಗೆ ಅವರು ತಮ್ಮ ಸೂಕ್ಷ್ಮ ಹಾಗೂ ಆತ್ಮಿಕ ಶರೀರದ ಮೂಲಕವೂ ಪ್ರವಾಸಮಾಡುತ್ತಿದ್ದರು. ಅವರ ಜೀವನ ಒಬ್ಬ ನಿಜವಾದ ಕರ್ಮಯೋಗಿಯ ಜೀವನವಾಗಿತ್ತು. ಅವರ ಆಪ್ತ ಶಿಷ್ಯ ಏಕನಾಥರೂ ಸಹ ಅವರನ್ನು ಅನುಸರಿಸಿ

ಕರ್ಮಯೋಗಿಯ ಜೀವನವನ್ನು ಕಳೆದರಲ್ಲದೆ ತಮ್ಮ ಅನುಯಾಯಿಗಳಿಗೂ ಹಾಗೆಯೇ ಮಾಡಲು ಉಪದೇಶ ಕೊಡುತ್ತಿದ್ದರು.

ಅವರ ಜೀವನ-ವೃಕ್ಷದಲ್ಲಿ ಅರಳಿದ ಭಕ್ತಿ-ಪುಷ್ಪಗಳು, ಅವರ ಅಭಂಗಗಳಲ್ಲಿ ಸಿಗುತ್ತವೆ. ತಮ್ಮ ಅಭಂಗಗಳಲ್ಲಿಯೂ ಅವರು ಕರ್ಮಯೋಗದ ಮೇಲೆ ಒತ್ತಾಯ ಮಾಡಿದ್ದಾರೆ. ಒಬ್ಬ ನಿಜವಾದ ಕರ್ಮಯೋಗಿ ತನ್ನ ಸಾಂಸಾರಿಕ ಕರ್ತವ್ಯಗಳ ಪಾಲನೆ ಮಾಡುತ್ತಲೂ ಭಕ್ತಿಯ ಪಥದಲ್ಲಿ ಮುಂದುವರಿಯುವ ಬಗೆಯನ್ನು ಅವರು ತಿಳಿಸಿದ್ದಾರೆ.

ಅವರ ಉಪನ್ಯಾಸಗಳಿಂದ ಹೆಚ್ಚು, ಅವರ ಸಾಮೀಪ್ಯದಲ್ಲಿ ಶಾಂತಿ ಮತ್ತು ಪ್ರೇಮದ ಮಳೆ ಸುರಿಯುತ್ತದೆಂದು ಅವರ ಭಕ್ತರ ಹೇಳಿಕೆಯಾಗಿತ್ತು.

ಅವರ ಉಪದೇಶಗಳಲ್ಲಿ ಶಾಸ್ತ್ರೀಯತೆ ಮತ್ತು ಸಿದ್ಧಾಂತಗಳ ಒತ್ತಡ ನಿಜವಾಗಿಯೂ ಇರಲಿಲ್ಲ. ಎಲ್ಲ ಉಪನ್ಯಾಸಗಳಲ್ಲಿ ಒಂದು ಜೀವಂತ ಪ್ರವಾಹವಿತ್ತು.

ಅವರ ವಿಶಿಷ್ಟವಾದ ಹಾಗೂ ಅದ್ವಿತೀಯವಾದ ಅಭಂಗಗಳು ನಿತ್ಯ ಸತ್ಯ. ಅನುಭವದ ಒರೆಗಲ್ಲಿನಲ್ಲಿ ಸಾವಿರಾರು ಬಾರಿ ತಿಕ್ಕಲ್ಪಟ್ಟು ಚೊಕ್ಕವಾದುವುಗಳು. ಅದರಿಂದಲೇ ಅವು ಇಂದಿಗೂ ಕೇಳುಗರನ್ನು ಮುಟ್ಟುತ್ತವೆ. ಅವು ಅಲುಗಾಡಿಸುತ್ತವೆ ಮತ್ತು ಎಚ್ಚರಗೊಳಿಸುತ್ತವೆ.

ಅವರು ೧೬೫೦ರಲ್ಲಿ ತಮ್ಮ ೪೧ನೇ ವಯಸ್ಸಿನಲ್ಲಿ ಮಹಾ ಸಮಾಧಿಯನ್ನು ಪಡೆದರು.

ಸುಮಿತ್ರಾ ಮಹಾಪಾತ್ರ



ಸುಧಾರಣೆಯು ಜೀವನದ ಮಾರ್ಗವನ್ನು ಸುಗಮಗೊಳಿಸುತ್ತದೆ.

—ವಿಲಿಯಂ ಬ್ಲೇಕ್

ಪುಸ್ತಕ ವಿಮರ್ಶೆ

ಸಿಂಗಾರ—ಡಾ|| ಹಾ. ಮಾ. ನಾಯಕ; ಉಷಾ ಸಾಹಿತ್ಯ ಮಾಲೆ, ಮೈಸೂರು-೫; ಪುಟಗಳು : ೧೫೬+೧೦; ಬೆಲೆ : ೧೨ರೂ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಸರಾಂತ ಹನ್ನೆರಡು ಲೇಖಕರ ಕೃತಿಗಳಿಗೆ ಡಾ|| ಹಾ.ಮಾ. ನಾಯಕರು ಬರೆದ ಮುನ್ನುಡಿಗಳ ಸಂಕಲನ ಗ್ರಂಥ 'ಸಿಂಗಾರ.' ಈ ಹನ್ನೆರಡು ಕೃತಿಗಳು ೧) ಚದುರಂಗ ಅವರ 'ಚದುರಂಗದ ಕಥೆಗಳು', ೨) ಬೆಸಗರಹಳ್ಳಿ ರಾಮಣ್ಣನವರ 'ನೆಲದ ಒಡಲು', ೩) ಎಂ. ರಾಮಕೃಷ್ಣ ಅವರ 'ತೇರು ಬಂತು ತೌರಿಗೆ', ೪) ಮಾವಿನಕೆರೆ ರಂಗನಾಥನ್ ಅವರ 'ಪರ್ಜನ್ಯ', ೫) ಎಸ್. ವಿ. ಪರಮೇಶ್ವರಭಟ್ಟರ 'ಉಪ್ಪುಕಡಲು', ೬) ಸಿದ್ದಯ್ಯ ಪುರಾಣಿಕರ 'ವಚನೋದ್ಯಾನ', ೭) ವಾಣಿ ಅವರ 'ನವನೀತ', ೮) ಕೃಷ್ಣಮೂರ್ತಿ ಪುರಾಣಿಕರ 'ರಾಧೇಯ ಮತ್ತು ರತಿ ವಿಲಾಸ', ೯) ನೀಲತ್ತಹಳ್ಳಿ ಕಸ್ತೂರಿ ಅವರ 'ಸಿದ್ದನಹಳ್ಳಿ ಕೃಷ್ಣಶರ್ಮ', ೧೦) ಹ.ವೆಂ. ನಾಗರಾಜರಾವ್ ಅವರ 'ಸೃಜನಶೀಲ', ೧೧) ಪಿ. ಆರ್. ತಿಪ್ಪೇಸ್ವಾಮಿ ಅವರ 'ಹೋರಾಟಗಾರ ಕೆಂಚಪ್ಪ', ೧೨) ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ಅಮೇರಿಕದಲ್ಲಿ ಗೊರೂರು'. ಇವುಗಳಲ್ಲಿ ನಾಲ್ಕು ಸಣ್ಣ ಕತೆಗಳ ಸಂಕಲನ, ಮೂರು ವಚನ ಸಂಗ್ರಹಗಳು, ಮೂರು ವ್ಯಕ್ತಿಚಿತ್ರಕ್ಕೆ ಸಂಬಂಧಿಸಿದ ಕೃತಿಗಳು, ಒಂದು ನಾಟಕ ಮತ್ತು ಒಂದು ಪ್ರವಾಸ ಕಥನಕ್ಕೆ ಬರೆದ ಮುನ್ನುಡಿಗಳಾಗಿವೆ.

ಈ ಮುನ್ನುಡಿಯ ಕೃತಿಗಳ ಕರ್ತೃಗಳಲ್ಲಿ ಹಾಮಾನಾ ಅವರ ಗುರುಗಳಿದ್ದಾರೆ, ಹಿರಿಯರಿದ್ದಾರೆ, ಗೆಳೆಯರಿದ್ದಾರೆ, ಕಿರಿಯರಿದ್ದಾರೆ. ಈ ಎಲ್ಲ ಲೇಖನಗಳಲ್ಲಿಯೂ ಹಾಮಾನಾ ಅವರ ಖಚಿತವಾದ ನೇರ ಅಭಿಪ್ರಾಯ ಪ್ರತಿಬಿಂಬಿತವಾಗಿದೆ. ಮುನ್ನುಡಿ ಎಂದರೆ ಬಾಯಿ ಉಪಚಾರಕ್ಕಾಗಿ ಕೇವಲ ನಾಲ್ಕು ಮಾತು ಹೇಳಿ ಮುಗಿಸುವುದು ಇವರ ಉದ್ದೇಶವಾಗಿರದೆ ಇಡೀ ಕೃತಿಯ ವಿಮರ್ಶೆಯಾಗಿರುವುದರ ಜೊತೆಗೆ ಆಯಾ ಸಾಹಿತ್ಯ ಪ್ರಕಾರಗಳ ಸಂಕ್ಷಿಪ್ತ ತೌಲನಿಕ ಅಧ್ಯಯನವೂ ಆಗಿದೆ.

ಚದುರಂಗ ಅವರ ಚದುರಂಗದ ಕಥೆಗಳು ಎಂಬ ಕೃತಿಗೆ ಬರೆದಿರುವ ಮುನ್ನುಡಿಯಲ್ಲಿ ಸಣ್ಣ ಕಥೆಗಳ ವಸ್ತು, ವ್ಯಾಪ್ತಿ ಮುಂತಾದುವನ್ನು ಕುರಿತು ನೀಡಿರುವ ಮಾಹಿತಿ ಬೆಲೆಬಾಳುವಂತಹದು. ಅಂತೆಯೇ ಎಸ್. ವಿ. ಪರಮೇಶ್ವರ ಭಟ್ಟರ ಉಪ್ಪುಕಡಲು ವಚನ ಸಂಗ್ರಹಕ್ಕೆ ಬರೆದಿರುವ ಮುನ್ನುಡಿಯಲ್ಲಿ ಆಧುನಿಕ ವಚನ

ಗಳನ್ನು ಕುರಿತು ಪ್ರಸ್ತಾಪ, ಇಂದಿನ ಹಾಗೂ ಹಿಂದಿನ ವಚನಗಳಿಗಿರುವ ರೂಪ ಸಾಮ್ಯದ ವಿವೇಚನೆ ಉಪಯುಕ್ತವಾದುದು.

ಬೆಸಗರಹಳ್ಳಿ ರಾಮಣ್ಣನವರ—ನೆಲದ ಒಡಲು ಕಥಾ ಸಂಕಲನಕ್ಕೆ ಮುನ್ನುಡಿ ಬರೆಯುತ್ತಾ "ಸಾಹಿತ್ಯ ಕ್ಷೇತ್ರಕ್ಕೆ ಅವರನ್ನು ಸ್ವಾಗತಿಸಿ, ಶುಭವನ್ನು ಕೋರುವುದು ನನಗೆ ಅತ್ಯಂತ ಸಂತೋಷದ ಸಂಗತಿಯಾಗಿದೆ. ಶ್ರೀ ರಾಮಣ್ಣನವರದು ಇನ್ನೂ ಅರಳುತ್ತಿರುವ ಕಥೆಗಾರಿಕೆ, ಇಲ್ಲಿರುವುದು ಏಳೇ ಏಳು ಕಥೆಗಳು ಇನ್ನೂ ಒಂದೆರಡನ್ನು ಅವರು ಬರೆದಿದ್ದಾರು ಅಷ್ಟೆ. ಇಷ್ಟರಲ್ಲಿಯೆ ಅವರ ಸೃಷ್ಟಿ ಶಕ್ತಿ ಒಂದು ಖಚಿತ ರೂಪವನ್ನು ಪಡೆಯಬೇಕೆಂದು ಬಯಸುವುದು ಸರಿಯಲ್ಲ. ಇದು ಅವರ ಮೊದಲನೆಯ ಸಂಕಲನ ಇನ್ನೂ ಬಹುದೊಡ್ಡ ಅವಕಾಶ ಅವರ ಎದುರು ಮೈಚೆಲ್ಲಿದೆ"—ಈ ಮಾತು ಹಿರಿಯ ಲೇಖಕರಿಂದ ಕಿರಿಯ ಲೇಖಕರಿಗೆ ಇಂದು ಅಗತ್ಯವಾಗಿದೆ. ಕಿರಿಯನನ್ನು ಕಂಡು ಹಿರಿಯರು ಮುಖ ತಿರುಗಿಸುವ ಸಂಪ್ರದಾಯ ಹೋದಾಗ ಸಾಹಿತ್ಯ ಪರಿಣಾಮಕಾರಿಯಾಗಿ ಬೆಳೆಯಲು ಆರೋಗ್ಯಕರ ವಾತಾವರಣ ಸೃಷ್ಟಿ ಆಗುವುದು.

ಡಾ|| ಹಾಮಾನಾ ಅವರು ತಮ್ಮ ಲೇಖನಗಳಲ್ಲಿ ಒಳ್ಳೆಯದನ್ನು ಕಂಡು ಪ್ರಶಂಸಿಸುವುದರ ಜೊತೆಗೆ ದೋಷ ಗುರುತಿಸಿ ತಿದ್ದುವುದನ್ನು ಮರೆಯುವುದಿಲ್ಲ. ಯಾವುದೇ ಕೃತಿಯ ವಿಮರ್ಶೆಗೆ ಈ ಎರಡೂ ಗುಣಗಳೂ ಅಗತ್ಯವಾಲ್ಲವು.

'ಸಿಂಗಾರ' ಕೃತಿಯ ಮೊದಲ ಮಾತಿನಲ್ಲಿ "ಪ್ರಸ್ತುತ ಪುಸ್ತಕದಲ್ಲಿ ನಾನು ಬರೆದ ಎಲ್ಲ ಮುನ್ನುಡಿಗಳೂ ಸೇರಿಲ್ಲ. ಕೇವಲ ಹನ್ನೆರಡನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಮಿಕ್ಕವನ್ನು ಇಂಥ ಹನ್ನೆರಡು ಸಂಪುಟಗಳಲ್ಲಿ ಪ್ರಕಟಿಸುವ ಆಲೋಚನೆ ಇದೆ." ಎಂದು ತಿಳಿಸಿದ್ದಾರೆ. ಹಾಮಾನಾ ಅವರ ಈ ಯೋಜನೆ ಶೀಘ್ರದಲ್ಲಿ ಕಾರ್ಯಗತವಾದರೆ ಕನ್ನಡ ಸಾಹಿತ್ಯಕ್ಕೆ ಹೆಚ್ಚು ಪ್ರಯೋಜನವಾಗುತ್ತದೆ. 'ಸಿಂಗಾರ' ಅ. ನ. ಕೃಷ್ಣರಾಯರ ನೆನಸಿನ ಕೃತಿಯಾಗಿದೆ.

ಚಂದ್ರಶೇಖರಾರಾಧ್ಯ

* * *

ಹೃದಯ ನಾದ—(ಕವನ ಸಂಕಲನ) ಕವಿ: ರುದ್ರನಾಥ ಕಲ್ಯಾಣಶೆಟ್ಟಿ; ಪ್ರಕಾಶಕರು: ಸ್ನೇಹ ಸುಧಾ ಪ್ರಕಾಶನ ನರಗುಂದ; ಪುಟ X + ೬೮ ಬೆಲೆ ೩ ರೂ.

"ಭಾವಭರಿತವಾದ, ವೈವಿಧ್ಯಮಯವಾದ ಇಪ್ಪತ್ತೆಂಟು ತಂತಿಗಳ ಗೀತ ಮೇಳ 'ಹೃದಯನಾದ'. ಕವಿ ರುದ್ರನಾಥ ಕಲ್ಯಾಣಶೆಟ್ಟಿಯವರ ಭಾವಭಾಷೆಗಳ ಮೈತ್ರಿ, ಅನಿಸಿಕೆಗಳ ಅಂದದ ಅಭಿವ್ಯಕ್ತಿ, ಎತ್ತರ ನಿಲುವು, ಗೇಯದೋಲವು,

ಶ್ಲಾಘನೀಯವಾದವುಗಳು. ತುಂಬು ಚಿಂತನದ, ಬಾಳದರ್ಶನದ ಇಲ್ಲಿನ ನವೋದಯ ಗೀತಗಳು ಕನ್ನಡಿಗರಿಗೆ ಭರವಸೆ ನೀಡಿವೆ."

ಖ್ಯಾತ ಸಾಹಿತಿಗಳಾದ ಶ್ರೀ ಸಾ.ಸಿ. ಮರುಳಯ್ಯ ಅವರ ಮುನ್ನುಡಿಯ ರನ್ನಗನ್ನಡಿಯಲ್ಲಿ ಮೂಡಿಬಂದ ಈ ಸತ್ವಯುತ ನುಡಿಗಳು ರುದ್ರನಾಥರ 'ಹೃದಯ ನಾದ'ದ ನಾಡಿಗಳನ್ನು ಪರೀಕ್ಷಿಸಿ ನೀಡಿದ ನಿರ್ಣಯದ ಸುಂದರ ನಕ್ಷೆಯ ವರ್ಣರೇಖೆಗಳಾಗಿವೆ.

ಎರಡು ದಶಕಗಳಿಂದ ಸಾಧನೆಯ ಹಾದಿಯಲ್ಲಿ ಸಾಗಿದ ಕವಿಯ ಹೃದಯಗೈದ ನಾದದ ಮೋದವನ್ನೆಲ್ಲ ಈ ಸಂಕಲನದಲ್ಲಿ ಪ್ರಕಾಶಪಡಿಸಲಾಗಿದೆ.

ರಾಷ್ಟ್ರೀಯ ಮನೋಭಾವ ಪ್ರೇರಿತನಾದ, ಸಾಮಾಯಿಕ ಪ್ರಜ್ಞೆಯಿಂದ ಪ್ರಚೋದಿತನಾದ ಪ್ರತಿಭಾವಂತ ಕವಿಯ ಹೃದಯದಲ್ಲಿ ಝೇಂಕರಿಸುವ ನಾದ ಅಭಿವ್ಯಕ್ತಿಯ ಶಕ್ತಿಯಿಂದ ಪರಿಣಾಮಕಾರಿ ಕಾವ್ಯವಾಗಿ ಹೇಗೆ ರೂಪುಗೊಂಡಿದೆಯೆಂಬುವನ್ನು ಶ್ರೀ ರುದ್ರನಾಥರ 'ಹೃದಯ ನಾದ' ಸಂಕಲನ ಸ್ಫುಟವಾಗಿ ತೆರೆದು ತೋರಿಸಿದೆ.

ಉಳುವೀಶಸ್ವಾಮಿ ಹುಲೆಪ್ಪನವರ ಮಠ

* * *

ತಳಗವಾದಿ ಮಲ್ಲವ್ವ ಹೇಳಿದ ಪರಸಂಗಗಳು — ಸಂಪಾದಕರು: ಪ್ರೊ|| ಕಾಶಿಪುಟ್ಟ ಸೋಮಾರಾಧ್ಯ ಮತ್ತು ಡಾ|| ವೀರಣ್ಣ ರಾಜೂರ, ಪ್ರಕಾಶಕರು: ಮಂಗಳ ಪ್ರಕಾಶನ ಕಲ್ಯಾಣನಗರ, ಧಾರವಾಡ. ಪುಟ: ೩೬+೨೨೬, ಬೆಲೆ: ೨೦ರೂ. ಮೊದಲ ಮುದ್ರಣ ೧೯೮೨.

ಶ್ರೀ ಕಾಶಿಪುಟ್ಟ ಸೋಮಾರಾಧ್ಯ ಮತ್ತು ಡಾ|| ವೀರಣ್ಣ ರಾಜೂರ ಅವರು ಸಂಪಾದಿಸಿದ ಮೇಲಿನ ಪುಸ್ತಕ ಜಾನಪದ ಸಾಹಿತ್ಯಕ್ಕೊಂದು ವೈಶಿಷ್ಟ್ಯಪೂರ್ಣ ಕೊಡುಗೆ. ಮಂಡ್ಯ ಜಿಲ್ಲೆಯ ಈ ಜಾನಪದ ಕಥೆಗಳು ಶ್ರೀಮತಿ ತಳಗವಾಡಿ ಮಲ್ಲವ್ವ ಅವರ ಬಾಯಿಂದ ಬಂದವುಗಳು. ಅಂದರೆ ಈ ಮೊದಲು ಇವು ಎಲ್ಲೂ ಪ್ರಕಟವಾಗಿರದವು.


ಇಂದು ಜಾನಪದ ಕಥೆಗಳು ಹಳೆ ತಲೆಮಾರಿನ ಜನರೊಂದಿಗೇ ಕಣ್ಮರೆಯಾಗಿ ಹೋಗುತ್ತಿವೆ. ಆಧುನಿಕ ಕಥೆ-ಕಾದಂಬರಿಗಳ ಯುಗವೆನ್ನಿಸಿದ ಇಂದು ಇಂಥ ಕಥೆಗಳನ್ನು ಮೆಚ್ಚುವವರೂ ಕಡಿಮೆಯೆಂದೇ ಹೇಳಬೇಕು. ಆದರೆ ಆ ಕಥೆಗಳಲ್ಲಿರುವ ಸ್ವಾರಸ್ಯ, ಶಕ್ತಿ, ಹಿತೋಪದೇಶಗಳು ಆಧುನಿಕ ಕಥೆಗಳಲ್ಲಿ ಎಲ್ಲಿ ಬರಬೇಕು ? ಜಾನಪದ ಕಥೆಗಳು ನಮ್ಮ ಕಲ್ಪನೆಗೂ ಮೀರಿದ ಘಟನೆಗಳನ್ನೊಳ

ಗೊಂಡಿದ್ದರೂ ಅವನ್ನು ಕೇಳುವ ಮಕ್ಕಳ ಆಸಕ್ತಿ ಕಡಿಮೆಯೇನಲ್ಲ. ಅತಿಮಾನುಷ ಘಟನೆಗಳು ಮಕ್ಕಳನ್ನು ರೋಮಾಂಚನಗೊಳಿಸುತ್ತವೆ. ಕೆಲವು ಅತಿಯಾದ ಅಶ್ಲೀಲವಾಗಿಯೂ ತೋರಬಹುದು. ಆದರೆ ಅದು ಕಥೆಗೆ ಪೂರಕವಾಗಿರುವದರಿಂದ ಕ್ಷಮ್ಯವಾಗಿಯೇ ಇರುತ್ತದೆ.

ಪ್ರಸಕ್ತ "ಪರಸಂಗಗಳು"ನಲ್ಲಿಯ ಕಥೆಗಳಲ್ಲೂ ಅತಿಮಾನುಷ, ಮಾಂತ್ರಿಕ, ನಲ್ಮೆಯ ಘಟನೆಗಳಿವೆ. ಕೆಲವು ರೋಮಾಂಚನಗೊಳಿಸುತ್ತವೆ, ಕೆಲವು ನಗೆ ಬರಿಸುತ್ತವೆ. ಅವನ್ನು ಓದಿ "ಇದೆಲ್ಲ ಸಾಧ್ಯವೆ? ನಿಜವೆ?" ಎಂದು ನಾವು ಪ್ರಶ್ನಿಸಿಕೊಳ್ಳಬೇಕಾದ ಅವಶ್ಯಕತೆಯಿಲ್ಲ. ಯಾಕೆಂದರೆ ಅವೆಲ್ಲ ಕಾಲ್ಪನಿಕ ಎನ್ನುವದು ನಮಗೆ ಗೊತ್ತು. ಮುಖ್ಯವೆಂದರೆ ಒಬ್ಬ ಹಿರಿಯ ತಾಯಿ ಇವೆಲ್ಲವನ್ನೂ ನೆನಪಿನಲ್ಲಿಟ್ಟುಕೊಂಡದ್ದು ಮುಖ್ಯ. ಆದರೆ ಇವು ಮಲ್ಲವ್ವನೊಡನೆಯೇ ಪರಿಸಮಾಪ್ತಿಗೊಳ್ಳದೆ ಅವೆಲ್ಲವನ್ನೂ ಸಂಗ್ರಹಿಸಿದ ಶ್ರೀಮತಿ ಸರೋಜ ನಟರಾಜ ಅವರ ಉಪಕಾರ ದೊಡ್ಡದು. ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದ ಸಂಪಾದಕದ್ವಯರನ್ನು ಕನ್ನಡಿಗರು ಅಭಿನಂದಿಸಲೇಬೇಕು. ಡಾ|| ಜೀ.ಶಂ.ಪ. ಅವರು ಬರೆದ ಅಭ್ಯಾಸಪೂರ್ಣ ಮುನ್ನುಡಿ ಈ ಕೃತಿಗೆ ತಿಲಕಪ್ರಾಯವಾಗಿದೆ.

'ಪರಸಂಗಗಳು' ಪುಸ್ತಕ ತುಂಬಾ ಚೆನ್ನಾಗಿ ಮೈದಳೆದು ಬಂದಿರುವದು ಸಂತೋಷದ ಸಂಗತಿ. ಒಬ್ಬ ಅಮಾಯಕ ತಾಯಿ ಶ್ರೀಮತಿ ತಳಗವಾದಿ ಮಲ್ಲಮ್ಮನನ್ನು ಸಾರಸ್ವತ ಪ್ರಪಂಚಕ್ಕೆ ಪ. ಚಯಿಸಿದ್ದಕ್ಕಾಗಿ ಸಂಪಾದಕರಿಗೆ ಧನ್ಯವಾದಗಳು.

ದಯಾನಂದ ತೊರ್ಕೆ



ಇತರರಲ್ಲಿ ಕಾಣುವ ಕೊರತೆಗಳನ್ನು ನಮ್ಮಲ್ಲಿಯೂ ಕಾಣಬಹುದು. ಆದರೆ ನಾವು ಬಹಿರ್ ದೃಷ್ಟಿಯಿಂದ ನೋಡುತ್ತಿರುವದರಿಂದ, ಅಂತರ್ ದೃಷ್ಟಿಗೆ ಗೋಚರವಾಗುವ ನಮ್ಮತನ, ನಮಗೆ ಅರಿವಾಗುವುದಿಲ್ಲ.

—ಲಾಮ್ರುಯೆರ್

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ: ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಕೃಷ್ಣಮೂರ್ತಿಪುರಂ : : ಮೈಸೂರು - ೪

Reg. No. KRNN. 29 / WPP 6

LICENSE No. 21
LICENSED TO POST WITHOUT PREPAYMENT

ನೀವು ಓದಲೇಬೇಕಾದ ಪುಸ್ತಕಗಳು.....

[illegible] ...ಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ವಿದ್ಯಾಪೀಠಗಳು

ಶ್ರೀ ಶಂಕರಾಚಾರ್ಯ

ಆಂಡರ್‌ಸನ್ ಮತ್ತು ಇತರ ಕತೆಗಳು

ನಳಚರಿತ್ರೆಯ ಸಂಗ್ರಹ

ಗ್ರಂಟ್ವಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

Edited by R. Boraiah, Printed by H. G. Ramaswamy Iyengar Manager at Karnataka State Adult Education Council Press and Published by Karnataka State Adult Education Council Mysore city (India)